
ಸಾಮಾಜಿಕ ಬದಲಾವಣೆಯಲ್ಲಿ ಸುಡುಗಾಡು ಸಿದ್ಧರು
(ಸೇಡಂ ತಾಲೂಕನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್(ಸಮಾಜಶಾಸ್ತ್ರ) ಪದವಿಗಾಗಿ ಸಲ್ಲಿಸಿದ ನಿಬಂಧ)



ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬
೨೦೧೫

ಸಾಮಾಜಿಕ ಬದಲಾವಣೆಯಲ್ಲಿ ಸುಡುಗಾಡು ಸಿದ್ಧರು

(ಸೇಡಂ ತಾಲೂಕನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್(ಸಮಾಜಶಾಸ್ತ್ರ) ಪದವಿಗಾಗಿ ಸಲ್ಲಿಸಿದ ನಿಬಂಧ)

ಸಂಶೋಧಕರು
ನಾಗಪ್ಪ ಕಾಮಣ್ಣ

ಮಾರ್ಗದರ್ಶಕರು
ಡಾ. ಗಂಗಾಧರ ದೈವಜ್ಞ
ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

೨೦೧೪-೨೦೧೫

<u>ಮಾರ್ಗದರ್ಶಕರ ಪ್ರಮಾಣ ಪತ್ರ</u>

"ಸಾಮಾಜಿಕ ಬದಲಾವಣೆಯಲ್ಲಿ ಸುಡುಗಾಡು ಸಿದ್ಧರು" (ಸೇಡಂ ತಾಲೂಕನ್ನು ಅನುಲಕ್ಷಿಸಿ) ಎಂಬ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್ (ಸಮಾಜಶಾಸ್ತ್ರ) ಪದವಿಗಾಗಿ **ನಾಗಪ್ಪ ಕಾಮಣ್ಣ** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಸಂಪ್ರಬಂಧವು [illegible] ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ:
ಸ್ಥಳ: ವಿದ್ಯಾರಣ್ಯ

(ಡಾ. ಗಂಗಾಧರ ದೈವಜ್ಞ)
ಮಾರ್ಗದರ್ಶಕರು ಮತ್ತು ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಸಂಶೋಧಕರ ಪ್ರಮಾಣ ಪತ್ರ

ಸಾಮಾಜಿಕ ಬದಲಾವಣೆಯಲ್ಲಿ ಸುಡುಗಾಡು ಸಿದ್ಧರು (ಸೇಡಂ ತಾಲೂಕನನ್ನೂ ಅನುಲಕ್ಷಿಸಿ) ಎಂಬ ಸಂಪ್ರಬಂಧವನ್ನು **ಡಾ.ಗಂಗಾಧರ ದೈವಜ್ಞ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಎಂ.ಫಿಲ್(ಸಮಾಜಶಾಸ್ತ್ರ) ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು. ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ ಎಂದು ಪ್ರಮಾಣಿಕರಿಸುತ್ತೇನೆ.

ದಿನಾಂಕ:
ಸ್ಥಳ: ವಿದ್ಯಾರಣ್ಯ

(ನಾಗಪ್ಪ ಕಾಮಣ್ಣ)
ಸಂಶೋಧಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಪ್ರಸ್ತಾವನೆ

ಜಗತ್ತಿನ ಹಲವಾರು ಬುಡಕಟ್ಟುಗಳ ಅಧ್ಯಯನ ಮನಶಾಸ್ತ್ರಜ್ಞರು ಮತ್ತು ಸಂಶೋಧಕರು ಕಾರ್ಯ ಮಾಡಿದ ಒಂದು ಹಂತ ಮುಗಿಯುತ್ತಿದಂತೆ, ಬುಡಕಟ್ಟುಗಳ, ಜನಜೀವನ, ಅದರ ಸ್ವರೂಪ, ಲಕ್ಷಣ, ಪ್ರಸಾರ ಮತ್ತು ಅವರ ಸಂಸ್ಕೃತಿಯನ್ನು ತಿಳಿದುಕೊಳ್ಳುವ ಕೆಲಸ ಪ್ರಾರಂಭವಾಯಿತು. ಈ ಮೇಲಿನ ಒಂದೊಂದು ಕ್ಷೇತ್ರವು ತನ್ನದೇ ಆಗಿರುವ ವಿಧಾನ ಮತ್ತು ತಂತ್ರಗಳನ್ನು ಗಮನದಲ್ಲಿರಿಸಿಕೊಂಡು ಅಧ್ಯಯನ ಮಾಡುತ್ತಿರುವುದು ಸಾಮಾನ್ಯ ಸಂಗತಿಯಾಗಿದೆ. ಕರ್ನಾಟಕದಲ್ಲಿ ಸುಡುಗಾಡು ಸಿದ್ಧರು ಎಂಬ ಬುಡಕಟ್ಟಿನ ಬದುಕಿನಬಗ್ಗೆ ಪೂರ್ಣ ಪ್ರಮಾಣದ ಮಾಹಿತಿಯನ್ನು ತಿಳಿದುಕೊಳ್ಳಬೇಕಾದರೆ ಅವರ ಪ್ರತಿಯೊಂದು ಹಂತವನ್ನು ಕೂಲಂಕಷವಾಗಿ ಅಧ್ಯಯನ ಮಾಡಬೇಕಾಗುತ್ತದೆ. ಜೊತೆಗೆ ಅದಷ್ಟು ಒಂದು ಬುಡಕಟ್ಟು ಇತರ ಜಾತಿಗಳೊಂದಿಗೆ ಬೆರೆಯದೆ ಇರುವಾಗಲೇ ಅಥವಾ ನಾಗರೀಕತೆಯ ಪ್ರಭಾವಕ್ಕೊಳಗಾಗದ ಪೂರ್ವದಲ್ಲಿಯೇ ಅದಷ್ಟು ಬೇಗ ಕಾರ್ಯ ತತ್ಪರರಾಗುವುದು ತುಂಬ ಒಳ್ಳೆಯ ಸಂಗತಿ.

ವಿಶಿಷ್ಟ ಸಂಸ್ಕೃತಿ ಮತ್ತು ಪರಂಪರೆಯನ್ನು ಹೊಂದಿರುವ ಸುಡಗಾಡು ಸಿದ್ಧರು ಹಲವಾರು ಶತಮಾನಗಳು ಕಳೆದರೂ ಕೂಡ ಯಾವುದೇ ಬದಲಾವಣೆ ಹೊಂದಿಲ್ಲವೆಂದು ಹೇಳಬಹುದು. ಇವರ ಅನನ್ಯತೆಯ ಪ್ರತಿಕಗಳಾದ ಆಚಾರ, ವಿಚಾರ, ಪರಂಪರೆ, ಸಂಪ್ರದಾಯ, ಮದುವೆ, ಮುಂಜಿ ಹಾಗೂ ರೀತಿ–ನೀತಿಗಳು ಬಹು ವಿಶಿಷ್ಟವಾಗಿವೆ. ಶತಮಾನಗಳಿಂದ ಕರ್ನಾಟಕದಲ್ಲಿ ಬಂದು ನೆಲೆಸಿದ್ದರೂ ಅವರ ಮನೆಮಾತು ತೆಲುಗು ಇನ್ನೂ ಅವರಲ್ಲಿ ಉಳಿದುಕೊಂಡಿದೆ. ಮೌಖಿಕ ಪರಂಪರೆಯಲ್ಲಿ ಉಳಿದು ಬಂದಿರುವ ಈ ಜನರ ಸಾಹಿತ್ಯ, ಕಲೆ, ಸಂಸ್ಕೃತಿ ಹಾಗೂ ಜೀವನ ವಿಧಾನಗಳ ಬಗೆಗೆ ಮಾನವ ವಿಜ್ಞಾನಿಗಳಾಗಲಿ ಇಲ್ಲವೆ ಜಾನಪದ ವಿಜ್ಞಾನಿಗಳಾಗಲಿ ಯಾರೂ ಇದುವರೆಗೆ ಸಮಗ್ರವಾಗಿ ಅಧ್ಯಯನ ಕೈಗೊಳ್ಳದಿರುವುದು ಆಶ್ಚರ್ಯದ ಸಂಗತಿಯಾಗಿದೆ.

ಅಧ್ಯಯನದ ಉದ್ದೇಶ:

ಬುಡಕಟ್ಟು ಸಂಸ್ಕೃತಿಯಲ್ಲಿ ಸುಡಗಾಡು ಸಿದ್ಧರ ಸೃಷ್ಟಿಪುರಾಣದ ಹಿಂದೆ ಅನೇಕ ಕಥೆಗಳು, ಹುಟ್ಟಿಕೊಂಡಿವೆ. ಸುಡಗಾಡು ಸಿದ್ಧರು ಎಂದು ಕರೆಯಲು ಇವರ ಬಗ್ಗೆ ಇರುವಂಥಹ ಅನೇಕ ವಿಚಾರಗಳು ನಂಬಿಕೆಗಳೇ ಕಾರಣವೆಂದು. ಇವರ ಮೇಲೆ ದಬ್ಬಾಳಿಕೆ, ಸ್ತ್ರೀ ಶೋಷಣೆ, ಮಾಟ ಮಂತ್ರಗಳು ಅನೇಕ ಮೂಢನಂಬಿಕೆಗಳನ್ನು ಜಾಧು, ಮಾಡುವುದು ಅನೇಕ ಕಲೆಗಳನ್ನು

ನಂಬಿದ ಗುಡಗಾಡು ಸಿದ್ಧರ ಆಧುನಿಕ ಜೀವನಕ್ಕೆ ಬದಲಾವಣೆ ತರುವುದೇ ಈ ಅಧ್ಯಯನದ ಪ್ರಮುಖ್ಯ ಉದ್ದೇಶವಾಗಿದೆ.

೧. ಸುಡಗಾಡು ಸಿದ್ಧರ ತೌಲನಿಕ ಅಧ್ಯಯನ ಮಾಡುವುದು.

೨. ಸುಡಗಾಡು ಸಿದ್ಧರ ಆರಾಧಿಸುವಂತಹ ಸಂಪ್ರದಾಯ ಆಚಾರಣೆಗಳನ್ನು ಪ್ರಸ್ತುತ ವಿದ್ಯಮಾನಕ್ಕೆ ಪರಿಚಯ ಮಾಡುವುದು.

೩. ಸುಡಗಾಡು ಸಿದ್ಧರ ಅಸ್ತಿತ್ವನ್ನು ಪುನರ್ ಸ್ಥಾಪಿಸುವಂತಹ ಅನೇಕ ಘಟನೆಗಳು ನಡೆದಿವೆ. ಆದರೆ ಅದೇ ಪವಾಡ, ಮಾಟ, ಮಂತ್ರ, ಮಹಿಳೆಯರನ್ನು ಅಪಹರಿಸುವಂತಹ ಅನೇಕ ಘಟನೆಗಳು ಇದ್ದು ಅವು ಇಂದಿಗೂ ಮರುಕಳಿಸುತ್ತ ಬಂದಿವೆ. ಇಂತಹ ಅನೇಕ ಘಟನೆಗಳನ್ನು ಪ್ರಸ್ತುತ ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ಅಧ್ಯಯನದ ವ್ಯಾಪ್ತಿ:

ಸಂಶೋಧಕನು ಒಂದು ಅಧ್ಯಯನವನ್ನು ಪರಿಪೂರ್ಣವಾಗಿ ಅಥವಾ ಸ್ಪಷ್ಟ ಮತ್ತು ವಸ್ತು ನಿಷ್ಠವಾಗಿ ಎಲ್ಲಾ ಅಂಶಗಳನ್ನು ಒಳಗೊಂಡಂತೆ ಸಂಶೋಧನಾ ಕಾರ್ಯ ನಿರ್ವಹಿಸಬೇಕಾದರೆ ಅಧ್ಯಯನಕ್ಕೊಂದು ನಿರ್ದಿಷ್ಟವಾದ ವ್ಯಾಪ್ತಿ ಸರಹದ್ದು ಅವಶ್ಯಕ. ಆಗ ಮಾತ್ರ ಆ ಕ್ಷೇತ್ರದಲ್ಲಿ ಯಶಸ್ಸು ಸಾಧಿಸಬಹುದು. ಈ ದೃಷ್ಟಿಯಿಂದ ಅಧ್ಯಯನದ ವ್ಯಾಪ್ತಿ ಬಹಳ ಮುಖ್ಯವಾಗಿ ಒಂದು ಕ್ಷೇತ್ರವನ್ನು ಮಾತ್ರ ಆಯ್ಕೆ ಮಾಡಿಕೊಳ್ಳಬೇಕು.

ಪ್ರಸ್ತುತ ಅಧ್ಯಯನಕ್ಕೆ ಬುಡಕಟ್ಟುಗಳಲ್ಲಿ **"ಸಾಮಾಜಿಕ ಬದಲಾವಣೆಯಲ್ಲಿ ಸುಡಗಾಡು ಸಿದ್ಧರು"** ಎಂಬ ಶೀರ್ಷಿಕೆ ಅಡಿಯಲ್ಲಿ ಸಂಶೋಧನೆಯನ್ನು ಕೈಗೊಳ್ಳಲಾಗಿದೆ.

ಸಮಾಜಿಕ ಬದಲಾವಣೆಯಲ್ಲಿ ಬರುವ ಕೆಲವು ಬುಡಕಟ್ಟುಗಳು ಪ್ರಸ್ತುತ ವಿದ್ಯಮಾನಕ್ಕೆ ಹೋಲಿಸಿ ನೋಡಲು ಈ ಸಂಶೋಧನೆಯನ್ನು ಕೈಗೊಳ್ಳಲಾಗಿದೆ. ಪ್ರಸ್ತುತ ಶೀರ್ಷಿಕೆಯನ್ನು ಕಲಬುರಗಿ ಜಿಲ್ಲೆಯ ಸೇಡಂ ತಾಲೂಕಿನ ವೆಂಕಟೇಶ ನಗರ, ರಾಮಗಡ, ಕಲಕಮ್ಮರೋಡ, ಶಾಂತಿನಗರ, ಕೋಡ್ಲ ಸುತ್ತಮುತ್ತಲಿನ ಗ್ರಾಮಗಳು ಈ ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗುವುದು.

ಕರ್ನಾಟಕದಲ್ಲಿ ಕಾಡು ಸಿದ್ಧರೆಂದು, ಸುಡುಗಾಡು ಸಿದ್ದರೆಂದು, ಆಂಧ್ರಪ್ರದೇಶದಲ್ಲಿ ಕಾಟಪಾಪುಲವೆಂದು ಮತ್ತು ಮಹಾರಾಷ್ಟ್ರದಲಿ ಗೌಳಿ ಸ್ಮಶಾನ ಜೋಗಿಗಳೆಂದು ಕರೆಯಿಸಿಕೊಳ್ಳುವ ಸಿದ್ಧರ ಗಂಡಸರು ಭಿಕ್ಷಾಟನೆಯಲ್ಲಿದ್ದಾಗ ಬಹು ಬೇಗ ಸುಡುಗಾಡು ಸಿದ್ಧರೆಂದು ಗುರುತಿಸಿಕೊಳ್ಳುತ್ತಾರೆ. ಕರ್ನಾಟಕದಲ್ಲಿ ವಾಸಿಸುತ್ತಿರುವ ೫೦ ಪರಿಶಿಷ್ಟ ಬುಡಕಟ್ಟುಗಳಲ್ಲಿ ಇವರು ಒಬ್ಬರಾಗಿದ್ದಾರೆ. ತಮ್ಮದೇ ಆಗಿರುವ ವಿಶಿಷ್ಟ ರೀತಿಯಲ್ಲಿ ಬದುಕು ಸಾಗಿಸುವ ಇವರನ್ನು ಕರ್ನಾಟಕದಲ್ಲಿ ಸಿದ್ಧಯ್ಯಗಳು, ನಿರಂಜಯ್ಯಗಳು, ಕಾಡು ಸಿದ್ಧರೆಂದು ಮತ್ತು ಮಸಣದ ಸಿದ್ಧರೆಂದು ಜನರಿಂದ

ಕರೆಯಿಸಿಕೊಳ್ಳುತ್ತಾರೆ. ಈ ಸಿದ್ಧರು ಊರು, ಪಟ್ಟಣಗಳಿಂದ ದೂರದಲ್ಲಿರುವ ಸ್ಮಶಾನದಲ್ಲಿಯೇ ಇಳಿದುಕೊಂಡು, ತಮ್ಮ ಗುಡಿಸಲುಗಳನ್ನು ನಿರ್ಮಾಣಮಾಡಿಕೊಂಡು ಭಿಕ್ಷೆ ಬೇಡುತ್ತ ಜೀವನ ಸಾಗಿಸುತ್ತಾರೆ. ಆಯಾ ಗ್ರಾಮದ ಸ್ಮಶಾನದಲ್ಲಿ ಮೂರು ದಿವಸ ಮಾತ್ರ ಇರುವ ಇವರ ಸಂಸ್ಕೃತಿ, ಇತರ ಜಾತಿ ಜನಾಂಗಗಳ ಸಂಸ್ಕೃತಿಗಗಳ ಸಂಸ್ಕೃತಿಕ್ಕಿಂತಲೂ ವಿಭಿನ್ನ ಮತ್ತು ವಿಶಿಷ್ಟತೆಯಿಂದ ಕೂಡಿದ್ದಾಗಿದೆ. ಶತಮಾನಗಳು ಗತಿಸಿದರೂ ಕೂಡಾ ಸಿದ್ಧರು ಭಿಕ್ಷಾಟನೆಯನ್ನೇ ನಂಬಿಕೊಂಡು ಬರುತ್ತಿದ್ದಾರೆ. ಮತ್ತು ಸ್ಮಶಾನದಲ್ಲಿಯೇ ಇನ್ನೂ ಇಳಿದುಕೊಂಡು ಬದುಕು ಸಾಗಿಸುತ್ತಿದ್ದಾರೆ. ಹೀಗಿರುವುದರಿಂದ ಸುಡುಗಾಡು ಸಿದ್ಧರ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿ ಯಥಾ ಸ್ಥಿತಿಯಲ್ಲಿಯೇ ಇದೆ. ಮನಶಾಸ್ತ್ರ ಮತ್ತು ಸಾಂಸ್ಕೃತಿಕ ವಿಕಾಸದ ದೃಷ್ಟಿಯಿಂದ ಇವರನ್ನು ಬುಡಕಟ್ಟಿನ ಜನರೆಂದು ಗುರುತಿಸಲಾಗಿದೆ.

ಸುಡಗಾಡು ಸಿದ್ಧರು ಮೂಲತ: ಕಾಡಿನಲ್ಲಿದ್ದುಕೊಂಡು ಗೆಡ್ಡೆ-ಗೆಣಸು ತಿಂದು ಬದುಕು ಸಾಗಿಸುವ ಜನಾಂಗ. ಹೀಗಾಗಿ ಇವರ ಯಾವುದೆ ಪೂರ್ವಾಪರ ವಿಚಾರಗಳ ಬಗ್ಗೆ ಹೆಚ್ಚಿನ ಮಾಹಿತಿ ಲಿಖಿತ ರೂಪದಲ್ಲಿ ದೊರೆಯಲಾರದು. ಕಾಡು ಕಾಯುವ ಕೆಲಸದಲ್ಲಿ ನಿರತರಾದ ಇವರು ಅಲ್ಲಿಯ ಅನೇಕ ಉತ್ತಮ ಗಿಡಮೂಲಿಕೆಗಳನ್ನು ಕತ್ತರಿಸಿ ತಂದು ದೇವರ ಸೇವೆಗೆ ಅರ್ಪಿಸುತ್ತಿದ್ದರೆಂಬುದು ಅವರು ಹೇಳುವ ವಿಚಾರ. ಹೀಗೆ ಹಲವು ಶತಮಾನಗಳು ಕಳೆದಿರುವ ಈ ಜನಾಂಗ ಕ್ರಮೇಣ ನಿಸರ್ಗದ ಸಂಪತ್ತು ನಶಿಸುತ್ತ ಹೋಗಲು ಕಾಡು ಬಿಟ್ಟುನಾಡಿನ ಸಮೀಪ ಬರಲು ಪ್ರಾರಂಭಿಸಿರಬಹುದು. ಅದರೆ ಮೂಲತ: ಇವರಿಗೆ ಯಾವುದೇ ಕೆಲಸ ಬರದೇ ಇರುವುದರಿಂದ, ಹೊಟ್ಟೆ ತುಂಬಿಸಿಕೊಳ್ಳುವುದಕ್ಕಾಗಿ ಭಿಕ್ಷೆಯನ್ನು ಬೇಡಲು ತೊಡಗಿರಬಹುದೆನಿಸುತ್ತದೆ. ಮತ್ತು ಊರ ಹೊರಗೆ ಉಳಿದುಕೊಂಡು ಜೀವನ ಸಾಗಿಸುವ ಇವರನ್ನು ಜನ ತಿರಸ್ಕಾರ ಭಾವನೆಯಿಂದ ಕಂಡಿದ್ದರ ಫಲವೋ ಅಥವಾ ಬುಡಕಟ್ಟು ತನ್ನ ಮೂಲ ಸಂಸ್ಕೃತಿ ಸಂಪ್ರದಾಯ ಆಚಾರ-ವಿಚಾರ ನಂಬಿಕೆಗಳನ್ನು ಬಹು ಬೇಗ ಬಿಟ್ಟುಕೊಡದೇ ಇರುವದರಿಂದಲೋ ಹೀಗೆ ಪ್ರತ್ಯೇಕವಾಗಿ ಉಳಿದುಕೊಂಡು ಬದುಕು ಸಾಗಿಸುತ್ತ ಬಂದಿರಬೇಕೆನಿಸುತ್ತದೆ. ಹಳ್ಳಿಗಳು ಚಿಕ್ಕವಾಗಿರುವುದರಿಂದ ಆಯಾ ಹಳ್ಳಿಯ ಸ್ಮಶಾನದಲ್ಲಿ ಮೂರು ದಿವಸ ಇಳಿದುಕೊಂಡು ಭಿಕ್ಷೆ ಬೇಡಿ ಹೊಟ್ಟೆ ಹೊರಿದುಕೊಂಡು ಮುಂದಿನ ಹಳ್ಳಿಗೆ ಹೋಗುವ ಇವರ ಪ್ರವೃತ್ತಿ ನಿಜಕ್ಕೂ ಕಷ್ಟದಿಂದ ಕೂಡಿದ್ದಾಗಿದೆ. ಪ್ರದೇಶದಿಂದ ಪ್ರದೇಶಕ್ಕೆ ಹೋಗಿ ಭಿಕ್ಷೆ ಬೇಡುವ ಸುಡುಗಾಡು ಸಿದ್ಧರ ಆರ್ಥಿಕ, ಶೈಕ್ಷಣಿಕ, ಮತ್ತು ರಾಜಕೀಯ ಸ್ಥಿತಿಗತಿಳು ಶೂನ್ಯವೆಂದು ಹೇಳಿದರೆ ತಪ್ಪಾಗಲಾರದು.

ಅಧ್ಯಯನದ ಮಹತ್ವ:

ಬುಡಕಟ್ಟು ವಿಭಾಗದಲ್ಲಿ ಸಾಮಾಜಿಕ ಬದಲಾವಣೆಯಲ್ಲಿ ಸುಡಗಾಡು ಸಿದ್ಧರು ಎಂಬ ಶೀರ್ಷಿಕೆಯಲ್ಲಿ ಅನೇಕ ಅಧ್ಯಯನಗಳು ನಡೆದಿವೆ, ಕೆಲವು ಅಧ್ಯಯನಗಳು ಕೇವಲ ಮಾಹಿತಿಗಾಗಿ

ಅಷ್ಟೇ ನಡೆದಿವೆ ಎನ್ನಬಹುದು. ಸಂಶೋಧನಾತ್ಮಕ ಹುಡುಕಾಟ ಬಹಳ ಕ್ಷೀಣವೆಂದರೂ ತಪ್ಪಾಗಲಾರದು. ಒಟ್ಟಾರೆ ಈಗಾಗಲೇ ನಡೆದಿರುವ ಅಧ್ಯಯನಗಳು ಸಮಾಜಶಾಸ್ತ್ರ ದೃಷ್ಟಿಕೋನದಲ್ಲಿ ಅಧ್ಯಯನ ಮಾಡಲಾಗಿಲ್ಲ. ಸುಡಗಾಡು ಸಿದ್ಧರ ಸಾಮಾಜಿಕ ಸ್ಥಿತ್ಯಂತರಗಳು ಒಂದು ಅಧ್ಯಯನದಲ್ಲಿ ತಮ್ಮದೇ ಆದಂತಹ ಸಂಸ್ಕೃತಿ, ರಾಜಕೀಯ, ಧಾರ್ಮಿಕ ಆಚರಣೆ ಜೀವನ ಸಂಪ್ರದಾಯ ನಂಬಿಕೆಗಳು ಇತ್ಯಾದಿ ವಿಷಯಗಳು ಅಧ್ಯಯನದ ದೃಷ್ಟಿಯಿಂದ ಮಹತ್ವ ಪಡೆದಿರುತ್ತದೆ.

ಸುಡಗಾಡು ಸಿದ್ಧರು ಜೀವನ ವಿಧಾನದಲ್ಲಿ ಜಾತೀಯತೆ ಅಸ್ಪೃಶ್ಯತೆ, ಬಡತನ, ದಬ್ಬಾಳಿಕೆ, ಸ್ತ್ರೀ ಅಪಹರಣ, ಮಾಟ, ಮಂತ್ರ, ಪವಾಡಗಳು ಅಂದು ಇದ್ದವು ಈಗಲು ಸಹ ಅವು ನಿರಂತರವಾಗಿ ಬಂದಿವೆ. ಮುಂದಿನ ಪಿಳಿಗೆ ಒಗ್ಗಿಕೊಂಡಿರುವುದನ್ನು ವಿಶ್ಲೇಷಿಸಲಾಗುತ್ತದೆ.

ಅಧ್ಯಯನದ ಸ್ವರೂಪ :

ಪ್ರಸ್ತುತ ಈ ನಿಬಂಧವು ಒಟ್ಟು ೭ ಅಧ್ಯಯನಗಳನ್ನು ಒಳಗೊಂಡಿದೆ

ಅಧ್ಯಯ ೧ ಅಧ್ಯಯನದ ಉದ್ದೇಶ ವ್ಯಾಪ್ತಿ ಮತ್ತು ಮಹತ್ವ:

ಸುಡುಗಾಡು ಸಿದ್ಧರು ಕುರಿತು ಇಲ್ಲಿವರೆಗೆ ನಡೆದಿರುವ ಅಧ್ಯಯನಗಳನ್ನು ಪರೀಶಿಲನೆ ಮಾಡುವುದು. ಸುಡುಗಾಡು ಸಿದ್ಧರ ಪರಿಚಯ ಸುಡುಗಾಡು ಸಿದ್ಧರ ಭೌಗೋಳಿಕ ಹಾಗೂ ಸೇಡಂ ತಾಲೂಕಿನ ಕೋಡ್ಲ ಗ್ರಾಮ ಸಮುದಾಯಗಳು ನೆಲೆಗೊಂಡಿರುವ ವಿವಿಧ ಸ್ಥಳಗಳ ಪರಿಚಯ ಮಾಡುವುದು. ಇಲ್ಲಿಯವರೆಗೆ ನಡೆದಂತಹ ಸಮೀಕ್ಷಾ ವರದಿಗಳನ್ನು ಲೇಖನಗಳನ್ನು ನಿಬಂಧ ರಚನೆಯ ಸಂದರ್ಭದಲ್ಲಿ ಬಳಸಿಕೊಳ್ಳಲಾಗಿದೆ.

ಅಧ್ಯಾಯ ೨ ಸಮುದಾಯದ ಪರಿಚಯ:

ಈ ಅಧ್ಯಯನದಲ್ಲಿ ಕರ್ನಾಟಕದಲ್ಲಿ ಸುಡುಗಾಡು ಸಿದ್ಧರ ನೆಲೆಯ ಬಗ್ಗೆ ಮತ್ತು ಅವರು ವಾಸವಿರುವ ತಾಲೂಕುಗಳ ಮತ್ತು ಊರುಗಳ ಹೆಸರುಗಳು ಮತ್ತು ಜನಸಂಖ್ಯೆ ಬಗ್ಗೆ ಪರಿಚಯಿಸಲಾಗಿದೆ.

ಅಧ್ಯಾಯ ೩. ಸುಡುಗಾಡು ಸಿದ್ಧರ ಸಾಮಾಜಿಕ ಬದಲಾವಣೆ:

ಈ ಅಧ್ಯಯನದಲ್ಲಿ ಸುಡುಗಾಡು ಸಿದ್ಧರು ಹುಟ್ಟಿನಿಂದ ಸಾವಿನ ವರೆಗೆ ಆಗುವ ಆಚರಣೆಗಳು ಹೇಗಿವೆ ಎಂಬುದನ್ನು ಕುರಿತು ಮತ್ತು ಆಧುನಿಕತೆಯ ಇಂದಿನ ಸಂದರ್ಭದಲ್ಲಿ ಅವರ ಈ ಆಚರಣೆಗಳಲ್ಲಿ ಯಾವ ರೀತಿ ಬದಲಾವಣೆಗಳಾಗುತ್ತಿವೆ ಎಂಬುದನ್ನು ಕ್ಷೇತ್ರ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.

ಅಧ್ಯಾಯ ೪ ಸಮುದಾಯದ ಧಾರ್ಮಿಕತೆ:

ಈ ಅಧ್ಯಯನದಲ್ಲಿ ಮೂಲ ವೃತ್ತಿಯಿಂದ ಹಿಡಿದು ಕೃಷಿ ಬೇಟೆಯಾಡುವುದು ಹಿಂದೆ ಯಾವ ರೀತಿ ಬದುಕಿದರು ಮತ್ತು ಆಧುನಿಕ ಯುಗದಲ್ಲಿ ಯಾವ ರೀತಿಯಲ್ಲಿ ಅಭಿವೃದ್ಧಿ

ಹೊಂದಿದ್ದಾರಯೇ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ವಿದ್ಯಾವಂತರಾಗಿದ್ದಾರೆಯೇ ಎಂಬುದನ್ನು ಕ್ಷೇತ್ರ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.

ಅಧ್ಯಾಯ ೫ ಸುಡುಗಾಡು ಸಿದ್ಧರ ಕಲೆ

ಈ ಅಧ್ಯಯನದಲ್ಲಿ ಸುಡುಗಾಡು ಸಿದ್ಧರ ಕಲೆ ಮತ್ತು ಸಂಪ್ರದಾಯದ ಹಾಡುಗಳು, ಹಾಸ್ಯಗೀತೆಗಳು, ಜನಪದ ಕ್ರೀಡೆಗಳು ಹಾಗೂ ಜನಪದ ಕಲಾ ಪ್ರಕಾರಗಳ ಬಗ್ಗೆ ಪರಿಚಯ ಮಾಡಿಕೊಡಲಾಗಿದೆ.

ಅಧ್ಯಾಯ ೬ ಸಮುದಾಯದ ಆರ್ಥಿಕತೆ

ಈ ಪ್ರಸ್ತುತ ಅಧ್ಯಯನದಲ್ಲಿ ಧಾರ್ಮಿಕ ನಂಬಿಕೆ ಮತ್ತು ಆಚರಣೆಗಳ ಬಗ್ಗೆ ಸಾಂಸ್ಕೃತಿಕ ದೈವರಾಧನೆ ಜಾತ್ರೆ ರಾಜಕೀಯದಲ್ಲಿ ಮೀಸಲಾತಿ ರಾಜಕೀಯ ಕ್ಷೇತ್ರದಿಂದ ಸುಡುಗಾಡು ಸಿದ್ಧರು ಸ್ಪರ್ಧಿಸುತ್ತಿದ್ದಾರೆಂಬುದನ್ನು ಕ್ಷೇತ್ರ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.

ಅಧ್ಯಾಯ ಏಳು ಸಮಾರೋಪ

ಅಧ್ಯಯನದ ಪ್ರಾಕಲ್ಪನೆಗಳು:

೧. ಬುಡಕಟ್ಟುಗಳ ಅಧ್ಯಯನ ಸಮರ್ಪಕವಾದ ರೀತಿಯಲ್ಲಿ ನಡೆಯುವುದೆ? ಎಂದಾಗ ವಿಚಾರ ಮಾಡಬೇಕಾಗುತ್ತದೆ. ಎನೇ ವಾದ ವಿವಾದಗಳಿದ್ದರೂ ಕಾಲ ಕಳೆದಂತೆ ನಾಗರಿಕತೆಯ ಪ್ರಭಾವದಿಂದ ಬುಡಕಟ್ಟುಗಳು ತಮ್ಮ ಮೂಲ ಸಂಸ್ಕೃತಿಯನ್ನು ನಡೆಸುವುದು ಅನಿವಾರ್ಯ?

೨. ಬುಡಕಟ್ಟುಗಳು ತಮ್ಮ ಮೂಲ ಸಂಸ್ಕೃತಿ ಬಿಡಬೇಕೇ ಅಥವಾ ಮುಂದುವರಿಸಿಕೊಂಡು ಹೋಗಬೇಕೆ?

೩. ಇತರ ಜಾತಿಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಬೇಕೆ?

ಅಧ್ಯಯನ ವಿಧಾನ:

ಸಾಮಾಜಿಕ ಬದಲಾವಣೆಯಲ್ಲಿ ಸುಡುಗಾಡು ಸಿದ್ಧರು ಎಂಬ ಅಧ್ಯಯನಕ್ಕಾಗಿ ಕಲಬುರಗಿ ಜಿಲ್ಲೆಯ ಸೇಡಂ ತಾಲೂಕಿನ ಸುತ್ತಮುತ್ತಲಿನ ಗ್ರಾಮಗಳನ್ನು ಬಳಸಿಕೊಳ್ಳಲಾಗಿದೆ. ಸುಡುಗಾಡು ಸಿದ್ಧರು ನೆಲೆಗೊಂಡ ಪ್ರದೇಶಗಳಲ್ಲಿ ಸಂಚರಿಸಿ ಕ್ಷೇತ್ರಕಾರ್ಯ ಕೈಗೊಂಡು ಮಾಹಿತಿ ಸಂಗ್ರಹಿಸಲಾಗಿದೆ. ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ಈಗಾಗಲೆ ಪ್ರಕಟಿಸಿದ ಕೃತಿಗಳು, ಲೇಖನಗಳನ್ನು ಗಮನಿಸಿ ಸಂಪ್ರಬಂಧವನ್ನು ಕಟ್ಟುವ ಪ್ರಯತ್ನ ಮಾಡಲಾಗಿದೆ.

ಅವಲೋಕನ ವಿಧಾನ:

ಸುಡಗಾಡು ಸಿದ್ಧರ ಸಾಮಾಜಿಕ ಬದಲಾವಣೆಯಲ್ಲಿನ ಮಾಹಿತಿ ಪಡೆಯಲು ಕ್ಷೇತ್ರಕಾರ್ಯದಲ್ಲಿ ಈ ಅವಲೋಕನ ವಿಧಾನವು ಮುಖ್ಯವಾದುದು. ಅವಲೋಕನವು ಸಾಮಾಜಿಕ ಸಂಶೋಧನೆಯಲ್ಲಿ ಮಾಹಿತಿ ಸಂಗ್ರಹಣೆಗಾಗಿ ಬಳಸಲಾಗುತ್ತಿರುವ ಮುಖ್ಯ ತಂತ್ರ ಸಾಧನಗಳಲೊಂದು. ಪ್ರಶ್ನಾವಳಿ

ಮತ್ತು ಸಂದರ್ಶನ ಅವಧಿಯಲ್ಲಿ ಕಂಡುಬರಬಹುದಾದ ಕೆಲವು ಸಮಸ್ಯೆಗಳನ್ನು ಅವಲೋಕನದ ಮೂಲಕ ಬಗೆಹರಿಸಿಕೊಳ್ಳಲು ಸಾಧ್ಯವಾಗುತ್ತದೆ. ಸುಡಗಾಡು ಸಿದ್ಧರ ಜೊತೆಯಲ್ಲಿ ಸಹಭಾಗಿಯಾಗಿ ಸಮುದಾಯದ ಅಂತರಾಳದಲ್ಲಿ ಹುದಗಿರುವ ಮಾಹಿತಿ ಮತ್ತು ಇವರ ಬದುಕಿನ ಸವಾಲುಗಳನ್ನು ಕುರಿತು ಮಾಹಿತಿಯನ್ನು ತಿಳಿದು ಅಧ್ಯಯನಕ್ಕೆ ಪೂರಕವಾಗಿ ರೂಪಿಸಿಕೊಳ್ಳಬಹುದು.

ಪ್ರಶ್ನಾವಳಿ ವಿಧಾನ:

ಅಧ್ಯಯನಕ್ಕೆ ಸಂಬಂಧಿಸಿದಂತೆ ಸುಡಗಾಡು ಸಿದ್ಧರ ಸಾಮಾಜಿಕ ಬದಲಾವಣೆಯನ್ನು ಅಧ್ಯಯನ ಮಾಡಲು ಮತ್ತು ಮಾಹಿತಿ ಪಡೆಯಲು ಪ್ರಶ್ನಾವಳಿ ವಿಧಾನವು ಪ್ರಮುಖ ಪಾತ್ರ ವಹಿಸುತ್ತದೆ. ಆ ಮೂಲಕ ಸಮುದಾಯದವರ ಪ್ರಸ್ತುತ ಸಂದರ್ಶನ ಮಾಡಿ ಮಾಹಿತಿಯನ್ನು ಸಂಗ್ರಹಣೆ ಮಾಡಲಾಗಿದೆ. ಇದರ ಮೂಲಕ ನಿಜವಾದ ಚಿತ್ರಣವನ್ನು ತಿಳಿದುಕೊಳ್ಳಲು ಅನುಕೂಲವಾಗುತ್ತದೆ.

ಸಂದರ್ಶನ ವಿಧಾನ:

ಸುಡಗಾಡು ಸಿದ್ಧರ ಸಮುದಾಯವು ಇಡೀ ರಾಜ್ಯದಲ್ಲಿಯೇ ಸಾಮಾಜಿಕ ವ್ಯವಸ್ಥೆಯಲ್ಲಿ ನಿರ್ಲಕ್ಷ್ಯಕ್ಕೆ ಗುರಿಯಾಗಿರುವುದು ಕಂಡುಬರುತ್ತದೆ. ಜೊತೆಗೆ ಈ ಸಮುದಾಯವು ಮೋಡಿಕಲೆ ಮೂಲಕ ಭಿಕ್ಷಾವೃತ್ತಿಯನ್ನು ಮೂಲ ಕಸುಬಾಗಿ ರೂಢಿಸಿಕೊಂಡಿತ್ತು. ಮದುವೆ ಆಚರಣೆಯಲ್ಲಿ ಮತ್ತು ಶವ ಸಂಸ್ಕರದ ಆಚರಣೆಯಲ್ಲಿ ಈ ಸಮುದಾಯವು ತನ್ನದೇ ಆದ ಭಿನ್ನತೆಯನ್ನು ಹೊಂದಿದೆ. ಆದ್ದರಿಂದ ವಿಷಯಕ್ಕೆ ಶಕ್ತಿ ತುಂಬಿ ಸಂ–ಪ್ರಬಂಧವನ್ನು ಕಟ್ಟಿಕೊಡುವಂತಹ ಪ್ರಯತ್ನ ಮಾಡಲಾಗುವುದು.

ಇಲ್ಲಿಯವರೆಗೆ ನಡೆದ ಅಧ್ಯಯನದ ಸಮೀಕ್ಷೆ:

ನಮ್ಮ ಜ್ಞಾನ ವಿಕಾಸಕ್ಕಾಗಿ ಪುಸ್ತಕಗಳು ಅವಶ್ಯಕವಾಗಿ ಬೇಕೆ ಬೇಕು. ಒಂದು ಸಂಶೋಧನೆಯ ಯಶಸ್ಸನ್ನು ಸಾಧಿಸಲು ಮೂಲಾಧಾರಗಳು ಅತ್ಯಾವಶ್ಯಕ. ಕ್ಷೇತ್ರಕಾರ್ಯವು ನಮ್ಮ ಸಂಶೋಧನೆಗೆ ಸ್ಪಷ್ಟವಾದ ಚಿತ್ರಣವನ್ನು ನೀಡುವ ದಾರಿದೀಪ. ಇದಲ್ಲದೆ ಪುಸ್ತಕಗಳು ಕೂಡ ಸಹಕಾರಿಯಾಗುತ್ತವೆ. ಸುಡಗಾಡು ಸಿದ್ಧರ ಸಾಮಾಜಿಕ ಸ್ಥಿತ್ಯಂತರಗಳು ಸಾಮಾಜಿಕ ಒಂದು ಅಧ್ಯಯನದಲ್ಲಿ ಇನ್ನಿತರ ಕೃತಿಗಳು ಮತ್ತು ಲೇಖನಗಳು ಇದುವರೆಗೂ ನಡೆದ ಸಂಶೋಧನೆಗಳು ಪಿಎಚ್.ಡಿ. ಮಹಾಪ್ರಬಂಧಗಳು, ಹಾಗೂ ಎಂ.ಫಿಲ್. ಸಂಪ್ರಬಂಧಗಳು ಸಂಶೋಧನೆಗಳು ಮತ್ತು ಅಧ್ಯಯನಗಳನ್ನು ಸಮಾಜ ಶಾಸ್ತ್ರಜ್ಞರು ಮಾನವಶಾಸ್ತ್ರಜ್ಞರು ಸಮಾಜ ವಿಜ್ಞಾನಿಗಳು ಕೈಗೊಂಡಿರುವುದನ್ನು ಗಮನಿಸಬಹುದಾಗಿದೆ.

೧೯೦೧ರ ಭಾರತ ಜನಗಣತಿ ವರದಿಯಲ್ಲಿ ಸುಡುಗಾಡು ಸಿದ್ಧರನ್ನು ಜೋಗಿಗಳೆಂದೂ ಅಲೆಮಾರಿಗಳೆಂದೂ ವರ್ಣಿಸಲಾಗಿದೆ. ವೆಂಕಟೇಶ ನಗರ, ಕಲಕಮ್ಮರೋಡ, ಶಾಂತಿನಗರ, ರಾಮಗಡ, ಕೋಡ್ಲ ಸೇಡಂ ತಾಲೂಕಿನ ಸುತ್ತಮುತ್ತಲಿನ ಗ್ರಾಮಗಳಲ್ಲಿ ಕಂಡುಬರುತ್ತಾರೆ.

ಸುಡುಗಾಡು ಸಿದ್ಧರ ಕುರಿತು ಸಂಶೋಧನೆ ನಡೆದಿರುವುದರು ತೀರ. ವಿರಳವೆಂದೇ ಹೇಳಬಹುದು, ಆದರೂ ಈ ಅಲೆಮಾರಿ ಕುರಿತು ಹನ್ನೆರಡನೆಯ ಶತಮಾನದ ವಚನಕಾರರ ವಚನಗಳಲ್ಲಿ ಉಲ್ಲೇಖವಾಗಿರುವುದು ಕಂಡು ಬರುತ್ತದೆ. ಹೀಗಾಗಿ ಸುಡುಗಾಡು ಸಿದ್ಧರು ಹನ್ನೆರಡನೆಯ ಶತಮಾನದಕ್ಕಾಗಲೇ ಒಂದು ಅಲೆಮಾರಿ ಜನರೆಂಬುದನ್ನು ಗುರುತಿಸಿಕೊಳ್ಳುವಷ್ಟು ಜನಸಂಖ್ಯೆ ಹೊಂದಿದವರೆಂಬುದು ತಿಳಿಯುತ್ತದೆ. ಇಲ್ಲಿ ಕೆಲವು ವಚನಕಾರರ ವಚನಗಳನ್ನು ನಿದರ್ಶನಕೊಟ್ಟು ಆ ಅಲೆಮಾರಿ ಜನರ ಮಾಹಿತಿ ಒದಗಿಸಲಾಗಿದೆ.

"ಸಿದ್ಧ ಸಿದ್ಧರುಗಳೆಲ್ಲ ರಸವಾದವ ಕಲಿತು

ಬಂಧನಕ್ಕೆ ಗುರಿಯಾದರು

ಅಮೃತವ ಸೇವಿಸಿದ ಸುರರೆಲ್ಲ

ಪ್ರಳಯಕ್ಕೆ ಗುರಿಯಾದರು"[೧] (ತಿಪ್ಪೇರುದ್ರಸ್ವಾಮಿ ಎಚ್.:೧೯೭೫:೦೭)

ನಮ್ಮ ಕಪಿಲ ಸಿದ್ಧ ಮಲ್ಲಿಕಾರ್ಜುನನ ಆಹ್ಮದವರೆಲ್ಲ

ಬಯಲಿಗೆ ಬಯಲಾದರು

ಇವರು ಹೇಳಿದ ಹಾಗೆ ಇವರೇ ಸುಡುಗಾಡು ಸಿದ್ಧರು ಎಂಬುದು ಖಚಿತಪಡಿಸಿಕೊಳ್ಳಲು ಆಗದಿದ್ದರೂ ಪ್ರಾಚೀನ ಕಾಲಗಳಿಂದಲೂ ತಮಿಳುನಾಡಿನಲ್ಲಿ ಸಿದ್ಧಜನಾಂಗ ಒಂದಿತ್ತು ಎಂಬುದು ತಿಳಿದು ಬಂದಿದೆ. ಕ್ರಮೇಣ ಅವರಲ್ಲಿಯೇ ಕೆಲವು ಸುಡುಗಾಡು ಸಿದ್ಧರು ಕಾಡು–ಗುಡ್ಡ ಬೆಟ್ಟಗಳ ನಿರ್ಜನ ಪ್ರದೇಶದಲ್ಲಿದ್ದುಕೊಂಡು, ರಸಸಿದ್ಧಿಯ ಅತೀಂದ್ರಿಯ ಶಕ್ತಿಯನ್ನು ವಶಪಡಿಸಿಕೊಂಡು ಅದರ ದುರುಪಯೋಗ ಮಾಡಿಕೊಂಡರೆಂಬುದು ತಿಳಿಯುತ್ತದೆ ಇಲ್ಲೆಲ್ಲ 'ಸಿದ್ಧರು' ಒಂದು ಅಲೆಮಾರಿ ಜನಾಂಗವೆಂಬುದು ವಿದಿತವಾಗುತ್ತದೆ.

೧.ರೆವರೆಂಡ್ ಎಫ್.ಕಿಟಲ್ ಅವರು ತಮ್ಮ ನಿಘಂಟುವಿನಲ್ಲಿ ಸುಡುಗಾಡು ಸಿದ್ಧರು ಕುರಿತು ಪ್ರಸ್ತಾಪ ಮಾಡಿರುವುದು ಕಂಡುಬರುತ್ತದೆ **"ಸುಡುಗಾಡು"** ಕೆಲಸ A disagreeable besiṇe (ಒಥಿ) ಸುಡುಗಾಡು ಮಾತು Adisagreeable word ಇಷ್ಟೆಲ್ಲ ವಿಷಯ ಹೇಳಿದ ಮೇಲೆ ೧೫೬೭ನೇಯ ಪುಟದಲ್ಲಿ 'ಸುಡುಗಾಡು ಸಿದ್ಧ' ಎಂಬುದನ್ನು ಹೇಳುತ್ತಾರೆ ವಿಶೇಷವಾಗಿ ಸುಡುಗಾಡಿನಲ್ಲಿದ್ದುಕೊಂಡು ಜೀವನ ಸಾಗಿಸುವ ವಿಶಿಷ್ಟ ಜನಾಂಗ ಇದು ಎಂಬುದನ್ನು ಅವರು ತಿಳಿಸಿರುತ್ತಾರೆ ಅದೇ ನಿಘಂಟುವಿನಲ್ಲಿ ಶಿವ ಕೊಟ್ಟಿದ್ದೂ ಸಿದ್ಧಪ್ಪ ಕೊಟ್ಟಾಗಿ ಎಂಬ ಅನೇಕ ಗಾದೆಗಳು ಸುಡುಗಾಡುಸಿದ್ಧ ಜನಾಂಗ ಕುರಿತು ಮಾಹಿತಿ ಒದಗಿಸುತ್ತದೆ.

೨. ಎಲ್.ಕೆ.ಅನಂತ ಕೃಷ್ಣ ಐಯ್ಯರ್ ಅವರು ಸುಡುಗಾಡು ಸಿದ್ಧರ ಮೂಲ ಮತ್ತು ಜಾತಿ ಸಂಪ್ರದಾಯ, ಜಾತಿಯ ಆಂತರಿಕ ರಚನೆ, ಮದುವೆ, ಸಂಪ್ರದಾಯ ಮತ್ತು ಪದ್ಧತಿ ಜಾತಿ

ಪಂಚಾಯತಿ, ಧರ್ಮ, ಮರಣ, ಸಂಸ್ಕಾರ, ಕುಲ, ಕಸುಬು, ಸಾಮಾಜಿಕ, ಸ್ಥಾನಮಾನಗಳು ಆಹಾರ ಪಾನೀಗಳು, ವೇಷಭೂಷಣ, ಇತ್ಯಾದಿ ಕುರಿತು ಒಂದು ಸ್ಥೂಲವಾದ ವಿವರಣೆಯನ್ನು ನೀಡಿದ್ದಾರೆ.

೩. **ಥರ್ಸ್ಟನ್** (Cast and Tribes of Southern India) ಅವರು ಸುಡುಗಾಡು ಸಿದ್ದರನ್ನು ಕುರಿತು ಹೀಗೆ ದಾಖಲಿಸುತ್ತಾರೆ. ಸುಡುಗಾಡು ಶವದಹನ ಎಂಬ ಭೂಮಿಯಿಂದ ಈ ಹೆಸರು ಪ್ರಾಪ್ತವಾಗಿದೆ. ಅವರು ಪರಸ್ಪರ ಆಂತರಿಕ ವಿವಾಹ ಮಾಡಿಕೊಳ್ಳತ್ತಾರೆ. ಮತ್ತು ಮಧ್ಯವರ್ತಿಗಳ ಕಛೇರಿ ವಂಶಪಾರಂಪರ್ಯದಿಂದ ಬಂದಿರುತ್ತದೆ. ಅವರು ದೇಶದ ಒಂದು ಭಾಗ ಭೂಮಿಯ ಬರಿಯ ಒಡೆತನ ಹೊಂದಿರುತ್ತಾರೆ. ಕಟ್ಟಿಗೆಯ ಸಾಮಾನ್ಯವಾಗಿ ಲೋಹದ ಗಂಟೆಗಳಿಂದಾಗಿ ಅವರನ್ನು ಗುರುತಿಸಬಹುದಾಗಿದೆ ಇವುಗಳನ್ನು ಅವರು ಯಾವಾಗಲೂ ಕೊಂಡೊಯ್ಯುತ್ತಾರೆ ಇವು ಇಲ್ಲದೆ ಹೋದರೆ ಕರವನ್ನು ಸಂಗ್ರಹಿಸಲು ಹೋದಾಗ ಇವರ ಮಧ್ಯವರ್ತಿಕೆಯನ್ನು ಯಾರೂ ಒಪ್ಪಿಕೊಳ್ಳುವುದಿಲ್ಲ. (೧೯೭೫-೪೦೬)

"ಒಲೆಯಡಿಯನು ನುಡಿದಡೆ ಹೊಗೆ ಗೋರಕನಾಥನ ಕೊರಳ ಸುತ್ತಿತ್ತು.." (ಬಸವರಾಜು ಎಲ್ ೯೩೦) ಸಿದ್ದಮತದ ಕುರಿತು ವಿವರಿಸುತ್ತ "ಉತ್ತರ ಕರ್ನಾಟಕದ ಸುಡುಗಾಡು ಸಿದ್ಧರ ಸಿದ್ದ ಮತದ ಅಸ್ತಿತ್ವವನ್ನು ತೆರೆದು ತೋರಿಸುತ್ತದೆ. (ಕೃಷ್ಣಮೂರ್ತಿ:೧೯೮೨)

೧೯೩೩ರಲ್ಲಿ ಮುಂಬೈ ಅಧಿಪತ್ಯವು ಮೀಸಲಾತಿ ಪಟ್ಟಿಯನ್ನು ಪ್ರಕಟಿಸಿ ೧೯೪೨ರಲ್ಲಿ ಪರಿಷ್ಕೃತಗೊಳಿಸಿತು. ಈ ಪಟ್ಟಿಯ ಸೆಕ್ಷನ್೩ ಇತರೆ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿಯ

ಕ್ರ.ಸಂ.೧೧೧ರಲ್ಲಿ ಸುಡುಗಾಡುಸಿದ್ಧರ ಪದ ದಾಖಲಾಗಿವೆ.

೧.೫.೧೯೬ ರಿಂದ ಮೈಸೂರು ರಾಜ್ಯದ ಪರಿಶಿಷ್ಟ ಜಾತಿಯ ಪರಿಸ್ಕೃತ ಪಟ್ಟಿಯ ಕ್ರ.ಸಂ.೧೫ರಲ್ಲಿ ಸುಡುಗಾಡು ಸಿದ್ದ (sudugadu siddha) ಎಂಬ ಸಮುದಾಯವು ಸೇರಿರುವುರು. ಇದು ಕೊಡಗು, ಬೆಳಗಾವಿ, ಬಿಜಾಪುರ, ಧಾರವಾಡ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಬೀದರ, ಗುಲಬರ್ಗಾ ಮತ್ತು ರಾಯಚೂರು ಹಾಗೂ ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲೂಕು ಹೊರತಾದ ಮೈಸೂರು ರಾಜ್ಯದಲ್ಲಿ ಅನ್ವಯವಾಗುತ್ತಿತ್ತು. ಇದರ ಪ್ರಾದೇಶಿಕ ಮಿತಿಯನ್ನು ೧೯೭೬ರಲ್ಲಿ ಸಡಿಲಿಸಲಾಯಿತು.

ಬಸವರಾಜ ನೆಲ್ಲಿಸರರು 'ಸುಡಗಾಡು ಸಿದ್ದರು' ಎನ್ನುವ ಕೃತಿಯಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಕಂಡುಬರುವ ಸುಡಗಾಡು ಸಿದ್ದರ ಕರಿತು ಸಂಕ್ಷಿಪ್ತ ಮಾಹಿತಿ ನೀಡುತ್ತಾರೆ.

"ಕರ್ನಾಟಕ ಕಲೆಗಳು" ಕೃತಿಯಲ್ಲಿ ಗೊ ರು ಚನ್ನಬಸಪ್ಪನವರು ಸುಡುಗಾಡು ಸಿದ್ದರ ಕುರಿತು ತಿಳಿಸುತ್ತ ಸುಡುಗಾಡಿನಲ್ಲಿ ವಾಸ ಮಾಡುವವರಾದುದರಿಂದ ಸುಡುಗಾಡು ಸಿದ್ಧರು ಎನ್ನುವ ಹೆಸರು ಈ ಸಮುದಾಯಕ್ಕೆ ಬಂದಿದೆ ಎಂದು ಅಭಿಪ್ರಾಯಪಡುತ್ತಾರೆ (ಚನ್ನಬಸಪ್ಪ ೧೯೭೭;೧೭೩)

ಉಪಸಂಸ್ಕೃತಿ ಮಾಲೆಯಲ್ಲಿ ಖಂಡೋಬಾ ಅವರ 'ಸುಡುಗಾಡು' ಸಿದ್ಧರ ಸಂಸ್ಕೃತಿ' ಎನ್ನುವ ಕೃತಿಯೊಂದು ಬೆಳಕು ಕಂಡಿದೆ. (೧೯೯೩) ಈ ಕೃತಿಯಲ್ಲಿ ಸುಡುಗಾಡು ಸಿದ್ಧರ ಕುರಿತ ಮಾಹಿತಿಗಳು ದೊರೆಯುತ್ತವೆ.

ಟಿ.ಎಂ.ಭಾಸ್ಕರರು ಸುಡುಗಾಡು ಸಿದ್ಧರ ಕುರಿತು ಸಂಶೋಧನೆ ನಡೆಸಿ ಸುಡುಗಾಡುಸಿದ್ಧರು ಒಂದು ಸಂಸ್ಕೃತಿ ಅಧ್ಯಯನ (೨೦೦೦) ಎನ್ನುವ ಕೃತಿಯೊಂದನ್ನು ಹೊರತಂದಿದ್ದಾರೆ. ಅದರಲ್ಲಿ ಸುಡುಗಾಡು ಸಿದ್ಧರ ಕುರಿತು ಮಾಹಿತಿಗಳು ಇದ್ದು ಕೆಲವೊಂದು ಸತ್ಯವಿದ್ದರೆ, ಇನ್ನು ಕೆಲವು ಮಾಹಿತಿಗಳು ಸತ್ಯಕ್ಕೆ ದೂರವಾಗಿವೆ.

ಕರ್ನಾಟಕ ಬುಡಕಟ್ಟುಗಳು ಎಂಬ ಕೃತಿಯಲ್ಲಿ ಪಿ.ಕೆ ಖಂಡೋಬಾರವರು "ಸುಡುಗಾಡು ಸಿದ್ಧರು" ಎನ್ನುವ ಲೇಖನದಲ್ಲಿ ಸುಡುಗಾಡು ಸಿದ್ಧರ ಕುರಿತ ಸಂಕ್ಷಿಪ್ತ ಮಾಹಿತಿಗಳನ್ನು ನೀಡಿದ್ದಾರೆ.

ಇವುಗಳಲ್ಲದೆ ಸುಡುಗಾಡು ಸಿದ್ದರನ್ನು ಕುರಿತು ಬಿಡಿ ಲೇಖನಗಳು ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. "ಮಸಣದೊಡೆಯರು ನಾವು ಸಿದ್ಧರು" (ಕರಿಶೆಟ್ಟಿ ರುದ್ರಪ್ಪ : ಸಂಯುಕ್ತ ಕರ್ನಾಟಕ: ೨೨.೧.೧೯೮೯) ಎನ್ನುವ ಲೇಖನದಲ್ಲಿ ಸುಡುಗಾಡು ಸಿದ್ಧರ ಅಲೆಮಾರಿ ಬದುಕಿನ ರೀತಿನೀತಿಗಳು, ಅವರ ಅಸಾಹಾಯಕತೆಯ ಚಿತ್ರಣ ಕಂಡುಬರುತ್ತದೆ.

ಲೂಯಿಸ್‌ರವರು "caste and Tribes in Mysore City" ಎನ್ನುವ ಕೃತಿಯಲ್ಲಿ ಮೈಸೂರು ನಗರದಲ್ಲಿ ಕಂಡುಬರುವ ಸುಡುಗಾಡು ಸಿದ್ಧರ ಕುರಿತು ಮಾಹಿತಿ ನೀಡುತ್ತಾರೆ. ಸುಡುಗಾಡು ಸಿದ್ಧರನ್ನು ಆಂಧ್ರದಲ್ಲಿ 'ಕಾಡುಪಾಪಲ'ಎಂದು ಕರೆಯುತ್ತಾರೆ ಎಂಬುದಾಗಿ ತಿಳಿಸುತ್ತಾ ಅವರ ರೀತಿ ರಿವಾಜು ಸಂಪ್ರದಾಯ ಮುಂತಾದವುಗಳನ್ನು ಕುರಿತು ಸಂಕ್ಷಿಪ್ತವಾಗಿ ಮಾಹಿತಿಯನ್ನು ಇಂಡಿಯಾನ್ ಕಮ್ಯುನಿಟಿಸ್ ಪುಸ್ತಕದಲ್ಲಿ ನೀಡಿದ್ದಾರೆ.

ನಿಂಗಣ್ಣ ಸಣ್ಣಕ್ಕಿಯವರು ಐದು ಜಾನಪದ ಕೃತಿಗಳು ಎಂಬ ಕೃತಿಯಲ್ಲಿ ಬಾಳಸಂತೋಷರು ಹಾಗೂ ಸುಡುಗಾಡು ಸಿದ್ಧರು ಮೂಲದಲ್ಲಿ ಬೇರೆ ಬೇರೆ ಜಾತಿ ವೃತ್ತಿ ಮತ್ತು ಪಂಗಡದವರೆಂಬುದನ್ನು ಗಮನಹರಿಸಬೇಕಾಗುತ್ತದೆ. ಕಾಡು ಸಿದ್ಧರು ಮತ್ತು ಸುಡಗಾಡು ಸಿದ್ಧರು ಕುರಂಬ ಕುರುಬ ವಂಶಜರು ಕನ್ನಡ ನೆಲದವರು (ಭಾಸ್ಕರ್,ಎ: ೨೦೦೦:೧೪)

ಅನಂತಕೃಷ್ಣ ಅಯ್ಯರ್ ಅವರು ಸುಡುಗಾಡು ಸಿದ್ಧರ ಜಾತಿ ಸಂಪ್ರದಾಯ, ಸಮುದಾಯದ ಆಂತರಿಕ ರಚನೆ, ನ್ಯಾಯ ಪಂಚಾಯತಿ, ಕಸುಬು, ಸಾಮಾಜಿಕ ಸ್ಥಾನಮಾನ ವೇಷಭೂಷಣ ಮುಂತಾದ ವಿಚಾರಗಳನ್ನು ಸ್ಥೂಲವಾಗಿ ವಿವರಿಸಿದ್ದಾರೆ. ತಮ್ಮ ಕೃತಿಯಲ್ಲಿ ಮೈಸೂರು ಶಿವಮೊಗ್ಗ ಕಡೂರು ಜಿಲ್ಲೆಗಳಲ್ಲಿ ಇವರು ಸಂಚರಿಸುತ್ತಾರೆ ಎಂದು ತಿಳಿಸುತ್ತಾರೆ.

ಸಂಯುಕ್ತ ಕರ್ನಾಟಕ ಸಾಪ್ತಾಹಿಕ ಸೌರಭ ಮಾಲಿಕೆಯಲ್ಲಿ ವಡಗೇರಿ ಅವರು ಎರಡು ಲೇಖನಗಳು ಮೊಲಿಗೆ ಅವರ ಕಥೆ ಮತ್ತು ಐತಿಹ್ಯಗಳ ಮೂಲಕ ಸಿದ್ಧರ ಮೂಲವನ್ನು

ಹುಡುಕುವ ಕಾರ್ಯವನ್ನು ಮಾಡಿದ್ದಾರೆ. ಅದರಲ್ಲಿ ಸುಡುಗಾಡು ಸಿದ್ಧರು ಆಂಧ್ರ ಮೂಲದವರೆಂಬುದು ತಿಳಿದು ಬರುತ್ತದೆ. ಕ್ರಮೇಣ ವಲಸೆ ಜನಾಂಗವಾದ ಇವರು ೧೨ನೇಯ ಶತಮಾನಕ್ಕಾಗಲೇ ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳ ಸಂಚರಿಸುತ್ತ ಇದ್ದರೆಂಬುದು ತಿಳಿದು ಬರುತ್ತದೆ. ಹೀಗಾಗಿ ಇವರ ಸ್ಪಷ್ಟ ಚಿತ್ರಣ ೧೨ನೇಯ ಶತಮಾನದಿಂದೀಚೆಗೆ ಎಂದು ಊಹಿಸಿಕೊಳ್ಳಬೇಕಾಗುತ್ತದೆ. ಈ ಲೇಖನಗಳಲ್ಲಿ ಅವರು ತಿರುಪತಿ ತಿಮ್ಮಪ್ಪ, ಮಂಜನಾಥ, ರೇವಣಸಿದ್ಧ ಸ್ವಾಮಿಗೆ ನಡೆದುಕೊಳ್ಳುತ್ತಾರೆನ್ನುತ್ತಾರೆ. ಇದು ಒಪ್ಪಬಹುದಾದರೂ ಸುಡುಗಾಡು ಸಿದ್ಧರ ಮೂಲಗುರು ಶ್ರೀಶೈಲ ಚೆನ್ನಮಲ್ಲಿಕಾರ್ಜುನ ಎಂಬುದು ಗಮನಿಸುವ ಅಂಶವಾಗಿದೆ. ಕರ್ನಾಟಕದಲ್ಲಿ ವಾಸಿಸುವ ಪ್ರತಿಯೊಬ್ಬ ಸುಡುಗಾಡು ಸಿದ್ಧರೂ ಶ್ರೀಶೈಲಕ್ಕೆ ನಡೆದುಕೊಳ್ಳುತ್ತಾರೆ. ಹಾಗೂ ಕೆಲವರು ಮಹಾರಾಷ್ಟ್ರದಲ್ಲಿರುವ ಫಂಡರಾಪುರ ವಿಠೋಬಾ ದೇವರಿಗೂ, ಕೆಲವರು ರೇವಣಸಿದ್ದೇಶ್ವರನಿಗೂ ನಡೆದುಕೊಳ್ಳುತ್ತಾರೆ. ಅಲ್ಲದೆ ಪ್ರತಿಯೊಂದು ಜೋಳಿಗೆಗೆ ಒಂದು ರೂಪಾಯಿಯಂತೆ ತಮ್ಮ ಇಷ್ಟ ದೇವತೆಗೆ ಹರಕೆ ಸಲ್ಲಿಸುತ್ತಾರೆ. ಅವರು ಹೇಳಿದ ಹಾಗೆ ಕರ್ನಾಟಕದಲ್ಲಿ ಸುಡುಗಾಡು ಸಿದ್ಧರ ಜನಸಂಖ್ಯೆ ಹೆಚ್ಚಾಗಿದೆ. ಕಲಬುರಗಿ ಜಿಲ್ಲೆಯ ಸೇಡಂ ತಾಲೂಕಿನ ಕೊಡ್ಲ, ವೆಂಕಟೇಶನಗರ, ಬಸವನಗರ, ಕಲಕಮ್ಮರೋಡ,ರಾಮಗಡ, ಇನ್ನೂ ಮುಂತಾದ ಗ್ರಾಮಗಳಲ್ಲಿ ವಾಸಿಸುತ್ತಿದ್ದು, ನನ್ನ ಕ್ಷೇತ್ರಕಾರ್ಯದ ಅಂಕಿ ಅಂಶಗಳ ಪ್ರಕಾರ ಸುಡುಗಾಡು ಸಿದ್ಧರು ಒಟ್ಟು ಜನಸಂಖ್ಯೆ ೩೦ ಸಾವಿರದಿಂದ ಮೂತ್ತೈದು ಸಾವರಿ ಇರಬಹುದೆಂದು ಊಹಿಸಲಾಗಿದೆ.

❑❑❑

ಅಧ್ಯಾಯ ಎರಡು

ಸಮುದಾಯದ ಪರಿಚಯ

ಅಧ್ಯಾಯ ಎರಡು

ಸಮುದಾಯದ ಪರಿಚಯ

ಸುಡುಗಾಡು ಸಿದ್ಧರ ಸಮುದಾಯ ವೈಶಿಷ್ಟ್ಯತೆಯಿಂದ ಕೂಡಿರುವಂತಹದ್ದು. ಅವರಲ್ಲಿ ಮಂತ್ರ ಮತ್ತು ತಂತ್ರ ವಿದ್ಯೆ, ವಿಶೇಷವಾಗಿ ಕಂಡುಬರುತ್ತದೆ. ಸುಡುಗಾಡು ಸಿದ್ಧರಾಟ, ಕೈ ಚಳಕದ ಆಟವನ್ನು ಜನರ ಮುಂದೆ ಪ್ರದರ್ಶಿಸಿ, ಭಿಕ್ಷೆ ಬೇಡಿ ಜೀವನ ಸಾಗಿಸಿರುವುದನ್ನು ಕಾಣುತ್ತೇವೆ. ಸುಡುಗಾಡು ಸಿದ್ಧರನ್ನು ಕಾಡು ಸಿದ್ಧರು, ಕಾಡು ಪಾಪೆಯರು, ಬುಡುಗಜಂಗಮ, ರುದ್ರಾಕ್ಷಿಯವರು ಎಂದು ಕಲಬರಗಿ ಜಿಲ್ಲೆಯಲ್ಲಿ ಕರೆಯುತ್ತಾರೆ.

ಸುಡುಗಾಡು ಸಿದ್ಧರು ಆಚರಿಸುವ ಜೀವನಾವರ್ತಕ ಆಚರಣೆಗಳಾದ ವಿವಾಹ, ಹೆರಿಗೆ, ಬಾಣಂತಿ, ಋತುಮತಿ, ಹಿರಿಯರ ಸಾವು, ಸಾವಿನ ನಂತರದ ಆಚರಣೆಳಲ್ಲಿ ವಿಶಿಷ್ಟತೆ ಇರುವುದನ್ನು ಕಾಣಬಹುದು. ಸುಡುಗಾಡು ಸಿದ್ಧರು ಸೇಡಂ ತಾಲೂಕಿನ ಬಯಲು ನಿರ್ಜನ ಪ್ರದೇಶಗಳಾದ ವೆಂಕಟೇಶನಗರ, ಬಸವನಗರ, ಕಲಕಮರೋಡ, ರಾಮಗಡ, ಶಾಂತಿನಗರ, ಕೊಡ್ಲ ಮುಂತಾದ ಪ್ರದೇಶಗಳಲ್ಲಿ ಕಂಡುಬರುತ್ತಾರೆ. ಇವರು ರೈಲು ನಿಲ್ದಾಣಗಳ ಅಕ್ಕಪಕ್ಕದಲ್ಲಿ ಊರಿನ ಸ್ಮಾಶನದ ಸುತ್ತ ಟೆಂಟ್‌ಗಳನ್ನು ಕಟ್ಟಿಕೊಂಡು ಸಂಸಾರಸಹಿತ ವಾಸಿಸುತ್ತಿರುವುದು ಕಂಡು ಬರುತ್ತದೆ.

ಅಲೆಮಾರಿಗಳಾದ ಇವರು ಪಾರಂಪಾರಿಕ ಕೈಚಳಕದ ಆಟ ಮೂಲಕ ಜನರನ್ನು ರಂಜಿಸಿ ಭಿಕ್ಷೆ ಬೇಡಲು ಹೋಗುತ್ತಾರೆ. ಭಿಕ್ಷೆಯಿಂದ ಬಂದ ಹಣದಿಂದ ಆಹಾರ, ದವಸ ಧಾನ್ಯಗಳಿಂದ ಜೀವನವನ್ನು ನಡೆಸುತ್ತಿದ್ದಾರೆ. ಇದರಿಂದಾಗಿ ಇವರ ಜೀವನ ವಿಧಾನ ಬಹಳ ನಿಕೃಷ್ಟವಾಗಿರುವುದನ್ನು ಪ್ರಸ್ತುತ ದಿನಗಳಲ್ಲಿ ನೋಡಬಹುದು. ಈ ಸಮುದಾಯ ಸಂವಿಧಾನಬದ್ಧವಾಗಿ ಪರಿಶಿಷ್ಟ ಜಾತಿ ಪಟ್ಟಿಯಲ್ಲಿದೆ. ಈ ಸಮುದಾಯದಲ್ಲಿ ಸಾಕ್ಷರತೆ ತುಂಬಾ ಕಡಿಮೆ ಇರುವುದು ಕಂಡುಬರುತ್ತದೆ. ಸುಡುಗಾಡು ಸಿದ್ಧರು ಸಾಮಾಜಿಕ ಆರ್ಥಿಕ, ಶೈಕ್ಷಣಿಕವಾಗಿ ಪ್ರಸ್ತುತ ದಿನಗಳಲ್ಲಿ ಹಂತ ಹಂತವಾಗಿ ಬದಲಾವಣೆ ಹೊಂದುತ್ತಿದ್ದಾರೆ ಎಂದು ಹೇಳಬಹುದು.

ಅಲೆಮಾರಿ ಮತ್ತು ಅರೆ ಅಲೆಮಾರಿ ಬುಡಕಟ್ಟುಗಳು

ಮಾನವಶಾಸ್ತ್ರಜ್ಞರು ಆರಂಭದಲ್ಲಿ ಪಶುಪಾಲನೆಯ ಹಿನ್ನೆಲೆಯವರನ್ನು ಮಾತ್ರ ಅಲೆಮಾರಿ ಸಮುದಾಯದವರೆಂದು ಗುರುತಿಸಿದ್ದಾರೆ. **ಎನ್ಸೈಕ್ಲೋಪೆಡಿಯ ಬ್ರಿಟಾನಿಕಾದ ಪ್ರಕಾರ:** ಅಲೆಮಾರಿತನವು ಒಂದು ಜೀವನ ವಿಧಾನ. ಬೇಟೆ ಆಹಾರ ಸಂಗ್ರಹಣೆ, ಪಾಶುಪಾಲನೆ ಅಥವಾ ವ್ಯಾಪಾರಕ್ಕಾಗಿ ಮಾನವ ಒಂದೆಡೆ ನೆಲೆಯೂರದೇ, ದಿಕ್ಕುದೆಸೆಯಿಲ್ಲದೆ ಅಲೆಯುವಿಕೆಯನ್ನು ಅಲೆಮಾರಿತನ ಎನ್ನಲಾಗುತ್ತದೆ ಎಂದು ಅರ್ಥೈಸಿದೆ. ಪಶುಪಾಲನೆ ಅಥವಾ ಇತರೆ ಕಸುಬುಗಳ ಹಿನ್ನೆಲೆಯ

ಸಮುದಾಯಗಳು ಕಾಲಾಂತರದಲ್ಲಿ ಅಲ್ಲಲ್ಲಿ ಸ್ಥಾಯಿಯಾಗಿ ನೆಲೆನಿಂತರೂ ಪಶುಸಂಗೋಪನೆಗಾಗಿ ಅಥವಾ ಇತರೆ ಕಸುಬುಗಳ ನಿರ್ವಹಣೆಗಾಗಿ ಅಲೆಮಾರಿತನ ಅನಿವಾರ್ಯವಾಗಿ ಮುಂದುವರಿಸಿದರು. ಇಂತಹ ಸಮುದಾಯಗಳನ್ನು ಅರೆ ಅಲೆಮಾರಿ ಸಮುದಾಯಗಳೆಂದು ಕರೆಯಲಾಗುವುದು. ಸಮುದಾಯಗಳ ಆರ್ಥಿಕ, ಶೈಕ್ಷಣಿಕ, ರಾಜಕೀಯ, ಮತ್ತು ಸಾಮಾಜಿಕ ಭದ್ರತೆಯ ಹಿನ್ನೆಲೆಯಲ್ಲಿ ಅಲೆಮಾರಿ ಮತ್ತು ಅರೆ ಅಲೆಮಾರಿತನದ ಸ್ಥಿತಿಯನ್ನು ನಿರ್ಧರಿಸಬಹುದಾಗಿದೆ.[೧]

ಅಲೆಮಾರಿ ಮತ್ತು ಅರೆಅಲೆಮಾರಿ ಪದದ ಅರ್ಥ

"ಅಲೆಮಾರಿ ಎಂಬ ಪದಕ್ಕೆ ತಮಿಳಿನಲ್ಲಿ ಪೊಕ್ಕನ್, ತುಳುವಿನಲ್ಲಿ ತೆಂಡುಳಿ, ತೆಲುಗಿನಲ್ಲಿ ತಿರುಗುಬೋತು, ಮಲೆಯಾಳಂನಲ್ಲಿ ತೆಂಟ, ಮರಾಠಿಯಲ್ಲಿ ಭಟಕ್ಯಾ, ಹಿಂದಿಯಲ್ಲಿ ಸಂಚಾರಿ, ಘಮಂತು, ಗ್ರೀಕಿನಲ್ಲಿ ನೆಮಿನ್ ಲ್ಯಾಟನಿನಲ್ಲಿ ನೋಮಾಸ್ ಇಂಗ್ಲಿಷಿನಲ್ಲಿ ನೊಮ್ಯಾಡ್ ಜೊತೆಗೆ ಪರದೇಶಿ ನೆಲೆಯಿಲ್ಲದವರು, ದೇಶ ಸಂಚಾರಿಗಳ, ಪರಸ್ಥಳದವರು, ಹೊರಗಡೆಯವರು, ಉಚಲ್ಯಾ, ಜಿಪ್ಸಿ, ಬೀಡು ಬಿಡುವವರು, ಗುಳೆ ಹೋಗುವವರು, ವಲಸಿಗರು, ಗಿರಿಜನರು, ಸನ್ಯಾಸಿಗಳು ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ಭಿಕ್ಷಾವೃತ್ತಿಯಲ್ಲಿ ತಮಿಳಿನಲ್ಲಿ ಪಿಚ್ಚೈಕರಾ, ಹಿಂದಿಯಲ್ಲಿ ಭಿಕಾರಿ, ಕನ್ನಡದಲ್ಲಿ ಭಿಕ್ಷುಕರೆಂದುತಲೂ ಗುರುತಿಸಲಾಗಿದೆ. ಜನಪದರು ಇವರನ್ನು ಗೋಸಾಯಿ, ಜಂಗಾಲಿ, ಜಂಗಮ, ಜೋಗಿ, ದಾಸಯ್ಯ ಎಂದು ಕರೆಯುವರು."[೨]

ಅಲೆಮಾರಿ ಹಾಗೂ ಅರೆ-ಅಲೆಮಾರಿ ಬುಡಕಟ್ಟುಗಳ ವ್ಯಾಖ್ಯೆ:

೧. 'ಅಲೆಮಾರಿ ಹಾಗೂ ಅರೆ ಅಲೆಮಾರಿ ಬುಡಕಟ್ಟುಗಳಿಗೆ ಭಾರತ ಸರಕಾರ ಅಧಿಕೃತವಾಗಿ ಯಾವ ವ್ಯಾಖ್ಯಾನವನ್ನು ನೀಡಿಲ್ಲ. ೧೯೩೧ರ ಭಾರತದ ಜನಗಣತಿಯಲ್ಲಿ ಮಾಡಲಾದ ಅಲೆಮಾರಿ ಬುಡಕಟ್ಟುಗಳ ಪಟ್ಟಿಯನ್ನು ಮಾತ್ರ ವಿಶ್ವಾಸನೀಯ ದಾಖಲೆ ಎಂದು ಹೇಳಬಹುದು.'[೩]

೨.೧ ಸುಡುಗಾಡು ಸಿದ್ಧ ಪದ ನಿಷ್ಪತ್ತಿ:

'ಸಿದ್ಧ ಎಂಬ ಪದವು ಷಿಧು ಎಂದರೆ ಸಂರಾದ್ಧಾ ಸಿಧ್ಯತಿ ಎಂಬ ಧಾತುವಿನಿಂದ ಹುಟ್ಟಿಕೊಂಡಿದೆ. ಓದನ ಸಿದ್ಧ (ಅನ್ನ ತಯಾರಾಗಿದೆ) (ಸಿದ್ಧ) ಮುನ್ನಂಪರಿತ್ಯಜ್ಯ ಮಟತಿ ದುರ್ಮತಿ ಎಂದರೆ ಸಿದ್ಧವಾದ (ತಯಾರಾದ) ಅನ್ನವನ್ನು ದುರ್ಮತಿ ತಿರುಪೆಗೆ ಹೊರಟಿದ್ದಾನೆ. ಈ ಪದ ಸಿದ್ಧ ಎಂದರೆ ಉಣ್ಣಲು ತಿನ್ನಲು ತಯಾರಾದ ಮತ್ತು ಅಣಿಯಾದ ಎಂಬ ಅರ್ಥಗಳಾಗುತ್ತದೆ. ಇಷ್ಟಾರ್ಥ ಸಿದ್ಧಿ ಎಂದು ಹೇಳವಾಗ ಬಯಸಿದ ಹೇಳಿದ ಇಷ್ಟ ಮಾಡಿದ ಇಚ್ಚೆಸಿದ ಎಂಬೆಲ್ಲ ಪದಗಳು ಸಿದ್ಧಿ ಪದಕ್ಕೆ ಅನ್ವಯಿಸುತ್ತವೆ, ಸಂಸ್ಕೃತದಲ್ಲಿ ಧಾತುಗಳಿವೆ ಎರಡು ಅವಸ್ಥೆಗಳನ್ನು ಹೇಳಿದೆ.'

೧. ಸಿದ್ಧಾವಸ್ಥೆ

೨. ಸಾಧ್ಯವಸ್ಥೆಪಾಕ

'ಸಿದ್ಧಾವಸ್ಥೆಯಾದರೆ ಪಚಟಿ ಸಾಧ್ಯವಸ್ಥೆ ಇಲ್ಲ ಸಿದ್ಧ ಎಂದರೆ ಮುಗಿದ ನಿಷ್ಪನ್ನವಾದ ಎಂದರ್ಥವಾಗುತ್ತದೆ. ಸಿದ್ಧಿಯಶಸ್ವಿ ಮಾಡಿಕೊಳ್ಳುದು, ತನ್ನದಾಗಿಸಿಕೊಳ್ಳವುದು ಅದರಲ್ಲಿ ಫಲಪ್ರಾಪ್ತಿಯಾಗುವುದು ಇವುಗಳ ಆಧಾರದಿಂದ ಸಿದ್ಧ ಎಂದರೆ ಸಂಪೂರ್ಣವಾದ ಪರಿಪೂರ್ಣವಾದ ಪಕ್ವವಾದ ತಾನು ಹಿಡಿದ ಕೆಲಸದಲ್ಲಿ ಗುರಿಯನ್ನು ತಲುಪಿದ ಒಂದು ದಡವನ್ನು ಸೇರಿದ ಸಾಧನೆಯನ್ನು ಮಟ್ಟಿ ತನ್ನ ಇಚ್ಛೆಯನ್ನು ಸಾಧಿಸಿಕೊಂಡ ಎಂದರ್ಥಗಳಾಗುತ್ತವೆ.'[೪]

ಕಿಟಲ್ ರವರ ಪ್ರಕಾರ: 'ಸುಡುಗಾಡು ಸಿದ್ಧ ಪದವನ್ನು ಅವರು ಸುಡ(that burns fire) ಸುಡನಾಸ, ಸಡುನಾಶಿ ಎಂಬ ಅರ್ಥವನ್ನು ಕೊಟ್ಟಿದ್ದಾರೆ ಸುಡು (to burn to roast to back to fire off, as gun to consune to be consumed by fair to burn: to be verey hot to be effected with a stnasensation of heart to feel excess of heat to be roastad) ಎಂಬ ನಾನಾರ್ಥಗಳಿವೆ (ಸುಡು ಸೂಡ ಸೋಡ (burning) ಸುಡುಗರ (anevil spirit that burns ignistatnus) ಸುಡುಗಾಡು (N. of sudra and holeyamen) ಸುಡುಗಾಡು ಪಿತೃಕಾನನ ಸ್ಮಶಾನ ಸೊಡಬಲಿ ನಾಡೆಲ್ಲಿ ಬಿಟ್ಟರು ಸುಡುಗಾಡು ಬಿಡದು ("ಸುಡುಗಾಡಿಗೆ ಹೋದ ಹೆಣ ತಿರುಗೀ ಬನ್ದೀತೆ? ಸೂಳೆಗೆ ಕೊಟ್ಟ ಹಣ ಸುಡುಗಾಡಿಗೆ ಹೋದ ಹೆಣ ಎರಡು ಸಮ ತೀರುಗಿಬರಲ್ಲ")ಸುಡುಗಾಡಿಗೆ ಕುರಿತಂತೆ ಅನೇಕ ವಿಚಾರಗಳು ಅವರು ವ್ಯಕ್ತ ಪಡಿಸಿದ್ದಾರೆ (A disagreeable world) ಎಂದು ಕಿಟಲ್ ಅವರು ಹೇಳುತ್ತ ಸುಡುಗಾಡು ಸಿದ್ಧ ಪದ ಕುರಿತು ಅದೇ ಪುಟದಲ್ಲಿ ಸುಡುಗಾಡು ಸಿದ್ಧ (A word that bourns very kind word) ಸೆಡಬಲಿ ಸೊಡಬಲಿ – ಸುಡುಬಾಡು ಎಂದು ಹೇಳಿದ್ದಾರೆ.'

'ಕಾಡು (kadu) ಗಾಡು (Gadu) ಕುರಿತು ವಿಚಾರ: ಕಾಡು (kadu) ಕಾಡ (A forest a jungle : A wild) ಅರಣ್ಯ ಕಾನನ ಪಟು ಬಿಂಜ ಅಡವಿ ವನ ಮುಂತಾದವುಗಳು ಕಾಡು ಕಾರು ಕಡಲು ಕಡ್ಜಿ, ಕಾಡು, ಕೋಟಿಗೆ ಮಕರ ಸಂಕ್ರಾಂನ್ತಿಯೇ? ಕಾಡಲ್ಲಿ ಹೋಮ್ಬಾಳೆ ಬಯಸಿದ ಹಾಗೆ ಕಾಡಿನಲ್ಲಿ ತಿರುಗಿ ಕಟ್ಟಿಗೆ ಇಲ್ಲಾ ಎನ ಹಾಗೆ, ಕಾಡಿನಲ್ಲಿ ಹುಲಿ ಕೂಗಿದರೆ ನಾಡಿನಲ್ಲಿ ಒಕ್ಕಲು ತೆಗೆದರಸ್ತೆ ಕಾಡಿಗೆ ಅತ್ತು ಕಣ್ಣು ಪೋಟೆ ಹೋಯಿತು (pras) ಕಾಡು ಕಪಿ ಬಲ್ಲುದೇ ಮಾಣಿಕದ ಬೆಲೆಯ? ಕಗ್ಗಾಡು ಮಸಣ ಗಾಡು– ಮೋಹುಗಾಡು ಸುಡುಗಾಡು ಹಳ್ಳಿಗಾಡು ಹೆಗ್ಗಾಡು – ಕಾಡು (A jungle fellow a lazy good nothing man) ಕಡ ಅಶ್ವಸ್ಥ ಮುಂತಾದ ಪದಗಳನ್ನು ಕಿಟಲ್ ಅವರು ಕಾಡು ಎಂಬುದು ನಾಮಪದ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟವಾದ ಕನ್ನಡ ನಿಘಂಟು ಮೂರನೆಯ ಸಂಪುಟದಲ್ಲಿ ಕಾಡ ಕಾಟ ಎಂದರೆ ಅಡವಿ ಅರಣ್ಯ ಕಾನನ ಕಾಡು ಅವಹೇಳನೇ ಅವಮಾನ ಮಾಡು ಬಾಧೆ ಮಾಡು)

ಎಂಬ ಅರ್ಥಗಳಿವೆ. ಇವುಗಳಿಂದ ಸುಡುಗಾಡು ಸಿದ್ಧ ಎಂಬ ಪದದ ಅರ್ಥ ಶವದಹನ ಮಾಡುವ ಸ್ಥಳದ ಒಡೆಯರೆಂದು ತಿಳಿಯುತ್ತದೆ. ಸ್ಮಶಾನದ ಒಡೆಯರಾದ ಸುಡುಗಾಡು ಸಿದ್ಧರು ಸ್ಮಶಾನದಲ್ಲಿದ್ದುಕೊಂಡು ಮಂತ್ರ ಯಂತ್ರ-ತಂತ್ರಗಳಿಗೆ ಸಂಬಂಧಿಸಿದಂತೆ ಸಾಧನೆಯಲ್ಲಿ ಸಿದ್ಧಗಳಾದರೆಂಬುದು ಹೇಳಬಹುದು.'

೨.೨ ಪರ್ಯಾಯ ನಾಮಗಳು:

ಸುಡುಗಾಡು ಸಿದ್ಧರು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಭಿಕ್ಷಾಟನೆಗೆಂದು ಹೋದಾಗ ಆಯಾ ಪ್ರದೇಶದಲ್ಲಿರುವ ಜನರು ಇವರನ್ನು ವಿಭಿನ್ನ ಪರ್ಯಾಯ ಹೆಸರುಗಳಿಂದ ಕರೆಯುವುದು ಕಂಡುಬರುತ್ತದೆ.

೧. ಕಾಡು-ಸಿದ್ದರು ಕಾಡು ಪಾಪೆಯರು

೨. ಮಸಣದ ಒಡೆಯರು - ಸ್ಮಶಾನದಲ್ಲಿರುವವರು

೩. ನಿರಂಜಯ್ಯಗಳು

೪. ಕಾಪಪಾಪುಲಿ, ಕಾಟಿಪಾಪುಲು

೫. ಸ್ಮಶಾನ ಜೋಗಿಗಳು

೬. ಬುಡಗ-ಜಂಗಮ

ಸೇಡಂನಲ್ಲಿ ಕಾಡುಸಿದ್ಧರು, ಬುಡಗಜಂಗಮ, ಕಾಡುಪಾಪೆ ಮತ್ತು ಇನ್ನೊಂದು ಪ್ರದೇಶದಲ್ಲಿ ಕೊಡ್ಲದಲ್ಲಿ ಬುಡಗಜಂಗಮ ಎಂದು ಕರೆಯುತ್ತಾರೆ. 'ಇಲ್ಲಿ ಸುಡು ಕ್ರಿಯಾಪದವಾಗಿರುತ್ತದೆ, ಮತ್ತು ಕಾಡು-ಗಾಡು ಎನ್ನುವಲ್ಲಿ ಕ ಕಾರ ಗ ಕಾರವಾಗಿರುತ್ತದೆ ಅಲ್ಲದೆ ಇದು ನಾಮ ಪದವಾಗಿದೆ. ಸುಡುಗಾಡು ಇದ್ದುಕೊಂಡು ಶವದ ಅಂತ್ಯಕ್ರಿಯೆಗೆ ಅನುಮತಿ ಕೊಡುವವರು ಇವರಾಗಿರುವುದರಿಂದ ಇವರಿಗೆ ಸುಡುಗಾಡು ಸಿದ್ಧ ಎಂಬ ಹೆಸರು ಪ್ರಾಪ್ತವಾಗಿದೆ.'[೫]

೨.೩ ಸುಡುಗಾಡು ಸಿದ್ಧರ ಸೃಷ್ಠಿ ಪುರಾಣಗಳು

'ಸುಡುಗಾಡು ಸಿದ್ಧರು ಅಲೆಮಾರಿಗಳು. ಸುಡುಗಾಡು ಸಿದ್ಧರ ಬಗೆಗೆ ಐತಿಹ್ಯ, ಪುರಾಣ, ಕಾವ್ಯ, ಮತ್ತು ಶಿವಶರಣರ ವಚನಗಳನ್ನು ಗಮನಿಸಿದಾಗ ಅವರ ಪ್ರಾಚೀನತೆಯ ಬಗೆಗೆ ಮಾಹಿತಿ ದೊರೆಯುತ್ತಿದೆ. ಸುಡುಗಾಡು ಸಿದ್ಧರು ತಮ್ಮ ಪ್ರಾಚೀನತೆಯ ಬಗೆಗೆ ಈ ರೀತಿಯಾಗಿ ಹೇಳುತ್ತಾರೆ.'[೬]

ಐತಿಹ್ಯ ೧

'ಈಶ್ವರ ತಪಸ್ಸು ಮಾಡುವಾಗ ಅವನ ಸೇವೆಗಾಗಿ ಪಾರ್ವತಿ ನವಕೋಟಿ ಸಿದ್ಧರನ್ನು ಸೃಷ್ಟಿಸಿದಳೆಂದೂ ಆ ಕಾರ್ಯ ಮುಗಿದ ನಂತರ ವಿಭೂತಿ, ಕಾವಿ, ಕಮಂಡಲ, ರುದ್ರಾಕ್ಷಿ, ಶಿವಗಂಟೆಯನ್ನು ಕೊಟ್ಟು ಭೂಲೋಕಕ್ಕೆ ಕಳುಹಿಸಿದಳೆಂದೂ ಹೇಳುತ್ತಾರೆ.'[೭]

ಐತಿಹ್ಯ. ೨

'ಘೋರಕ್ಷಕ ಎಂಬ' ರಾಕ್ಷಸನು ದೇವಾನುದೇತೆಗಳಿಗೆ ತುಂಬಾ ಕಷ್ಟ ಕೊಡುತ್ತಿದ್ದನು. ಯಂತ್ರ–ಮಂತ್ರ–ಮಾಟಗಳಲ್ಲಿ ತುಂಬಾ ನಿಪುಣಗಿದ್ದನು. ಸಿದ್ಧರನ್ನು ಈತ ತನ್ನ ಮನೆಯ ಕಾವಲಿಗಾಗಿ ಇಟ್ಟುಕೊಂಡಿದ್ದ. ಘೋರಕ್ಷಕನ ಉಪಟಳ ತಾಳಲಾರದೆ ಅವರು ಪರಶಿವನ ಮೊರೆ ಹೊಕ್ಕರು. ಆತ ರೇವಣಸಿದ್ಧನನ್ನು ಕಳುಹಿಸಿದ. ಈಶ್ವರ ಮಾಯಾಜಾಲದಿಂದ ಚೇಳುಗಳನ್ನು ಸೃಷ್ಟಿಸಿದ, ಘೋರಕ್ಷಕನ ಸಂಹಾರಕ್ಕಾಗಿ ಬರುತ್ತಿದ್ದ ರೇವಣಸಿದ್ಧನಿಗೆ ಕಾವಲು ಕಾಯುತ್ತಿದ್ದ ಸಿದ್ಧರು ತುಂಬಾ ತೊಂದರೆ ಕೊಟ್ಟರು. ಕೊನೆಗೆ ಸಿಟ್ಟಿನಿಂದ ಉರಿನೇತ್ರ ಬಿಟ್ಟು ಎಲ್ಲರನ್ನೂ ಭಸ್ಮ ಮಾಡಿದ. ಕೊನೆಗೆ ಘೋರಕ್ಷಕನನ್ನು ಸಂಹರಿಸಿ ಹಿಂದಿರುಗಿ ಬರುವಾಗ ಸ್ಮಶಾನದಲ್ಲಿ ಬೂದಿಯಾಗಿ ಬಿದ್ದಿದ್ದ ಸಿದ್ಧರನ್ನು ನೋಡಿ ಕರುಣೆ ಬಂದು ಬದುಕಿಸಿದನಂತೆ ಇವರು ಸುಡುಗಾಡಿನಲ್ಲಿ ಜನಿಸಿದ್ದರಿಂದ ಸುಡುಗಾಡು ಸಿದ್ಧರೆಂದು ನಾಮಕರಣವಾಯಿತೆಂದೂ, ತಾವು ಶಿವನ ವಂಶಸ್ಥರೆಂದೂ ಹೇಳಿಕೊಳ್ಳುತ್ತಾರೆ.'[೮]

ಐತಿಹ್ಯ. ೩

'ಬಹಳ ವರ್ಷಗಳ ಹಿಂದೆ ಸಿದ್ಧಯ್ಯ ಎಂಬುವನು ಸುಡುಗಾಡನ್ನು ಕಾವಲು ಕಾಯತ್ತಿದ್ದನಂತೆ. ಹೆಣಗಳನ್ನು ಸುಡುಲಿಕ್ಕೆ ಮತ್ತು ಮಣ್ಣು ಮುಚ್ಚಲಿಕ್ಕೆ ಸ್ಥಳಕೊಟ್ಟು ಮೂರು ಪೈಸೆ ಮತ್ತು ಅಕ್ಕಿ, ಗಜಪಟ್ಟಿ ತೆಗೆದುಕೊಳ್ಳುತ್ತಿದ್ದನು. ಒಂದು ವೇಳೆ ಮೂರು ಪೈಸೆ ಮತ್ತು ಗಜಪಟ್ಟಿ ಕೊಡದಿದ್ದರೆ ಅವನು ಶವಕ್ಕೆ ಸಂಸ್ಕಾರ ಮಾಡಲು ಸ್ಥಳ ಕೊಡುತ್ತಿರಲಿಲ್ಲ. ಇವನು ಸುಡುಗಾಡಿನ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದ ಆ ಸಿದ್ಧಯ್ಯನಿಗೆ ಜನರು ಸುಡುಗಾಡಿನ ಸಿದ್ಧಯ್ಯ ಎಂದು ಕರೆಯುತ್ತಿದ್ದರು. ಮುಂದೆ ಇವನ ಮಕ್ಕಳು ಮೊಮ್ಮಕ್ಕಳು ಹಾಗೆ ಸುಡುಗಾಡಿನಲ್ಲಿರುವುದರಿಂದ ಸುಡುಗಾಡು ಸಿದ್ಧರೆಂದು ಕರೆಯಲಾಯಿತು.'[೯]

ಐತಿಹ್ಯ. ೪

'ಒಮ್ಮೆ ಭುಜಳಂಕ ರಾಜನಿಗೂ ಬಸವಣ್ಣನಿಗೆ ವಾದ ಬಿತ್ತು. ಸುಳ್ಳು ಖರೆ ನೋಡಬೇಕು ಎಂಬ ರಾಜ ಮನಸ್ಸು ಮಾಡ್ದ. ಹ್ಯಾಂಗರ ಮಾಡಿ ಬಸವಣ್ಣನನ್ನುವಾದದಲ್ಲಿ ಸೋಲಿಸಬೇಕು ಎಂದು ಸಮಯ ಕಾಯುತ್ತಿದ್ದ. ಒಂದು ದಿನ ಕುರುಬರವಳಿಗೆ ಕರೆಯಿಸಿ, ನಿನ್ನ ಗಂಡ ಸತ್ತನೆಂದು ಹೇಳು. ನೋಡೋಣ ಬಸವಣ್ಣ ಸತ್ಯವಂತನೆಂಬುದು ಗೊತಾಗುತ್ತದೆ. ರಾಜರ ಮಾತು ಕೇಳಿ ಗಂಡನನ್ನು ಬಿಳಿ ಕಂಬಳಿಯ ಮ್ಯಾಲ ಮಲಗಿಸಿ, ಅದರ ಮೇಲೆ ಕರಿ ಕಂಬಳಿ ಹೊದಿಸಿದಳು. ಹೊಯ್ಯಕೋತ ಬಸವಣ್ಣನ ಹತ್ತಿರ ಹೋದಳು. ಎನೆ ತಾಯಿ ಎನ್ ಕಡಿಮೆ ಬಿದ್ದಾದ ಎಂದು ಬಸವಣ್ಣ ಕೇಳ್ದ. ಆಗ ಅವಳು ನನ್ನ ಗಂಡ ಸತ್ತಾನ ಅಂತ ಹೇಳ್ದಳು. ಇಲ್ಲ ತಾಯಿ ಬದುಕಿದ್ದಾನ ಮನೆಗೆ ಹೋಗಿ ನೋಡು ಅಂದ. ಅದ್ರು ಅವಳು ಗಂಡ ಸತ್ತಾನ ಅಂತ ಅಂದಳು. ಹಾಗಾದರ ಸತ್ತಾನ ಹೋಗು ಅಂದ. ಮನಿಗಿ ಬಂದು ನೋಡತಾಳ ಖರೆನೆ ಗಂಡ

ಸತ್ತಿದ್ದ. ಹೆಣ ಒಯ್ದು ಮಣ್ಣ ಮಾಡಿದ್ರು. ಮೂರನೆಯ ದಿವಸಕ್ಕೆ ಹಾಲು ಹಾಕಲು ನಡೆದರು ಗೋರಿ ಮ್ಯಾಲ ಕೆಸರಿನ ಬಸವಣ್ಣನ ಮಾಡಿ ಇಟ್ಟರು. ಅದೇ ದಾರಿ ಹಿಡಕಂಡು ಬಸವಣ್ಣ ಬರುತಾಯಿದ್ದ. ಈ ಪ್ರಸಂಗ ನೋಡಿ ಕರುಣಿ ಬಂದು ಕುಣ್ಯಾನ ಹೆಣ ಮ್ಯಾಲಕ್ಕೆ ತೆಗದು ಜೀವಕಾಲ ಕಡ್ಡಿ ತಂದು ಜೀವಂತ ಮಾಡ್ದ. ಎಲ್ಲರೂ ದೂರದಿಂದ ಹಾಲ ಹಾಕಿ ಹೋದರು. ಹೆಣ ಜೀವಂತ ಆಯಿತು. ಶಿವಶಿವ ಎಂದು ಹೊರಳಿದ. ಬಸವಣ್ಣ ಹೆಣದ ಅರ್ಬಿ ಹರ್ದ್ದು ಮೂರು ಜೋಳಿಗೆ ಮಾಡಿದ. ತನ್ನ ಮೈ ಮೇಲಿನ ಗಲೀಪ ಕೊಟ್ಟ. ರುದ್ರಾಕ್ಷಿ ಕೊಟ್ಟ. ರೂಪಕೊಟ್ಟ, ರೂಪಕೊಟ್ಟ. ಜೋಳಿಗೆ ಕೊಟ್ಟ ಸುಡುಗಾಡಿನಲ್ಲಿ ಪುನಃ ನೀನು ಹುಟ್ಟಿರುವುದರಿಂದ ಊರಿಗೆ ಬರುವ ಹಾಗಿಲ್ಲ. ನೀನು ಸುಡುಗಾಡಿಗೆ ಅಧಿಕಾರಿಯಾಗು ಯಾವಾಗಲೂ ಅಧಿಕಾರದಲ್ಲಿದ್ದಕೊಂಡು ಭಿಕ್ಷೆ ಬೇಡಿಕೊಂಡು ಹೊಟ್ಟಿ ತುಂಬಿಸಿಕೊಳ್ಳು ದಾನಕೊಟ್ಟ ಮನಿ ನಮ್ಮದೆ ದಾನ ಕೊಡದ ಮನಿಯೂ ನಮ್ಮದೆ ಸಿಟ್ಟಿಗೆ ಬರಬೇಡ. ಎಂದು ಆಶೀರ್ವದಿಸಿ ಬಸವಣ್ಣ ಹೋದನು.'[೧೦]

ಸುಡುಗಾಡು ಸಿದ್ಧರ ಮೂಲ:

ಸುಡುಗಾಡು ಸಿದ್ಧರು ಮೂಲ ಆಂದ್ರ ಪ್ರದೇಶ ಎಂದು ಹೇಳಲಾಗುತ್ತಿದೆ. ಇವರು ಶ್ರೀಶೈಲದ ಸುತ್ತ ಮುತ್ತಲಿನ ಗುಡ್ಡ-ಬೆಟ್ಟಗಳಲ್ಲಿ ವಾಸವಾಗಿದ್ದುಕೊಂಡು ದೇವರ ಪೂಜೆ ಇತರೆ ಸೇವೆಗಳಲ್ಲಿ ನಿರತರಾಗಿದ್ದವರು, ಎಂದು ಹೇಳಲಾಗುತ್ತಿದೆ. ಇವರು ಮಠದ ಗುರುಗಳು ಹೇಳಿದ್ದನ್ನು ಕೇಳಿಕೊಂಡು ಗುಡ್ಡ-ಬೆಟ್ಟ ಕಾಯ್ದುಕೊಂಡು ಜೀವನ ನಡೆಸುತ್ತಿದ್ದರು. ಗುಡ್ಡದಲ್ಲಿ ಬೆಳೆದ ಸುಗಂಧ ಔಷಧ, ಗಿಡಮೂಲಕೆಗಳನ್ನು ಗುರುಗಳಿಗೆ ಒಪ್ಪಿಸಿ ಅವರಿಂದ ಹಿಟ್ಟು-ಸಾರು ಮತ್ತು ಗಂಜಿಯನ್ನು ಪಡೆದು ಅದನ್ನೇ ಸೇವಿಸಿ ಜೀವನ ಸಾಗಿಸುತ್ತ ಬಂದವರು. ಒಂದು ಕಾಲದಲ್ಲಿ ಅನಾಗರಿಕರಂತೆ ವರ್ತಿಸುತ್ತಿದ್ದ ಇವರು ದೇವರು ದಿಂಡರಲ್ಲಿ ನಂಬಿಕೆ ಇಟ್ಟು ಬದುಕಿದವರು. ನಿರ್ಜನ ಪ್ರದೇಶದಲ್ಲಿದ್ದು ಗೆಡ್ಡೆ-ಗೆಣಸು ತಿನ್ನುತ್ತಾ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಸಂಚರಿಸುತ್ತಾ ಜೀವನ ಸಾಗಿಸಿದವರು ಇವರು ಇಂದೂ ಸಹ ಕೆಲ ಪ್ರದೇಶಗಳಲ್ಲಿ ಅಲೆಮಾರಿಗಳಾಗಿರುವುದು ಕಂಡು ಬರುತ್ತದೆ.

'ಇವರು ಆಂಧ್ರದಿಂದ ಕರ್ನಾಟಕ ಹಾಗೂ ಮಹಾರಾಷ್ಟ ರಾಜ್ಯಗಳಿಗೆ ವಲಸೆ ಬಂದಿರಬಹುದು. ಪ್ರಾಯಶಃ ೧೨ನೇ ಶತಮಾನದಿಂದೀಚೆಗೆ ಸಂಚರಿಸುತ್ತಾ ಕರ್ನಾಟಕಕ್ಕೆ ಬಂದಿರಬಹುದೆಂದು ಊಹಿಸಲಾಗಿದೆ. ಕರ್ನಾಟಕದಲ್ಲಿ ಕಂಡುಬರುವ ಸುಡುಗಾಡು ಸಿದ್ಧರು ಕಲಬುರಗಿ ಜಿಲ್ಲೆಯ ಸೇಡಂ ತಾಲೂಕಿನ ಕಲಕಮ್ಮ ರೋಡ, ಬಸವನಗರ, ಶಾಂತಿನಗರ, ವೆಂಕಟೇಶನಗರ, ಕ್ಲೋಡ ಇತರ ಇನ್ನೂ ಇತರೆ ಜಿಲ್ಲೆಗಳಲ್ಲಿ, ತಾಲೂಕುಗಳಲ್ಲಿ ಸುಡುಗಾಡು ಸಿದ್ಧರು ಹರಿದು ಹಂಚಿ ಹೋಗಿದ್ದಾರೆ. ಸುಡುಗಾಡು ಸಿದ್ಧರು ಬಹಳ ಹಿಂದಿನ ಕಾಲದಲ್ಲಿ ಸ್ಮಶಾನ ಕಾಯುವುದು, ಹಳ್ಳಿಯಿಂದ ಹಳ್ಳಿಗೆ ಸಂಚರಿಸಿ ಭಿಕ್ಷೆ ಬೇಡವುದನ್ನೇ ವೃತ್ತಿಯಾಗಿಸಿಕೊಂಡಿದ್ದರು ಎಂದು ಹೇಳಬಹುದು.'

ಪ್ರಸ್ತುತ ದಿನಗಳಲ್ಲಿ ಹಳ್ಳಿಗಳಲ್ಲಿ ಸುಡುಗಾಡು ಸಿದ್ಧರನ್ನು ಪ್ರವೇಶಿಸಲು ಅಥವಾ ವಾಸಿಸಲು ಬಿಡವುದಿಲ್ಲ. ಏಕೆಂದರೆ ಜನರಿಗೆ ಇವರನ್ನು ಕಂಡರೆ ಭಯ. ಇವರು ಮಾಟ, ಮಂತ್ರ,. ವಶೀಕರಣ ಮಾಡುವುದರಲ್ಲಿ ನಿಪುಣರು ಎಂದು ತಿಳಿದುಕೊಂಡಿದ್ದಾರೆ. ಆದ ಕಾರಣ ಊರಿನ ಜನರು ಇವರನ್ನು ಹತ್ತಿರ ಸೇರಿಸಿಕೊಳ್ಳುವುದಿಲ್ಲ. ಹೀಗಾಗಿ ಇವರು ಊರ ಹೊರಗೆ ಸ್ಮಶಾನದ ಹತ್ತಿರ ನೆಲೆ ಕಂಡುಕೊಂಡಿರುತ್ತಾರೆ.

ಪ್ರಸ್ತುತ ದಿನಗಳಲ್ಲಿ ಸುಡುಗಾಡು ಸಿದ್ಧರು ಎಂದು ಹೇಳಿಕೊಳ್ಳದೇ ದಾಸರು, ಜಂಗಮ ಜನಾಂಗದವರು ಎಂದು ಹೇಳಿ, ಹಳ್ಳಿ ಮತ್ತು ನಗರ ಪ್ರದೇಶಗಳಲ್ಲಿ ನಿವೇಶನ ಪಡೆದುಕೊಂಡಿದ್ದಾರೆ. ಅವರ ಮೂಲ ವೃತ್ತಿ ಸ್ವಲ್ಪ ಕಡಿಮೆಯಾಗಿದೆ ಏಕೆಂದರೆ ಕಾನೂನಿನ ಮೂಲಕ ಭಿಕ್ಷೆ ಬೇಡವುದು ಅಪರಾಧ. ಸೇಡಂ ತಾಲೂಕಿನ ಸಾಯಿಬಾಬ ಎಂಬ ಸುಡುಗಾಡು ಸಿದ್ಧ ಭಿಕ್ಷೆ ಬೇಡುವ ಸಂದರ್ಭದಲ್ಲಿ ಸೇಡಂ ತಾಲೂಕಿನ ಪೋಲಿಸ್ ಅಧಿಕಾರಿಗಳು ಬಂಧಿಸಿರುವುದನ್ನು ನಾನು ಕ್ಷೇತ್ರಕಾರ್ಯಕ್ಕೆ ಹೋದ ಸಂದರ್ಭದಲ್ಲಿ ಸಾಯಿಬಾಬ ಎಂಬ ವ್ಯಕ್ತಿ ನನ್ನ ಗಮನಕ್ಕೆ ತಂದರು. ಹಾಗೂ ಆತನಿಂದ ಪೋಲಿಸರು ರೂ.೩೫೦೦ ದಂಡ ಪಡೆದುಕೊಂಡು ನನ್ನನು ಬಿಟ್ಟಿದ್ದಾರೆ ಎಂಬ ಮಾಹಿತಿ ನೀಡಿದರು.

೨.೪ ಕಲಬುರಗಿ ಜಿಲ್ಲೆಯಲ್ಲಿ ಸುಡುಗಾಡು ಸಿದ್ಧರ ನೆಲೆಗಳು:

ಸುಡುಗಾಡು ಸಿದ್ಧರು ಸಾಮಾನ್ಯವಾಗಿ ರೈಲು ಹಳಿಗಳ ಅಕ್ಕ ಪಕ್ಕದಲ್ಲಿ ಹಾಗೂ ಬಯಲು ನಿರ್ಜನ ಪ್ರದೇಶಗಳಲ್ಲಿ ಇವರು ಟೆಂಟ ಹಾಕಿಕೊಂಡು ನೆಲೆಸಿರುತ್ತಾರೆ. ಕಲಬುರಗಿ ಜಿಲ್ಲೆಯ ಯಾದಗಿರ, ಚಿತ್ತಾಪುರ, ವಾಡಿ, ಶಹಬಾದ, ಭಂಕೂರ, ಅಫ್ಜಲಪೂರ ತಾಲೂಕುಗಳಲ್ಲಿ ಸುಡುಗಾಡು ಸಿದ್ದರು ನೆಲೆಗಳಿರುವುದನ್ನು ಕಾಣಬಹುದು. ಸುಡುಗಾಡು ಸಿದ್ಧರು ಪೂರ್ಣ ಪ್ರಮಾಣದಲ್ಲಿ ಇಂದೂ ಸಹ ಒಂದು ಶಾಶ್ವತ ನೆಲೆಯನ್ನು ಕಂಡು ಕೊಂಡಿಲ್ಲ ಎಂದು ಹೇಳಬಹುದು.

ಸೇಡಂ ತಾಲೂಕಿನ ಚಾರಿತ್ರಿಕ ಹಿನ್ನೆಲೆ:

'ಕ್ರಿ.ಶ. ೭೫೩-೯೭೩ ರಾಷ್ಟ್ರಕೂಟರ ಎರಡನೇ ಕರ್ಕನನ್ನು ಪರಭವಗೊಳಿಸಿ ಮಾನ್ಯಖೇಡ ಸೇಡಂವನ್ನು ಗೆದ್ದುಕೊಂಡನು. ರಾಷ್ಟ್ರಕೂಟರ ಕ್ರಿ.ಶ. ೯೭೩ರಲ್ಲಿ ವಿಶಾಲ ಸಾಮ್ರಾಜ್ಯವನ್ನು ಸ್ಥಾಪಿಸಿದರು. ರಾಷ್ಟ್ರಕೂಟರ ರಾಜಧಾನಿ ಮಾನ್ಯಖೇಡ (ಕಲಬುರಗಿ ಜಿಲ್ಲೆಯ ಸೇಡಂ ತಾಲೂಕಿನ ಹತ್ತಿರ ಇದೆ. ಒಂದು ಕಾಲದಲ್ಲಿ ರಾಷ್ಟ್ರಕೂಟರ ರಾಜಧಾನಿ. ಸೇಡಂ ತಾಲೂಕಿನಲ್ಲಿ ರಾಷ್ಟ್ರಕೂಟರು ಆಳ್ವಿಕೆ ಮಾಡಿರುವುದು ಕಂಡುಬರುತ್ತದೆ. ಇಂತಹ ಸಂಪತ್ತು ಭರಿತ ರಾಷ್ಟ್ರಕೂಟರ ನೆಲೆ. ಕನ್ನಡದ ಮೊಟ್ಟ ಮೊದಲ ಗ್ರಂಥವಾದ ಕವಿರಾಜ ಮಾರ್ಗದಲ್ಲಿ ಸೇಡಂ ತಾಲೂಕಿನ ಉಲ್ಲೇಖವಿದೆ. ಹಾಗಾಗಿ ಹಿಂದೆ ಸೇಡಂ ಸಂಪತ್ತು ಭರಿತವಾಗಿತ್ತು ಎಂಬುದನ್ನು ಕವಿರಾಜಮಾರ್ಗಕರ ಅಮೋಘವರ್ಷ ನುಪತುಂಗನು ಹೇಳಿದ್ದಾನೆ.'[೧೧]

ಸೇಡಂ ತಾಲೂಕಿನ ಐತಿಹಾಸಿಕ ಸ್ಥಳಗಳು:

ರಾಷ್ಟ್ರಕೂಟರ ಕಾಲದಲ್ಲಿ ಮಳಖೇಡ ರಾಜ್ಯಧಾನಿಯಾಗಿತ್ತು. ಸೇಡಂನಲ್ಲಿ ಪಂಚಲಿಂಗೇಶ್ವರ ದೇವಸ್ಥಾನವಿದೆ. ಈ ದೇವಸ್ಥಾನ ೫ ಲಿಂಗಗಳನ್ನು ಒಳಗೊಂಡಿದೆ. ಇದು ಪ್ರವಾಸಿಗರ ಗಮನ ಸೆಳೆಯುತ್ತಿದೆ. ಹಾಗೂ ಇದರ ಸುತ್ತಲೂ ಪ್ರಾಚೀನ ಕೋಟೆ ಇದೆ. ಪಂಚಲಿಂಗೇಶ್ವರ ದೇವಸ್ಥಾನದ ಕ್ಷೇತ್ರದಲ್ಲಿ ಅತ್ಯಂತ ಪ್ರಮುಖವಾದ ಬಾಣಂತಿ ಕಂಬ ವಿದೆ. ಇದು ೫೨, ಅಡಿ ಎತ್ತರದ ಏಕಶಿಲೆಯ ಬಾಣಂತಿ ಕಂಬವಿದೆ. ಇದರ ಬುಡದಲ್ಲಿ ಸೂಕ್ಷ್ಮವಾದ ಟೊಳ್ಳು ಇದ್ದು ಒಂದು ದಾರವನ್ನು ಹಾಕಿ ಎಳೆದಾಗ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಹಾದು ಹೋಗುತ್ತದೆ.

ಮಳೆಖೇಡದಲ್ಲಿ ಜೈನ ಬಸದಿ ಇದೆ. ಇಲ್ಲಿ ವಜ್ರಲೇಪನಗೊಂಡ ಪಾರ್ಶ್ವನಾಥರ ಸುಂದರ ವಿಗ್ರವಿದೆ. ಮಳಖೇಡದಲ್ಲಿ ಜೈನ ಶಿಲ್ಪಗಳು ಇವೆ. ಪ್ರಾಚೀನವಾದ ಕೊತ್ತಲಬಸವೇಶ್ವರ ದೇವಸ್ಥಾನ, ಐತಿಹಾಸಿಕ ಚರಿತ್ರೆಯನ್ನು ಒಳಗೊಂಡಿದೆ. ಸೇಡಂ ತಾಲೂಕಿನ ಅಡಿಕಿ ಗ್ರಾಮದಲ್ಲಿ ಪ್ರಾಚೀನ ಕಾಲದ ಜೈನ ಬಸದಿ ಇದೆ. ಇಲ್ಲಿ ಲಕ್ಷ ದೀಪೋತ್ಸವ ಕಾರ್ಯಕ್ರಮಗಳು ನಡೆಯುತ್ತವೆ. ಸೇಡಂ ತಾಲೂಕಿನ ಯಾನಗುಂದಿ ಕ್ಷೇತ್ರದಲ್ಲಿ ಮಾತೆ ಮಾಣಿಕೇಶ್ವರಿ ದೇವಿಯ ದೇವಾಲಯವಿದೆ. ಇದು ಬೆಟ್ಟದ ಮೇಲೆ ಇರುವುದನ್ನು ಕಾಣುತ್ತೇವೆ. ಮಾತೆ ಮಾಣಿಕೇಶ್ವರಿ ದೇವಿ ಬಂದು ಭಕ್ತರಿಗೆ ಪ್ರತಿ ವರ್ಷ ಯುಗಾದಿ ಹಬ್ಬದಂದು ಗವಿಯಿಂದ ಹೊರೆಗೆ ಬಂದು ಭಕ್ತರಿಗೆ ದರ್ಶನ ನೀಡುತ್ತಾರೆ.

ಸೇಡಂ ತಾಲೂಕಿನ ಸಿಮೆಂಟ ಕೈಗಾರಿಕೆಗಳು:

ಸೇಡಂದಲ್ಲಿ ಉದ್ಯೋಗದ ಕೊರೆತೆಯಿರುವುದರಿಂದ ಈ ಕೊರತೆಯನ್ನು ಸಿಮೆಂಟ ಕೈಗಾರಿಕೆ ಕಡಿಮೆ ಮಾಡಿದೆ ಎಂದು ಹೇಳಬಹುದು. ಈ ಸಿಮೆಂಟ್ ಕೈಗಾಗಿಕೆಗಳು ಮಾನವನ ಜೀವನಕ್ಕೆ ಅಪಾಯವನ್ನುಂಟು ಮಾಡುತ್ತಿದೆ. ಇದರಿಂದ ಉಸಿರಾಟ, ಆಸ್ತಮಾ, ಕ್ಯಾನ್ಸರ್ ರೋಗಗಳಿಗೆ, ಸಿಮೆಂಟ ಕಾರ್ಖಾನೆ ಕಾರಣವಾಗಿದೆ. ಕಲಬುರಗಿ ಜಿಲ್ಲೆಯ ಸೇಡಂನಲ್ಲಿ ಹೆಚ್ಚಿಗೆ ಸಂಬಳ ನೀಡುತ್ತಾರೆಂದು ಎಂದು ತಿಳಿದು ಸುಡುಗಾಡು ಸಿದ್ಧರ ಯುವಕರು ಸಿಮೆಂಟ್ ಕಾರ್ಖಾನೆಯಲ್ಲಿ ಕೆಲಸಕ್ಕೆ ಸೇರಿದ್ದಾರೆ. ಕಲಬುರಗಿ ಜಿಲ್ಲೆಯಲ್ಲಿ ಇಂತಹ ಐದಾರೂ ಕಾರ್ಖಾನೆಗಳಿವೆ. ಅವು ಬಿಡುವ ದೂಳಿನಿಂದ ಅಲ್ಲಿ ಲಕ್ಷಾಂತರ ಜನ ಅಸ್ತಮಾದಿಂದ ಬಳಲುತ್ತಿದ್ದಾರೆ.

ಇಲ್ಲಿ ದಿನಕ್ಕೆ ಸಾವಿರಾರು ಸಾವುಗಳು ಸಂಭವಿಸುತ್ತವೆ. ಸುಡುಗಾಡು ಸಿದ್ಧರು ಇಲ್ಲಿ ಕೆಲಸಕ್ಕೆ ಸೇರಿ ಸಾವು ಕಂಡಿದ್ದನ್ನು ನಾನು ಕ್ಷೇತ್ರಕಾರ್ಯಕ್ಕೆ ಹೋದ ಸಂದರ್ಭದಲ್ಲಿ ಸಾಯಿಬಾಬ ಅವರು ಮಾಹಿತಿ ನೀಡಿದರು.

ಸುಡುಗಾಡು ಸಿದ್ಧರ ಮನೆಗಳನ್ನು ಗಮನಿಸಿದರೆ ಅವರು ನೀರು, ವಿದ್ಯುತ್, ರಸ್ತೆ, ವಸತಿ ಮುಂತಾದ ಸಮಸ್ಯೆಗಳಿಂದ ಬಳಲುತ್ತಿರುವುದು ಕಂಡು ಬರುತ್ತದೆ. ಇವರ ಮನೆಗಳನ್ನು ನೋಡಿದರೆ ಒಂದು ನೆನೆಪು ಬರುತ್ತದೆ. ೧೯೯೩ರಲ್ಲಿ ಮಹಾರಾಷ್ಟ್ರದ ಲಾತೂರದಲ್ಲಿ ಸಂಭವಿಸಿದ ಭೂಕಂಪದಿಂದಾಗಿ ಇಡೀ ಊರಿಗೂರೇ ನೆಲಸಮವಾದ ದುರ್ದಿನದ ಸಂಗತಿ ನೆನಪಾಗುತ್ತದೆ. ಇಲ್ಲಿ ಕೆಲವು ಜನರು ಉಳಿದರೆ ಅವರಿಗೆ ಸರ್ಕಾರ ಪರಿಹಾರವಾಗಿ ಊರ ಬಿಟ್ಟು ದೂರದ ಪ್ರದೇಶದಲ್ಲಿ ನೆಲೆಯನ್ನು ಕಲ್ಪಿಸಿಕೊಟ್ಟಿದೆ, ಹಾಗೆಯೇ ಸುಡುಗಾಡು ಸಿದ್ಧರಿಗೂ, ಊರ ಹೊರಗೆ ಎಂದರೆ ರೈಲು ಹಳಿಯ ಅಕ್ಕಪಕ್ಕದಲ್ಲಿ ಜನ ವಸತಿ ಇಲ್ಲದ ನಿರ್ಜನ ಪ್ರದೇಶಗಳಲ್ಲಿ ನಿವೇಶನ ಕೊಟ್ಟಿದ್ದಾರೆ. ಇಲ್ಲಿ ಯಾವ ಸೌಲಭ್ಯಗಳಿಲ್ಲ. ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ನೀರು, ವಸತಿ, ಆರೋಗ್ಯದ ಸಮಸ್ಯೆ ಇವರನ್ನು ಕಾಡುತ್ತಿದೆ. ಮಾನವನಿಗೆ ಬೇಕಾದ ಮೂಲಭೂತ ಸಮಸ್ಯೆಗಳ ಸರಮಾಲೆಗಳನ್ನು ಇವರಲ್ಲಿ ಕಾಣಬಹುದು. ಇವರು ವಾಸಿಸುವ ಗುಡಾರ ನೋಡಿದ ತಕ್ಷಣ ಸಂವಿಧಾನಾತ್ಮಕವಾಗಿ ಇವರಿಗೆ ಯಾವುದೇ ಸೌಲಭ್ಯಗಳು ದೊರೆತಿಲ್ಲವೆಂದು ಹೇಳಬಹುದು.

ವ್ಯಾಪಾರ:

ಸುಡಗಾಡು ಸಿದ್ಧರ ಮಹಿಳೆಯರು ಮತ್ತು ಪುರುಷರು ಇಂದಿನ ಆಧುನಿಕ ದಿನಗಳಲ್ಲಿ ಜೀವನ ನಿರ್ವಹಣೆಗೊಸ್ಕರ ಪ್ರತಿ ಹಳ್ಳಿ ನಗರ ಪಟ್ಟಣ ಪ್ರದೇಶಗಳಲ್ಲಿ ಇವರು ಸಣ್ಣ ವ್ಯಾಪಾರ ಮಾಡುತ್ತಿದಾರೆ. ಪ್ಲಾಸ್ಟಿಕ್‌ಕೊಡ, ಪ್ಲಾಸ್ಟಿಕ್ ಚೀಲದ ಜೊತೆಗೆ ಬುಟ್ಟಿ ಹೆಣಿದು ಅವುಗಳನ್ನು ಮಾರಿ ಬಂದ ಹಣದಿಂದ ಜೀವನ ನಿರ್ವಹಿಸುತ್ತಿದ್ದಾರೆ. ಇವರಿಗೆ ಜಮೀನು ಇಲ್ಲ ಮತ್ತು ಒಂದೆಡೆ ನೆಲೆವೂರಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಸಣ್ಣ ಪುಟ್ಟ ವ್ಯಾಪಾರ ಮಾಡಿಕೊಂಡು ಬದುಕುತ್ತಿದ್ದಾರೆ.

ಮೀನುಗಾರಿಕೆ:

ಸುಡುಗಾಡು ಸಿದ್ಧರ ಕಸುಬುಗಳಲ್ಲಿ ಮೀನುಗಾರಿಕೆಯು ಒಂದು. ಬಹುತೇಕ ಸುಡುಗಾಡು ಸಿದ್ಧರು ಸೇಡಂ ತಾಲೂಕಿನಲ್ಲಿ ರೈಲ್ವೆ ಹಳಿಯ ಅಕ್ಕ ಪಕ್ಕದಲ್ಲಿ ನಿರ್ಜನ ಪ್ರದೇಶಗಳಲ್ಲಿ ಹಾಗೂ ನದಿಯ ಬಯಲು ಪ್ರದೇಶಗಳಲ್ಲಿ ವಾಸವಾಗಿರುವುದರಿಂದ, ಇವರಿಗೆ ಮೀನು ಹಿಡಿಯಲು ಅನುಕೂಲಕರವಾದ ವಾತಾವರಣ ಸೃಷ್ಟಿಯಾಗಿದೆ. ತಾವು ಹಿಡಿದಂತಹ ಮೀನುಗಳನ್ನು ಹಳ್ಳಿಗಳಿಗೆ ಹೋಗಿ ಮಾರಿ ತಮ್ಮ ಜೀವನವನ್ನು ನಿರ್ವಹಿಸುತ್ತಾರೆ. ಅಗಾಗಿ ಇವರ ಆರ್ಥಿಕ ಮೂಲಗಳಲ್ಲಿ ಮೀನುಗಾರಿಕೆಯು ಒಂದು ಎಂದು ಹೇಳಬಹುದು.

ಸೇಡಂ ಪಕ್ಕದಲ್ಲಿ ಕಾಗಿನಿ ನದಿ ಹರಿಯುತ್ತದೆ. ಅಲ್ಲಿಂದ ಮೀನು ಹಿಡಿದು ತಂದು ಸಿಮೆಂಟ್ ಕಾರ್ಖಾನೆಯ ಜನರಿಗೆ ಮಾರುತ್ತಾರೆ. ಹಾಗೂ ಅಕ್ಕ ಪಕ್ಕದ ಹಳ್ಳಿಗಳಿಗೆ ಹೋಗಿ ಮೀನುಗಳನ್ನು ಮಾರಾಟ ಮಾಡುತ್ತಾರೆ. ಮಳಖೇಡದಲ್ಲಿ ನದಿ ಇದ್ದು ಅಲ್ಲಿಯೂ ಮೀನುಗಳನ್ನು

ಹಿಡಿದು ಹಳ್ಳಿಗಳಲ್ಲಿ, ಸಂತೆಗಳಲ್ಲಿ ಮಾರಾಟ ಮಾಡಿ ಅದ್ದರಿಂದ ಬಂದ ಹಣದಿಂದ ಜೀವನ ನಿರ್ವಹಿಸುತ್ತಾರೆ. ಜೊತೆಗೆ ಮೀನುಗಳನ್ನು ಇವರು ಪ್ರತಿನಿತ್ಯ ಆಹಾರದಲ್ಲಿ ಬಳಸುತ್ತಾರೆ.

ಭೌಗೋಳಿಕ ಪರಿಚಯ:

'ಸುಡುಗಾಡು ಸಿದ್ದರು ಶ್ರೀಶೈಲ ಮತ್ತು ಸುತ್ತಲಿನ ಗುಡ್ಡಗಾಡಿನಲ್ಲಿ ನೆಲೆಸಿದ್ದರು. ಕಾಡಿನಲ್ಲಿ ಬೆಳೆದ ಗೆಡ್ಡೆ, ಗೆಣಸು ತಿನ್ನುವುದರ ಜೊತೆಗೆ ಬೇಟೆಯಾಡಿ ಮಾಂಸ ತಿಂದು ಜೀವನ ಸಾಗಿಸುತ್ತಿದ್ದರು. ನಂತರ ಕಾಡನ್ನು ತ್ಯಜಿಸಿ ನಾಡನ್ನು ಪ್ರವೇಸಿದರು. ವಿದ್ಯಾವಂತರು ಇಂದು ನಗರ ಪಟ್ಟಣ ಪ್ರದೇಶಗಳಲ್ಲಿ ವಾಸಿಸುತ್ತಿರುವುದು ಕಂಡುಬರುತ್ತಿದೆ. ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಿಂದುಳಿದವರು ಬೇರೆ ಬೇರೆ ಕಡೆಗೆ ವೃತ್ತಿಗಳನ್ನು ಹುಡುಕಿಕೊಂಡು ಇಂದು ನಗರ ಪಟ್ಟಣ ಪ್ರದೇಶಗಳಿಗೆ ವಲಸೆ ಬರುತ್ತಿರುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗಿರುವುದನ್ನು ಕಾಣುತ್ತೇವೆ.'

'ಕಲಬುರಗಿ ಜಿಲ್ಲೆಯ ಸೇಡಂ ತಾಲೂಕು ೧೯೫೬ ರಲ್ಲಿ ಸ್ಥಾಪನೆಯಾಯಿತು.ಆದ್ದರಿಂದ ಸೆಪ್ಟಂಬರ ೧೭ ರಂದು ಹೈದರಾಬಾದ ಕರ್ನಾಟಕ ವಿಮೋಚನ ದಿನವೆಂದು ಅತ್ಯಂತ ವಿಜೃಂಭಣೆಯಿಂದ ಆಚರಿಸುತ್ತಾರೆ. ಕಲಬುರಗಿ ಜಿಲ್ಲೆಯು ಏಳು ತಾಲೂಕುಗಳನ್ನು ಒಳಗೊಂಡಿದೆ. ಈ ಏಳು ತಾಲೂಕುಗಳಲ್ಲಿ ಸೇಡಂ ತಾಲೂಕು ಕೂಡ ಹೈದರಾಬಾದಿನ ನಿಜಾಮನ ಆಳ್ವಿಕೆಗೆ ಒಳಪಟ್ಟಿತ್ತು. ಈ ತಾಲೂಕು ಬಯಲು ಸೀಮೆಯಂತೆ ಮೈದಾನ ಪ್ರದೇಶವಾಗಿದ್ದರೂ ಅಕ್ಕಪಕ್ಕದಲ್ಲಿ ಕೈಗಾರಿಕಾ ಪ್ರದೇಶಗಳು ಸಿಮೆಂಟ ಕಾರ್ಖಾನೆಗಳು ಹಾಗೂ ಹೈದರಾಬಾದ ಸಮೀಪವಿರುವುದರಿಂದ ವ್ಯಾಪಾರದ ದೃಷ್ಟಿಯಿಂದ ತುಂಬಾ ಅನುಕೂಲಕರವಾಗಿದೆ.'

'ಸೇಡಂ ಪುರಸಭಾ ವ್ಯಾಪ್ತಿಯಲ್ಲಿ ವಾಸವದತ್ತಾ ಸಿಮೆಂಟ್‌ಕಂಪನಿ ಇದ್ದು ಜನರಿಗೆ ಹೇರಳವಾದ ಉದ್ಯೋಗಾವಕಾಶ ಕಲ್ಪಿಸಿದೆ. ತಾಲೂಕಿನ ಒಟ್ಟು ವಿಸ್ತೀರ್ಣ೫.೫ ಚ.ಕಿ.ಮೀ ವಿಸ್ತಾರವಾಗಿದೆ. ಜನಸಂಖ್ಯೆ ೨೦೧೧ರ ಜನಗಣತಿ ಪ್ರಕಾರ ೩೯೩೪೧ ಜನಸಂಖ್ಯೆ ಹೊಂದಿದೆ.ಆಸ್ತಿಗಳ ಸಂಖ್ಯೆ ೭೬೪೧ ವಾರ್ಡ್‌ಗಳ ಸಂಖ್ಯೆ ೨೩ ರಸ್ತೆಗಳ ಉದ್ದ –೬೦ ಕಿ.ಮಿ ಒಟ್ಟು ನೀರು ಸರಬರಾಜು ೩.೨೫. ಎಮ್.ಎಲ್.ಡಿ ಪ್ರತಿ ಕ್ಯಾಪಿಟ.ನೀರು ೧೦೦.ಎಲ್.ಪಿ.ಸಿ.ಡಿ ಬೇಸಿಗೆಯ ಉಷ್ಣತೆ: ೪೦೦–೪೩೦ ಹಾಗೂ ಚಳಿಗಾಲದ ಉಷ್ಣತೆ ೩.೨೦ ಸಿ ಮತ್ತು ೩೪೦ ಸಿ ಉತ್ತರ ಉತ್ಪತ್ತಿಯಾಗುವ ತ್ಯಾಜ್ಯ. ೧೩.೭೮.ಟಿ.ಪಿ.ಡಿ. ಮತ್ತು ವಾಯ್ಯ ಫಲವತ್ತಾದ ಕಪ್ಪು ಮಣ್ಣಿನಿಂದ ದಕ್ಷಿಣದಲ್ಲಿ ಕಲ್ಲು ಮಿಶ್ರಿತ ಮಣ್ಣು ತೊಗರೆ ಬೆಳೆಗೆ ಹೆಚ್ಚು ಉಪಯೋಗಕಾರಿಯಾಗಿದೆ. ಸೇಡಂ ತಾಲೂಕಿನ ದಕ್ಷಣ ಮತ್ತು ಪಶ್ಚಿಮದಲ್ಲಿ ಕಾಗಿನಿ ನದಿ ಹರಿಯುತ್ತದೆ ಸರಾಸರಿ ಮಳೆ ೨೦೧೩ನೇ ಅಂಕಿ ಅಂಶದ ಪ್ರಕಾರ ೯೭೬ ಮೀ.ಮಿ ಮಳೆ ಬೀಳುತ್ತದೆ.'

ಜನಸಂಖ್ಯೆ: 'ಗಂಡಸರು ಜನ ಸಂಖ್ಯೆ ೨೧೮೫೭೨ ಹೆಂಗಸರು ಜನ ಸಂಖ್ಯೆ ೧೯೯೭೪ ಜನಸಂಖ್ಯೆ ಹೊಂದಿದ್ದರೆ ಕೃಷಿ ಭೂಮಿ ಉಳುವೆ ಮಾಡುವುವರು ಹೊಂದಿದ್ದರೆ

ಅತ್ಯಂತ ವಿಶಾಲ ಕಪ್ಪು ಮಣ್ಣಿನ ಪ್ರದೇಶ ಹೊಂದಿದೆ. ಶಿಕ್ಷಣಕ್ಕೆ ಸಂಬಂಧಿಸಿದಂತೆ ಒಟ್ಟು ಶಾಲೆಗಳು ಸಂಖ್ಯೆ ೧೩೧ ಹುಡಗರ ಸಂಖ್ಯೆ ೧೦೨೭೬ ಜನ ಹುಡಗರು ಹಾಗೂ ೧೦೧೪೧ ಹುಡಿಗಿಯರು ಪ್ರಾಥಮಿಕ ಹಿರಿಯ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಹಿರಿಯ ಪ್ರಾಥಮಿಕ ಶಾಲೆ ಒಟ್ಟು ಶಾಲೆಗಳು ೧೫೫ ಅದರಲ್ಲಿ ಹುಡುಗರು ಸಂಖ್ಯೆ ೫೧೬೬ ಹಾಗೂ ಹುಡಿಗಿರರು ೪೭೬೮ ಪ್ರಾಥಮಿಕ ಶಿಕ್ಷಣ ಸೇಡಂ ತಾಲೂಕಿನ ಶಿಕ್ಷಣ ಪಡೆದುಕೊಳ್ಳುತ್ತಿದ್ದಾರೆ ಪ್ರೌಢ ಶಾಲೆಗಳು ಒಟ್ಟು ೫೩ ಅದರಲ್ಲಿ ಹುಡಗರು ಸಂಖ್ಯೆ ೨೩೦೪ ಹಾಗೂ ಹುಡಗಿಯರು ೨೦೧೪ ಜನ ಮಕ್ಕಳು ಪ್ರೌಢಶಾಲೆ ಶಿಕ್ಷಣ ಪಡೆದುಕೊಳ್ಳುತ್ತಾರೆ. ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಸಂಖ್ಯೆ ೧೧ ಹುಡಗರು ಸಂಖ್ಯೆ ೧೦೫೩ ಹುಡಗಿಯರು ೮೯೮ ಕಾಲೇಜು ಶಿಕ್ಷಣ ಪಡೆದುಕೊಳ್ಳುತ್ತಿದ್ದಾರೆ. ಅದರಂತೆ ಪದವಿ ಕಾಲೇಜು ಹುಡುಗರ ಸಂಖ್ಯೆ ೧೮೮ ಹುಡುಗರು ೧೮೮ ಹುಡಿಗಿಯರು ೨೧೩.೧೨'

ಸುಡುಗಾಡು ಸಿದ್ಧರ ನೆಲೆಗಳು ಮತ್ತು ಜನಸಂಖ್ಯೆ

ಜಿಲ್ಲೆ	ತಾಲೂಕು	ನೆಲೆಗಳು	ಕುಟುಂಬ	ಗಂಡು	ಹೆಣ್ಣು	ಒಟ್ಟು
ಕಲಬುರಗಿ	ಸೇಡಂ	ರಾಮಗಡ	೨೦	೫೦	೪೨	೯೨
		ಬಸವನಗರ	೦೯	೧೬	೨೭	೪೩
		ವೆಂಕಟೇಶನಗರ	೧೦	೨೫	೨೬	೫೧
		ಕೊಡ್ಲ	೦೮	೧೩	೧೭	೩೦
ಒಟ್ಟು			೬೦	೧೩೪	೧೪೪	೨೭೮

ಕ್ಷೇತ್ರಕಾರ್ಯದಲ್ಲಿ ಗಮನಿಸಿದ ಅಂಕಿಅಂಶಗಳನ್ನು ಕ್ರೋಢೀಕರಿಸಿದಾಗ ಒಟ್ಟು ೬೦ ಕುಟುಂಬಗಳಲ್ಲಿ ೨೭೮ ಸುಡುಗಾಡು ಸಿದ್ಧರ ಜನಸಂಖ್ಯೆ ಇದೆ. ಇದರಲ್ಲಿ ಗಂಡು ಮತ್ತು ಹೆಣ್ಣು ಕ್ರಮವಾಗಿ ಶೇ.೪೮.೨೦% ಹಾಗೂ ಶೇ.೫೧.೭೯ ರಷ್ಟಿದ್ದಾರೆ.

ಅಡಿಟಿಪ್ಪಣಿಗಳು

೧. ಡಾ.ಕೆ.ಎಂ.ಮೈತ್ರಿ, ಅಲಕ್ಷಿತರ ಸಮಾಜಶಾಸ್ತ್ರ, ಪುಟ ಸಂಖ್ಯೆ–೧೯

೨. ಡಾ.ಕೆ.ಎಂ.ಮೈತ್ರಿ, ಅಲಕ್ಷಿತರ ಸಮಾಶಾಸ್ತ್ರ, ಪುಟ ಸಂಖ್ಯೆ–೨೦

೩. ಅದೇ ಪುಟ " " ಪುಟ ಸಂಖ್ಯೆ–೨೦

೪. ಕಿಟಲ್ ಕನ್ನಡ ಇಂಗ್ಲೀಷ್ ಪದಕೋಶ ಮೀಶಲ್ ಬುಕ್ ಟ್ರೇಸ್ ಡಿಪೋಸಿಟರ್ ಪು.೧೫೬೬

೫. ಅದೇ ಪುಟ–೧೫೬೬–೧೫೬೭

೬ ಎಂ.ಎಸ್. ಗಂಟಿ ಸುಡುಗಾಡು ಸಿದ್ಧ ಪುಟ ಸಂಖ್ಯೆ– ೦೫

೭ ಡಾ.ಪಿ.ಕೆ ಖಂಡೊಬ ಸುಡುಗಾಡು ಸಿದ್ಧರ ಸಂಸ್ಕೃತಿ ಸಂಖ್ಯೆ–೧೦

೮. ಅದೇ ಪುಟ ಸಂಖ್ಯೆ–೧೦

೯. ಎಂ.ಎಸ್. ಗಂಟಿ ಸುಡುಗಾಡು ಸಿದ್ಧ, ಪುಟ ಸಂಖ್ಯೆ–೦೬

೧೦. ಬಿ.ಪಿ. ಹೂಗಾರ ಕರ್ನಾಟಕದ ಇತಿಹಾಸ ಪುಟ.೧೫

೧೧. ಮಹಾಲನೋಬಿಸ್ ಪಿ.ಸಿ ಸಂಖ್ಯಾಶಾಸ್ತ್ರಜ್ಞರು (೧೮೯೩–೧೯೭೨) ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು.

❑❑❑

ಅಧ್ಯಾಯ ಮೂರು

ಸುಡುಗಾಡು ಸಿದ್ಧರ ಸಾಮಾಜಿಕ ಬದಲಾವಣೆ

ಅಧ್ಯಾಯ ಮೂರು

ಸುಡುಗಾಡು ಸಿದ್ಧರ ಸಾಮಾಜಿಕ ಬದಲಾವಣೆ

'ಮಾನವ ಹುಟ್ಟಿನಿಂದ ಸಾಯುವವರೆಗೆ ಅನೇಕ ಸಂಸ್ಕಾರಗಳಿಗೆ ಒಳಪಡುತ್ತಾನೆ. ಈ ಸಂಸ್ಕಾರಗಳು ಸಮುದಾಯಗಳಿಂದ ಸಮುದಾಯಗಳಿಗೆ ಭಿನ್ನವಾಗಿರುತ್ತವೆ. ಸುಡುಗಾಡು ಸಿದ್ಧರ ಸಮುದಾಯದವರು ಹುಟ್ಟಿನಿಂದ ಸಾಯುವವರೆಗೆ ಅನೇಕ ಸಂಸ್ಕಾರಗಳನ್ನು ತಮ್ಮದೇ ಆದ ವಿಧಿ ವಿಧಾನಗಳ ಮೂಲಕ ಆಚರಿಸಿಕೊಂಡು ಬರುತ್ತಿದ್ದಾರೆ. ಇಂದು ಸುಡುಗಾಡು ಸಿದ್ಧರು ಆಚರಿಸುವ ಆಚರಣೆಗಳಲ್ಲಿ ಹಿಂದೂ ಸಂಪ್ರದಾಯ ತನ್ನ ಪ್ರಭಾವ ಅತ್ಯಂತ ಗಾಢವಾಗಿ ಬೀರಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಸುಡುಗಾಡು ಸಿದ್ಧರು ಅನೇಕ ಪರಂಪರಾನುಗತ ಆಚರಣೆಗಳ ಜೊತೆಗೆ ಮಾಟ, ಮಂತ್ರ ವಶೀಕರಣ ವಿದ್ಯೆಯಲ್ಲಿ ಪರಿಣಿತರಾಗಿದವರು.'[೧]

ಸೇಡಂ ತಾಲೂಕಿನ ಬಸವನಗರ, ಕಲಕಮ್ಮರೋಡ, ರಾಮಗಡ, ಕೋಡ್ಲಗಳಲ್ಲಿ ವಾಸಿಸುತ್ತಿರುವ ಸುಡುಗಾಡು ಸಿದ್ಧ ಸಮುದಾಯದ ಪ್ರಾಚೀನ ಆಚರಣೆಗಳೆಲ್ಲವೂ ಇತ್ತೀಚೆಗೆ ಹೇಳಲು ಹೆಸರಿಲ್ಲದಂತೆ ಮಾಯವಾಗುತ್ತಿರುವುದನ್ನು ಕಾಣುತ್ತೇವೆ. ಇವರು ಮದುವೆಗಳು, ಹಬ್ಬಗಳು, ಜನನ, ಹಿಂದಿನ ಸಂಪ್ರದಾಯಗಳನ್ನು ಗಾಳಿಗೆ ತೂರಿ ಆಧುನಿಕ ಜೀವನ ಪದ್ದತಿಗೆ ಮಾರುಹೋಗಿದ್ದಾರೆ. ಆಧುನಿಕ ಪದ್ಧತಿಯನ್ನು ಅನುಸರಿಸಿಲ್ಲವೆಂದರೆ. ಸಮುದಾಯದವರು, ಅಕ್ಕಪಕ್ಕದವರಿಂದ ಮಾತನಾಡಿಸಿಕೊಳ್ಳಬೇಕಾಗುತ್ತದೆ. ಇವರು ಅನಾಗರಿಕರು ಅಸಂಸ್ಕೃತರು ಎಂದು ಹಣೆಪಟ್ಟೆಯನ್ನು ಕಟ್ಟಿಸಿಕೊಂಡು ಸಮಾಜದ ಜನರ ನಿಂದನೆಗೆ ಒಳಪಡುವುದು ಕಂಡುಬರುತ್ತದೆ. ಹೀಗಾಗಿ ಈ ಸಮುದಾಯವು ಆಧುಕತೆಯ ಗಾಳಿಯಿಂದ ಹಂತ ಹಂತವಾಗಿ ಆಚರಣೆಗಳಲ್ಲಿ ಬದಲಾವಣೆಯಾಗುತ್ತಿರುವುದು ಕಂಡುಬರುತ್ತಿದೆ.

ಸಾಮಾಜಿಕ ಬದಲಾವಣೆಯ ವ್ಯಾಖ್ಯೆಗಳು:

೧. ಎಮ್.ಇ.ಜೋನ್ಸ್ ಎಂಬ ವಿದ್ವಾಂಸರ ಪ್ರಕಾರ: 'ಸಾಮಾಜಿಕ ಪ್ರಕ್ರಿಯೆಗಳು, ಸಾಮಾಜಿಕ ಮಾದರಿಗಳು, ಸಾಮಾಜಿಕ ಅಂತ:ಕ್ರಿಯೆಗಳು ಅಥವಾ ಸಾಮಾಜಿಕ ಸಂಘಟನೆಗಳು ಇವುಗಳ ಯಾವುದೇ ಮುಖದಲ್ಲಿ ಉಂಟಾಗುವ ವ್ಯತ್ಯಾಸಗಳನ್ನು ಅಥವಾ ಮಾರ್ಪಾಡುಗಳನ್ನು ವಿವರಿಸಲು ಸಾಮಾಜಿಕ ಬದಲಾವಣೆ ಎನ್ನುತ್ತೇವೆ'.[೨]

೨. ಕಿಂಗ್ಸಲೇ ಡೇವಿಸ್ ಎಂಬ ವಿದ್ವಾಂಸ ಪ್ರಕಾರ: 'ಸಾಮಾಜದ ಸಂರಚನೆ ಮತ್ತು ಕಾರ್ಯಗಳಲ್ಲಿ ಆಗುವ ಬದಲಾವಣೆಗಳನ್ನು ಸಾಮಾಜಿಕ ಬದಲಾವಣೆ ಎನ್ನುಬಹುದು'.[೩]

ಜನನ

ಸುಡುಗಾಡು ಸಿದ್ಧರಲ್ಲಿ ಮಗುವಿನ ಜನನದ ವಿಷಯ ತಂದೆ ತಾಯಿಗಳಿಗೆ ಮಾತ್ರವಲ್ಲದೆ ಜೋಪಡಿಯ ಅಥವಾ ಡೇರಗಳ ಜನರಿಗೆಲ್ಲ ಸಂತೋಷದ ಸಂಗತಿಯಾಗಿರುತ್ತದೆ. ಸಿಹಿಯಾದ,

ಕೇಕು, ಪೇಡ ಹಂಚುತ್ತಾರೆ. ಅವರಲ್ಲಿ ಹೆಣ್ಣು ಇಲ್ಲವೆ ಗಂಡು ಮಗುವಿನ ಜನನಕ್ಕೆ ಯಾವುದೇ ರೀತಿಯ ತಾರತಮ್ಯಗಳಿಲ್ಲ. ಮಗು ಹುಟ್ಟಿದ ೩ನೇ ದಿನಕ್ಕೆ ಶೆಟವಿದೇವಿ ಪೂಜೆಯನ್ನು ನೆರವೇರಿಸುವುದರ ಮೂಲಕ ಮಗುವಿಗೆ ನಾಮಕರಣ ಮಾಡುತ್ತಾರೆ. ಅಂದು ಗುಡಾರದ ಜನರೆಲ್ಲ ಸೇರಿ, ಮಗುವಿಗೆ ನಾಮಕರಣ ಮಾಡುತ್ತಾರೆ. ಆ ದಿನ ಜನರಿಗೆಲ್ಲ ಮಾಂಸದ ಊಟ, ಹಾಗೂ ಕುಡಿಯಲು ಸೇಂದಿ, ಸರಾಯಿ, ಬೀರು, ಬಾಟಲಗಳನ್ನು ಕೊಡುತ್ತಾರೆ. ಸುಡುಗಾಡು ಸಿದ್ಧರ ಜೋಪಡಿಗಳಲ್ಲಿ ಮಗುವಿನ ಉಸಿರಾಟಕ್ಕೆ, ತೊಂದರೆಯಾಗದಿರಲೆಂದು ಹಾಗೂ ಮಗುವಿಗೆ ಶೀತ ಆಗದಿರಲೆಂದು ಸೂಜಿ ಕಾಯಿಸಿ ಮಗುವಿನ ಎದೆ ಗುಂಡಿಗೆ, ಹೊಕ್ಕುಳು, ಪಕ್ಕೆಯ ಎಡಬಲ ಭಾಗಗಳಲ್ಲಿ ಬರೆ ಹಾಕುತ್ತಾರೆ. ಮಗುವಿನ ಜನನವಾದ ಸ್ಥಳದಲ್ಲಿ ಒಂದು ಕೋಳಿ ಬಲಿಕೊಟ್ಟು ಅದರ ರಕ್ತವನ್ನು, ಮಗುವಿನ ಹಣೆಗೆ ಹಚ್ಚುತ್ತಾರೆ. ಇದರಿಂದ ಆ ಮಗುವಿಗೆ ತಗಲುವ ಪೀಡೆಗಳೆಲ್ಲ ದೂರವಾಗುತ್ತವೆಂಬುದು ಅವರಲ್ಲಿರುವ ಬಲವಾದ ನಂಬಿಕೆ.

ಪ್ರಸ್ತುತ ದಿನಗಳಲ್ಲಿ ಜನನ ಸಮಯದಲ್ಲಿ ಹೆರಿಗೆಯನ್ನು ಮನೆ ಅಥವಾ ಜೋಪಡಿಗಳಲ್ಲಿ, ಸರಳವಾಗಿ ಮಾಡಿಸಲು ಸೂಲಗಿತ್ತಿಯರನ್ನು ಕರೆಸುತ್ತಾರೆ. ಹೆರಿಗೆ ಬಹಳ ತೊಂದರೆಯಾದರೆ, ಗರ್ಭಿಣಿಯರನ್ನು ಸರ್ಕಾರಿ ಆಸ್ಪತ್ರೆಗಳಿಗೆ ಕರೆದುಕೊಂಡು ಹೋಗುತ್ತಾರೆ. ಇಂದು ಕಾಯಿಲೆಯನ್ನು ನಿಯಂತ್ರಿಸಲು ಹಾಗೂ ಒಂದು ತಿಂಗಳ ಅಂತರದಲ್ಲಿ ಧನುರ್ವಾಯ ಚುಚ್ಚುಮದ್ದು ಹಾಕಿಸುತ್ತಾರೆ. ಬಾಣಂತಿಗೆ ಹಾಲು, ಹಣ್ಣು, ಬೇಳೆ ಕಾಳು, ತರಕಾರಿ, ಮೀನು, ಮೊಟ್ಟೆ, ಅನ್ನ, ಮತ್ತು ಗೋಧಿಯಿಂದ ತಯಾರಿಸಿದ ಆಹಾರ ನೀಡುತ್ತಾರೆ, ಸಾಕಷ್ಟು ವಿಶ್ರಾಂತಿ ಪಡೆದುಕೊಳ್ಳಲು ಸೂಚಿಸುತ್ತಾರೆ. ದಿನಕ್ಕೊಂದರಂತೆ ೧೦೦ ದಿನಗಳವರೆಗೂ ಕಬ್ಬಿಣಾಂಶದ ಮತ್ತು ಪೋಲಿಕ್ ಆಮ್ಲದ ಮಾತ್ರೆಗಳನ್ನು ವೈದ್ಯರ ಸಲಹೆ ಮೇರೆಗೆ ತೆಗೆದುಕೊಳ್ಳುತ್ತಾರೆ. ತಾಯಿಯ ಮಡಿಲು ಯೋಜನೆಗಳ ಕಿಟ್ಟು ಬಿಪಿಎಲ್ ಕುಂಟುಬಗಳಿಗೆ ಮಾತ್ರ ಸಿಗುತ್ತಿವೆ. ಈ ಎಲ್ಲಾ ಮಾಹಿತಿಯನ್ನು ನಾನು ಕ್ಷೇತ್ರಕಾರ್ಯ ಮಾಡಿದ ಸೇಡಂ ತಾಲೂಕಿನ ಬಸ್ ನಿಲ್ದಾಣದ ಹತ್ತಿರ ಇರುವ ಕಲಕಮ್ಮ ರೋಡ ಅಕ್ಕ ಪಕ್ಕದಲ್ಲಿ ಇರುವ ಸುಡುಗಾಡು ಸಿದ್ಧ ಸಮುದಾಯದ ಮಹಿಳೆಯರು ಮಾಹಿತಿ ನೀಡಿದರು.

ಐದೇಶಿ

ಸುಡುಗಾಡು ಸಿದ್ಧರು ಮಗು ಜನಿಸಿದ ೫ನೇ ದಿನ ಈ ಪೂಜೆ ಜರುಗುತ್ತದೆ. ಅಂದು ಸುಡುಗಾಡು ಸಿದ್ಧರು ತಮ್ಮ ಬಂಧು ಬಾಂದವರನ್ನು, ಅಕ್ಕ ಪಕ್ಕದವರನ್ನು ಈ ಪೂಜೆಗೆ ಆಹ್ವಾನಿಸುತ್ತಾರೆ ಹಾಗೂ ಹೆರಿಗೆ ಸಂದರ್ಭದಲ್ಲಿ ಸಹಾಯ ಮಾಡಿದ ಸೂಲಗಿತ್ತಿಯನ್ನು ಸಹ ಈ ಪೂಜೆಗೆ ಆಹ್ವಾನಿಸುತ್ತಾರೆ. ಪೂಜೆಯ ದಿನ ಮನೆಯನ್ನು ಸ್ವಚ್ಛಗೊಳಿಸಿ ಪೂಜೆಗೆ ಸಿದ್ದಪಡಿಸುತ್ತಾರೆ. ಸುಡುಗಾಡು ಸಿದ್ದರು ಶೆಟಿಗೆಮ್ಮ ದೇವಿಯನ್ನು ಪೂಜಿಸುತ್ತಾರೆ. ಪೂಜೆಗೆ ಹಣ್ಣು, ಕಾಯಿ, ಹೂ ಗಂಧದ ಕಡ್ಡಿ, ಅರಿಶಿನ, ಕುಂಕುಮ, ಮೊದಲಾದವುಗಳನ್ನು ಪೂಜೆಗೆ

ಬಳಸುತ್ತಾರೆ ಹಾಗೂ ಪೂಜೆ ಮುಗಿದ ಮೇಲೆ ಕೋಳಿಯನ್ನು ಬಲಿ ಕೊಡುತ್ತಾರೆ. ಬಲಿ ನೀಡಿದ ಕೋಳಿಯ ರಕ್ತವನ್ನು ಮಗುವಿನ ಹಣೆಗೆ ಹಚ್ಚುತ್ತಾರೆ. ಬಲಿ ನೀಡಿದ ಕೋಳಿಯ ಮಾಂಸದ ತುಂಡುಗಳನ್ನು ಗುಡಿಸಲಿನ ೪ ಮೂಲೆಯಲ್ಲಿ ಇಡುತ್ತಾರೆ. ಕಾರಣ ಮಗುವಿಗೆ ಯಾವುದೇ ರೋಗರುಜಿನಗಳು ಬಾರದಿರಲೆಂದು ಮತ್ತು ದೃಷ್ಟಶಕ್ತಿಗಳು ಕಾಡದಿರಲೆಂದು ಈ ಪೂಜೆ ಮಾಡುತ್ತಾರೆ. ಈ ಪೂಜೆಯನ್ನು ಹೆರಿಗೆಯನ್ನು ಮಾಡಿಸಿದ ಸೂಲಗಿತ್ತಿಯಿಂದ ನೆರವೇರಿಸುತ್ತಾರೆ. ಅಂದು ಪೂಜೆಗೆ ಬಂದವರಿಗೆ ಪೂಜೆ ಮುಗಿದ ಮೇಲೆ ಅನ್ನ ಹಾಗೂ ಕೋಳಿಸಾರು ಊಟ ಮಾಡಿಸುತ್ತಾರೆ. ಗಂಡು ಮಕ್ಕಳಿಗೆ ಸಾರಾಯಿಯನ್ನು ಸಹ ಕುಡಿಸುತ್ತಾರೆ.

ನಾಮಕರಣ

ಸುಡುಗಾಡು ಸಿದ್ಧರು ಮಗು ಜನಿಸಿದ ಮೂರು ಅಥವಾ ಹನ್ನೊಂದನೆಯ ದಿನಕ್ಕೆ ನಾಮಕರಣ ಮಾಡುತ್ತಾರೆ. ನಾಮಕರಣದ ದಿನ ನಿಗಧಿ ಮಾಡಲು ಇವರು ಬ್ರಾಹ್ಮಣ ಅಥವಾ ಲಿಂಗಾಯತ ಸಮುದಾಯದ ಜ್ಯೋತಿಷ್ಯರನ್ನು ಕಾಣುತ್ತಾರೆ. ಅವರು ಮಗುವಿನ ಜನನ ದಿನಾಂಕ, ಸಮಯ, ನಕ್ಷತ್ರವನ್ನು ಪಡೆದು ಪಂಚಾಂಗವನ್ನು ನೋಡಿ ಒಂದು ಒಳ್ಳೆಯ ದಿನವನ್ನು ನಿಗಧಿ ಮಾಡುತ್ತಾರೆ. ನಾಮಕರಣಕ್ಕೆ ಬಂಧು ಬಾಂದವರನ್ನು ಆಹ್ವಾನಿಸುತ್ತಾರೆ.

ನಾಮಕರಣದ ಪೂಜೆಯ ದಿನ ತಮ್ಮ ಕುಲದೇವತೆಯಾದ ಮಾರಮ್ಮನನ್ನು ಪೂಜೆ ಮಾಡುತ್ತಾರೆ ಹಾಗೂ ಮಗುವಿಗೆ ಹೆಸರು ಇಡುವಾಗ ಕುಲದೇವತೆ ಮಾರಮ್ಮನ ಹೆಸರ ಮೇಲೆ ಪಂಚಾಂಗವನ್ನು ನೋಡಿ ಮಗುವಿಗೆ ಹೆಸರನ್ನು ಇಡಲಾಗುತ್ತದೆ. ಇವರು ಸತ್ತು ಹೋದ ಹಿರಿಯರ ಹೆಸರುಗಳನ್ನು ಮಕ್ಕಳಿಗೆ ಇಡುವುದಿಲ್ಲ ಬದುಕಿರುವಂತಹ ತಮಗೆ ಇಷ್ಟವಾದಂತಹ ವ್ಯಕ್ತಿಗಳ ಹೆಸರಗಳನ್ನು ಅಂದರೆ ತಂದೆ, ತಾಯಿ, ಅಜ್ಜ, ಅಜ್ಜಿ, ಅವರ ಹೆಸರನ್ನು ಮಾತ್ರ ಇಡುತ್ತಾರೆ. ಗಂಡು ಮಗುವಿಗೆ ಮರೆಪ್ಪ, ಶರಣಪ್ಪ, ಲಕ್ಷ್ಮಣ ಅಯ್ಯಪ್ಪ, ಸಿದ್ದಪ್ಪ, ಮೊದಲಾದವುಗಳು. ಹೆಣ್ಣು ಮಗುವಿಗೆ ಎಲ್ಲಮ್ಮ, ಮಲ್ಲಮ್ಮ, ಅಯ್ಯಮ್ಮ, ಲಿಂಗಮ್ಮ, ಬಾಲಮ್ಮ ಇತ್ಯಾದಿ ಹೆಸರುಗಳನ್ನಿಡುತ್ತಾರೆ. ನಾಮಕರಣದ ದಿನ ತಾಯಿ ಮತ್ತು ಮಗುವಿಗೆ ಹೊಸ ಬಟ್ಟೆಯನ್ನು ಹಾಕಲಾಗುತ್ತದೆ. ಬಂದಂತಹ ಬಂಧು ಬಾಂಧವರಿಗೆ ಅನ್ನ ಹಾಗೂ ಕೋಳಿ ಸಾರು, ಸೇಂದಿ, ಸಾರಾಯಿಯನ್ನು ನೀಡುತ್ತಾರೆ.

ಜವುಳ

ಸುಡುಗಾಡು ಸಿದ್ಧರು ಹೆಚ್ಚಾಗಿ ಚಂದ್ರಗಿರಿಯಲ್ಲಿರುವ ದುರ್ಗಮ್ಮ ದೇವಿಗೆ ಮತ್ತು ನಿಜಲಿಂಗಪ್ಪನಿಗೆ ತಮ್ಮ ಮಕ್ಕಳ ತಲೆಯ ಕೂದಲುಗಳನ್ನು ಅರ್ಪಿಸುತ್ತಾರೆ. ಮಗು ಹುಟ್ಟಿದ ಒಂದು ವರ್ಷ ಎರಡು ತಿಂಗಳಿಗೆ ಈ ಜವುಳ ತೆಗೆಸುವ ಕಾರ್ಯ ನಡೆಯುತ್ತದೆ. ಕೆಲವೆಡೆ ಮಗುವಿನ ಜವುಳವನ್ನು ದ್ಯಾಮವ್ವ, ಮರಿಯಮ್ಮ, ದುರ್ಗಮ್ಮ ಮೊದಲಾದ ದೇವತೆಗಳಿಗೆ ಮೀಸಲು ಬಿಡುತ್ತಾರೆ ಎಂಬ ಮಾಹಿತಿಯನ್ನು ಸಾಯಿಬಾಬ ವಿವರಿಸಿದರು.

ಋತುಮತಿ

ಸುಡುಗಾಡು ಸಿದ್ಧರ ನಿಯಮದಂತೆ ಸೋದರ ಮಾವ ನನ್ನ ಸೊಸೆ ಹಿರಿಮನುಷ್ಯಳಾಗಿದ್ದಾಳೆ ಅದಕ್ಕೆ ನಾನು ಗುಡಿಸಲು ಹಾಕುತ್ತೇನೆಂದು ಹೇಳುತ್ತಾನೆ. ಋತುಮತಿಯಾದ ಹೆಣ್ಣಿಗೆ ಗುಡಿಸಲು ನಿರ್ಮಿಸಲು, ನಾಲ್ಕು ಕಟಿಗೆಗಳನ್ನು ತಂದು ಅವುಗಳನ್ನು ಬಳಸಿ ಜೋಪಡಿ ಸಿದ್ಧಪಡಿಸಿ ಅದರ ಮೇಲೆ ಹೊದಿಕೆಗೆ ಬೇವಿನ ಸೊಪ್ಪು, ಹಾಗೂ ಮಾವಿನ ಎಲೆಗಳಿಂದ, ಸಿಂಗರಿಸುತ್ತಾರೆ. ಅದರ ಮೇಲೆ ಒಂದು ಕೌದಿಯನ್ನು ಹಾಕಿ ಗುಡಿಸಲು ನಿರ್ಮಿಸುತ್ತಾರೆ. ಋತುಮತಿಯಾದ ಅವಳನ್ನು ಮೈಲಿಗೆಯಾದವಳು ಎಂದು ಭಾವಿಸಿ, ಋತುಮತಿಯ ಗುಡಿಸಲು ಪಕ್ಕದಲ್ಲಿ ಮತ್ತೊಂದು ಗುಡಿಸಲು ಹಾಕಿ. ೧೧ ದಿವಸ ಕೂಡಿಸುತ್ತಾರೆ. ರಾತ್ರಿ ಹಾಡುಗಳನ್ನು ಹಾಡುತ್ತಾರೆ. ಅವಳ ಜೊತೆಯಲ್ಲಿ ತಾಯಿ ಮತ್ತು ಸೋದರತ್ತೆ ಇರುತ್ತಾರೆ. ಹೆಣ್ಣು ಋತುಮತಿಯಾದ ವಿಷಯವನ್ನು ಮೊದಲು ಸೋದರ ಮಾವನಿಗೆ ಹೇಳುತ್ತಾರೆ.

ಋತುಮತಿಯಾದ ಹೆಣ್ಣಿನ ಸೊದರತ್ತೆಯಾದವಳು ಅವಳಿಗೆ ಸ್ನಾನಕ್ಕೆ ನೀರು ಹಾಕಬೇಕು. ಐದು ಇಲ್ಲವೆ ಹದಿನಾರನೇ ದಿನಕ್ಕೆ ಅವಳಿಗೆ ಹೊಸ ಬಟ್ಟೆ ಹಾಕಿಸಿ ಮನೆಯ ಒಳಗೆ ಕರೆದುಕೊಳ್ಳುತ್ತಾರೆ. ಋತುಮತಿಯಾದ ಹೆಣ್ಣಿನ ಮೈಲಿಗೆಯನ್ನು ೧೧ ದಿನಕ್ಕೆ ಕಳೆಯುತ್ತಾರೆ. ಈ ಸಮಯದಲ್ಲಿ ಅವಳಿಗೆ ತಿನ್ನಲು ಕೊಬ್ಬರಿ, ಕಡಲೆ, ಬೆಲ್ಲ, ಹಾಲು, ತುಪ್ಪ ಮತ್ತು ಮಾಂಸವನ್ನು ಹೆಚ್ಚಾಗಿ ಕೊಡುತ್ತಾರೆ. ಹದಿನೈದು ಅಥವಾ ಹದಿನಾರನೇ ದಿನ ಮನೆ ಸಾರಿಸಿ ಸ್ವಚ್ಚಗೊಳಿಸಿ ಒಲೆ ಮುಟ್ಟಿಸುತ್ತಾರೆ.

ಸುಡುಗಾಡ ಸಿದ್ಧರು ಋತುಮತಿ ಸಮಯದಲ್ಲಿ ಹಾಡುವ ಹಾಡು

'ಕಟ್ಟಿಯ ಹಿಂದೆ ದುಪ್ಪೊಚ್ಚೋದು 'ಎನ್
ಆರ ಸಾವಿರದ ಎಲಿತ್ವಾಟ! ಆಗಿರುವ ಅವರ
ಮಾವ ಕೇಳ್ಯಾನೆ ಹೊಸ ಸುದ್ದಿ!
ಹೊಸ ಸುದ್ದಿ ಕೇಳ್ಯಾನೆ ಹುಸಿನಗಿ ನಕ್ಕಾನೆ!
ಎಸಳಮಲ್ಲಿಗಿಯ ಕೊಯಶ್ಯಾನೆ! ಸತ್ಯಪ್ಪ
ದಂಡಿ ಎಣಿಸಿ ಸೊಸಿಯಿದ್ದ ಮನಿಗಿ ಖಳಸ್ಯಾನೆ॥'[೪]

ಆಧುನಿಕ ಸಂದರ್ಭದಲ್ಲಿ ಸುಡುಗಾಡು ಸಿದ್ಧರಲ್ಲಿ ಋತುಮತಿ ಆಚರಣೆ

ಇತ್ತೀಚಿನ ದಿನಗಳಲ್ಲಿ ಸುಡುಗಾಡು ಸಿದ್ದರು ಋತುಮತಿಯಾದ ತಮ್ಮ ಮಕ್ಕಳನ್ನು ಹಿಂದೆ ಗುಡಿಸಲುಗಳಲ್ಲಿ ಕೂರಿಸುವಂತೆ ಕೂರಿಸುವುದಿಲ್ಲ. ಆಧುನಿಕತೆ ಇತರೆ ಸಮುದಾಯಗಳ ಪ್ರಭಾವದಿಂದ ಇವರ ಸಾಮಾಜಿಕ ಬದುಕಿನಲ್ಲಿ ಬದಲಾವಣೆಯಾಗಿದೆ ಎಂದು ಹೇಳಬಹುದು. ಜೊತೆಗೆ ಅವರು ಶಿಕ್ಷಣ ಪಡೆಯುತ್ತಿರುವುದರಿಂದ ವೈಚಾರಿಕ ಪ್ರಜ್ಞೆ ಮೂಡಿದೆ. ಹಾಗಾಗಿ ಋತುಮತಿಯಾದ

ಸ್ತ್ರೀಯರನ್ನು ಹೊರಗೆ ಕೂರಿಸುವುದು ಅವೈಜ್ಞಾನಿಕತೆ ಎಂಬುದು ಸುಡುಗಾಡು ಸಿದ್ಧರಿಗೂ ಅರಿವಾಗುತ್ತಿದೆ.

ಕನ್ಯಾ ನಿಶ್ಚಯ

ಸುಡುಗಾಡು ಸಿದ್ಧರಲ್ಲಿ ಕನ್ಯಾ ನಿಶ್ಚಯಶಾಸ್ತ್ರವಿದೆ. ಹತ್ತಿರದ ಸಂಬಂಧಿಕರಲ್ಲಿ ಇಲ್ಲವೆ ದೂರದ ಹೊಸ ಸಂಬಂಧವನ್ನು ಹುಡುಕುವಾಗ ಇಂತಹ ದಿವಸ ಬರುತ್ತೇವೆ ಎಂದು ಒಬ್ಬರಿಂದ ಮೊದಲೇ ತಿಳಿಸುತ್ತಾರೆ. ಸುಡುಗಾಡು ಸಿದ್ಧರ ಹೆಂಗಸರು ಕೈಯಲ್ಲಿ ಕಳಸ ಕನ್ನಡಿ ಹಿಡಿದುಕೊಂಡು ಹನುಮಂತ ದೇವರ ದರ್ಶನಕ್ಕೆ ಹೋಗುವ ಪದ್ಧತಿ ಇದೆ. ದೇವರಿಗೆ ಪೂಜೆ ಸಲ್ಲಿಸಿ ಇಂಥ ದಿವಸ ಕನ್ಯಾ ನಿಶ್ಚಯಕ್ಕೆ ಹೋಗಬೇಕಾಗಿದೆ. ನೀನು ಒಪ್ಪಿಗೆ ಕೊಡು ಇಲ್ಲವಾದರೆ ಎಡಭಾಗದ ಹೂವು ಕೊಡು ಎಂದು ಬೇಡಿ ಕೊಳ್ಳುತ್ತಾರೆ. ಅವರ ಬೇಡಿಕೆಯಂತೆ ದೇವರ ಬಲಭಾಗದಿಂದ ಹೂವು ಕೆಳಗೆ ಬಿದ್ದರೆ ಕನ್ಯಾ ನಿಶ್ಚಯಕ್ಕೆ ಹೋಗುತ್ತಾರೆ. ಎಡಭಾಗದಿಂದ ಹೂವು ಬಿದ್ದರೆ ಬರಲು ಆಗುವುದಿಲ್ಲವೆಂದು ಹೇಳಿ ಕಳುಹಿಸುತ್ತಾರೆ, ದೇವರ ಯಾವ ಭಾಗದಿಂದಲೂ ಪ್ರಸಾದದ ರೂಪದಲ್ಲಿ ಹೂವು ಕೆಳಗೆ ಬೀಳದಿದ್ದಾಗ ನಮ್ಮ ಭಕ್ತಿ ದೇವರಿಗೆ ಒಪ್ಪಿಗೆಯಾಗಿಲ್ಲ ಎನ್ನುತ್ತಾರೆ. ಅಥವಾ ಇನ್ನೂ ಕೆಲವು ದಿವಸ ಬಿಟ್ಟು ಕನ್ಯೆ ನಿಶ್ಚಯಕ್ಕೆ ಬರುತ್ತೇವೆ ಎಂದು ಹೆಣ್ಣಿನ ಮನೆಯವರಿಗೆ ವಿಷಯ ತಿಳಿಸುತ್ತಾರೆ.

ಹಾವು, ಬೆಕ್ಕು, ಮೊಲ, ಪ್ರಯಾಣದ ಕಾಲಕ್ಕೆ ಅಡ್ಡ ಹಾಯ್ದರೆ ಕನ್ಯಾನಿಶ್ಚಯಕ್ಕೆ ಹೋಗುವುದಿಲ್ಲ. ಶವ ಹೊತ್ತವರು, ಸೂಳೆಯರು, ಬೋಳತಲೆಯವರು, ಬ್ರಾಹ್ಮಣರು ಎದುರಾದರೆ ಪ್ರಯಾಣ ಬೆಳೆಸದೆ ಮನೆಗೆ ಹಿಂದಿರುಗುತ್ತಾರೆ. ಕನ್ಯೆ ನೋಡಲು ಹೋಗುವಾಗ ದಾರಿಯುದ್ದಕ್ಕೂ ಕೆಟ್ಟ ಶಕುನಗಳು ಎದುರಾದರೆ ಕನ್ಯೆ ನೋಡಲು ಹೋಗುವುದಿಲ್ಲ. ನಿಮ್ಮ ಮಗಳನ್ನು ಬೇರೆ ಕಡೆಗೆ ಕೊಡಬಹುದೆಂದು ತಿಳಿಸಲಾಗುತ್ತದೆ. ಕೂರಗಿ ತಾಳು, ಮುತ್ತೈದೆಯರು ತುಂಬಿದ ಕೊಡ ಹೊತ್ತವರು ಎದುರಾದರೆ ಶುಭ ಎಂದು ಕನ್ಯೆ ಒಳ್ಳೆಯವಳು ಎಂದು ತಿಳಿದು ಐದು ಇಲ್ಲವೆ ಒಂಭತ್ತು ಜನರು ಪ್ರಮಾಣ ಬೆಳೆಸುತ್ತಾರೆ. ಸುಡುಗಾಡು ಸಿದ್ಧರಲ್ಲಿ ಈ ನಂಬಿಕೆಗಳು ಇನ್ನೂ ಪ್ರಚಲಿತದಲ್ಲಿದೆ. ಈಗ ಮೂಢನಂಬಿಕೆಗಳು ಸ್ವಲ್ಪ ಕಡಿಮೆಯಾಗಿವೆ.

ತೆರ

ಸುಡುಗಾಡು ಸಿದ್ಧರಲ್ಲಿಯೂ ತೆರ ಕೊಟ್ಟು ಹೆಣ್ಣನ್ನು ಮದುವೆ ಮಾಡಿಕೊಳ್ಳುವ ಪದ್ಧತಿ ಜಾರಿಯಲ್ಲಿದೆ. ಹೆಣ್ಣು ಮಕ್ಕಳ ಸಂಖ್ಯೆ ಕಡಿಮೆ ಇರುವ ಅವರ ಸಮಾಜದಲ್ಲಿ ಆದಷ್ಟು ಬೇಗ ಗಂಡಿಗೆ ಹೆಣ್ಣು ಹುಡುಕಿ ಮದುವೆ ಮಾಡುತ್ತಾರೆ. ಹತ್ತಿರದ ರಕ್ತ ಸಂಬಂಧಿಗಳಾಗಿದ್ದರೆ ಬಾಲ್ಯ ವಿವಾಹ ಮಾಡುತ್ತಾರೆ. 'ತೆರ' ಕೊಡುವುದು ಸುಡುಗಾಡು ಸಿದ್ಧರಲ್ಲಿ ಒಂದೇ ತೆರನಾಗಿ ಇಲ್ಲ. ಅದು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿದೆ. 'ಕನ್ಯಾನಿಶ್ಚಯ' ಕಾಲಕ್ಕೆ ಅವರ ಸಮಾಜದ ಹಿರಿಯರ ಸಮ್ಮುಖದಲ್ಲಿ 'ತೆರ' ಎಷ್ಟು ಎಂಬುದನ್ನು ಗೊತ್ತು ಮಾಡುತ್ತಾರೆ. '೫೦೦೯ ರಿಂದ

೬೦೦೦ ಸಾವಿರ ರೂಪಾಯಿಗಳು ಮತ್ತು ಒಂದು ಸೀರೆ, ಕುಪ್ಪಸ, ತೂಕದ ಹಿತ್ತಾಳೆ ಮತ್ತು ಹಬ್ಬಕ್ಕೆ ೪೦೦೦ ಸಾವಿರ ರೂಪಾಯಿ ಹೆಣ್ಣಿನ ತಾಯಿಗೆ ಕೊಡುತ್ತಾರೆ.

ಮದುವೆ ಹಂದರ:

ಸುಡುಗಾಡು ಸಿದ್ಧರಲ್ಲಿ ಮದುವೆಗಾಗಿ ಚಪ್ಪರ ನಿರ್ಮಿಸಲು ಕೆಲವರು ೧೪ ಕಂಬಗಳನ್ನು ಬಳಸಿದರೆ ಮತ್ತೆ ಕೆಲವರು ೧೬ ಕಂಬಗಳನ್ನು ಹಾಕುವುದು ಕಂಡು ಬರುತ್ತದೆ. ಅವರಲ್ಲಿಯ ಒಬ್ಬ ಹಿರಿಯ ವ್ಯಕ್ತಿಯನ್ನು ಆಚಾರ್ಯನೆಂದು ನೇಮಿಸುತ್ತಾರೆ. ಮದುವೆ ಮನೆಯವರು ಮುತ್ತೈದೆಯರನ್ನು ಕರೆದುಕೊಂಡು ಹೋಗಿ ಗೌರವಾದರಗಳಿಂದ ಹಾಲಗಂಬ ತರುತ್ತಾನೆ. ಹಾಲಗಂಬ ನೆಟ್ಟ ಮೇಲೆ ಅದಕ್ಕೆ ಐದು ಸುತ್ತ ಸುರಗಿ ಸುತ್ತಿ ಪೂಜಿಸುತ್ತಾರೆ. ಈ ಆಚರಣೆಗೆ ೫೧ ರೂಪಾಯಿ ಚಾಜ ಕೊಟ್ಟು ಊಟ ಮಾಡಿಸುತ್ತಾರೆ.

ಮದುವೆ

ಸುಡುಗಾಡು ಸಿದ್ಧರ ಕ್ರಿಯಾಚರಣೆಗಳು ಇತರರಿಗಿಂತ ಭಿನ್ನವಾಗಿವೆ. ಅವರಲ್ಲಿ ಸಗೋತ್ರ ವಿವಾಹ ನಿಷಾದ್ದವಾಗಿದೆ. ಅಕ್ಕನ ಮಗಳನ್ನು ತಂದುಕೊಳ್ಳುತ್ತಾರೆ. ಆದರೆ ತಂಗಿ ಮಗಳನ್ನು ಮದುವೆಯಾಗುವುದಿಲ್ಲ, ವರದಕ್ಷಿಣೆಯ ಪಿಡುಗು ಅವರಲ್ಲಿ ಇದುವರೆಗೆ ಇಲ್ಲ. ಸುಡುಗಾಡು ಸಿದ್ದರು ಗುಡಾರ, ಜೋಪಡಿಗಳಲ್ಲಿ ಹಿರಿಯರ ಮೂಲಕವೇ ಸಾಲಾವಳಿ ನೋಡುತ್ತಾರೆ. ಕನ್ಯೆ ಪರೀಕ್ಷೆಯಲ್ಲಿ ವರಪರೀಕ್ಷೆ ಬಹುಮುಖ್ಯವಾಗಿದೆ. ಸಾಮಾನ್ಯವಾಗಿ ಗಂಡು ಹೆಣ್ಣಿನ ಒಪ್ಪಿಗೆಯನ್ನು ಅವರ ಕೇಳುವುದಿಲ್ಲ.

ಒಂದು ಕಾಲದಲ್ಲಿ ಸುಡುಗಾಡು ಸಿದ್ಧರಲ್ಲಿ ಮದುವೆಯಾಗುವ ಗಂಡು ಅತ್ತೆ ಮಾವಂದಿರೊಂದಿಗೆ ಕನಿಷ್ಟ ಒಂದು ವರ್ಷದವರೆಗೆ ವಾಸಮಾಡಬೇಕು ಎಂಬ ಸಂಪ್ರದಾಯವಿತ್ತು. ಈ ಅವಧಿಯಲ್ಲಿ ಅತ್ತೆ ಮಾವಂದಿರು ಗಂಡಿನ ಗುಣ ಪರೀಕ್ಷೆ ಮಾಡುತ್ತಾರೆ. ಗಂಡು ಅತ್ತೆ ಮಾವಂದಿರ ಜೊತೆಯಲ್ಲಿ ಇದ್ದು ಅವರು ಹೋದ ಕಡೆ ಸಂಚರಿಸಬೇಕು. ಇದಕ್ಕೆ ಅವರು ತೆಲುಗಿನಲ್ಲಿ (ಮೇರ) ತಿರುಗುವುದು ಎನ್ನುತ್ತಾರೆ. ಈ ಸಮಯದಲ್ಲಿ ಅಳಿಯನಾಗುವವನು ಊರಲ್ಲಿ ಭಿಕ್ಷಾಟನೆ ಮಾಡಬೇಕು. ದನಕರುಗಳಿಗೆ ಮೇವು, ನೀರು ಹಾಕಬೇಕು. ಮನೆಕೆಲಸಗಳನ್ನೆಲ್ಲ ಅತ್ಯಂತ ನಿಷ್ಠೆಯಿಂದ ಮಾಡಿ ತೋರಿಸಬೇಕು. ಕಟ್ಟಿಗೆ ಕಡಿಯಬೇಕು, ನೀರು ತರಬೇಕು, ಒಟ್ಟಿನಲ್ಲಿ ಅತ್ತೆ ಮಾವ ಹೇಳಿದ್ದನೆಲ್ಲ ಮಾಡಿ ತೋರಿಸಬೇಕು. ಗಂಡು ಸಂಸಾರ ಮಾಡಲು ಸಮರ್ಥನೆಂದು ಕಂಡು ಬಂದಲ್ಲಿ ಮಾತ್ರ ಅತ್ತೆ ಮಾವ ಹೆಣ್ಣು ಕೊಡಲು ಒಪ್ಪಿಗೆ ಸೂಚಿಸುತ್ತಿದ್ದರು. ಅವರಿಗೆ ಗಂಡು ಅಸಮರ್ಥನೆಂದು ತಿಳಿದು ಬಂದಲ್ಲಿ ಹೆಣ್ಣು ಕೊಡಲು ನಿರಾಕರಿಸುತ್ತಿದ್ದರು. ಈ ವ್ಯವಸ್ಥೆ ಒಂದು ವರ್ಷದ ವರೆಗೆ ಇರುತ್ತದೆ. ಗಂಡು ಸಮರ್ಥನೆಂಬುದನ್ನು ಕಂಡು ಅತ್ತೆ ಮಾವ, ಹೆಣ್ಣು ಕೊಡಲು ಒಪ್ಪಿಗೆ ಸೂಚಿಸಿದಾಗ ಗಂಡಿನ ಮನೆಯವರಿಗೆ ಹೆಣ್ಣಿನ ಮನೆಯ ಮುಂದೆ ಚಾಪೆ ಹಾಕುತ್ತಾರೆ. ಚಾಪೆ ಹಾಕುವುದೆಂದರೆ ಸುಡುಗಾಡು ಸಿದ್ದರಲ್ಲಿ

ನಿಶ್ಚಯ ಕಾರ್ಯವೆಂದರ್ಥ. ದೈವಸ್ಥರನ್ನು ಕರೆದು ಹೆಣ್ಣು ನಿಶ್ಚಯಿಸುತ್ತಾರೆ. ಈ ನಿಶ್ಚಯ ಕಾರ್ಯದಲ್ಲಿ ಗಂಡು ದೈವಕ್ಕೆ ೨೪ ರೂ.ಗಳ ಜೊತೆಗೆ ಎಲೆ, ಅಡಿಕೆ ಕೊಡಬೇಕು.

ನಿಶ್ಚಯವಾದ ದಿನದಿಂದ ಮದುವೆ ಆಗುವವರೆಗೆ ಗಂಡು ಹೆಣ್ಣಿಗೆ ಬೇಕಾಗುವ ಬಟ್ಟೆ ಬರೆಗಳನ್ನು ಕೊಡಿಸಬೇಕು. ಸುಡುಗಾಡು ಸಿದ್ಧರಲ್ಲಿ ಈ ಹಿಂದೆ ಮದುವೆ ಸಮಾರಂಭ ಐದು ದಿನಗಳವರೆಗೆ ನಡೆಯುತ್ತಿತ್ತು. ಈಗ ಕಾಲ ಬದಲಾಗಿದೆ. ಒಂದೆರಡು ದಿನದಲ್ಲಿ ಮದುವೆ ನೆರವೇರಿಸುತ್ತಾರೆ. ಅಳಿಯ ಅತ್ತೆ ಮಾವನೊಂದಿಗೆ ಮೂರು ವರ್ಷಗಳವರೆಗೆ ಜೀವನ ಮಾಡಬೇಕೆಂಬ ನಿಯಮ ಒಂದು ಕಾಲಕ್ಕಿತ್ತು ಇಂದು ಕಡಿಮೆಯಾಗಿದೆ.

ಹಿಂದೆ ತಾಳಿಯ ಬದಲಾಗಿ ರುದ್ರಾಕ್ಷಿ ಕಟ್ಟುತ್ತಿದ್ದರು. ಇಂದು ತಾಳಿ ಕಟ್ಟುತ್ತಾರೆ. ಮದುವೆ ಕಾರ್ಯ ಹೆಣ್ಣಿನ ಮನೆಯಲ್ಲಿ ನಡೆಯುತ್ತದೆ. ಗಂಡಿನವರು ಹೆಣ್ಣಿನ ಮನೆಯ ಮುಂದೆ ಚಾಪೆ ಹಾಕಿ, ದೈವದವರನ್ನು ಆಮಂತ್ರಿಸುತ್ತಾರೆ. ಮದುವೆ ಹಂದರವನ್ನು ಹನ್ನೆರಡು ಕಂಬಗಳಿಂದ ಹಾಕಿರುತ್ತಾರೆ. ಇವರ ಮದುವೆ ಶಾಸ್ತ್ರ ಬ್ರಾಹ್ಮಣ ಅಥವಾ ಲಿಂಗಾಯಿತ ಪುರೋಹಿತರಿಂದ ನಡೆಯುತ್ತದೆ. ಮದುಮಗನ ಶಾಸ್ತ್ರ ಮಾಡುವಾಗ ಹಸೆ ಬರೆದು ಕೂಡಿಸಬೇಕಾದರೆ ಬಲಗಾಲಿನ ಬೆರಳಿಗೆ ಬೆಳ್ಳಿಯ ಮಿಂಚು ಹಾಕಿ, ಕೈಯಲ್ಲಿ ಕತ್ತಿ, ಅದಕ್ಕೆ ಒಂದು ನಿಂಬೆಹಣ್ಣು, ಚುಚ್ಚಿರುತ್ತಾರೆ, ವಸ್ತ್ರದಲ್ಲಿ ಕೆಳಗೆ ಜೋಳಿಗೆ ಹಾಕಿ, ಒಂದೇ ಜಾತಿಯ ಸೌದೆ ಬೆಂಕಿ ಮಾಡಿ ಹಾಲು ಉಕ್ಕಿಸುತ್ತಾರೆ. ಅರಿಷಿಣದಣ್ಣೆ ಸ್ನಾನದ ನಂತರ ಮದುಮಗನಿಗೆ ಸಂಬಂಧಿಕರೆಲ್ಲ ಬಾಳೆಹಣ್ಣು, ತುಪ್ಪ, ಬೆಲ್ಲದಿಂದ ಮಾಡಿದ ಪ್ರಸಾದವನ್ನು ಒಂದೊಂದು ತುತ್ತು ಕೊಡುತ್ತಾರೆ. ನಂತರ ಅರಿಶಿಣ ಕೊಂಬು, ಎಲೆಯಿಂದ ಕೈಗೆ ಕಂಕಣ ಕಟ್ಟಿ ಮಾಂಗಲ್ಯವನ್ನು ಎಲ್ಲರಿಂದ ಮುಟ್ಟಿಸಿ ತಾಳಿ ಕಟ್ಟಿಸುತ್ತಾರೆ.

ಮದುವೆ ಮುಗಿಯುವವರೆಗೆ ಸೇಂದಿ ಸರಾಯಿ, ಮಾಂಸದ ಊಟ ಮೊದಲಾದ ಖರ್ಚನ್ನು ಗಂಡಿನವರೇ ನೋಡಿಕೊಳ್ಳಬೇಕು. ಮದುವೆಯಾದ ಮೂರು ದಿನಕ್ಕೆ ಕೋಳಿ, ಕುರಿ, ಬಲಿಕೊಟ್ಟು ಬಂಧು-ಬಳಗದವರಿಗೆಲ್ಲ ಊಟ ಹಾಕಿಸಬೇಕು. ಸುಡುಗಾಡು ಸಿದ್ಧರಲ್ಲಿ ಬಾಲ್ಯವಿವಾಹ, ವಿಧವಾ ವಿವಾಹ ಮೊದಲಾದ ವಿವಾಹ ಪದ್ಧತಿಗಳು ಜಾರಿಯಲ್ಲಿವೆ. ಸಿದ್ಧರಲ್ಲಿ ಮಹಿಳೆಯು ಜೀವನದುದ್ದಕ್ಕೂ ಅವಿವಾಹಿತೆಯಾಗಿ ಉಳಿಯಬಹುದೇ ಹೊರತು ಬಸವಿಯಾಗಲು ಅವಕಾಶವಿಲ್ಲ. ಇವರಲ್ಲಿ ವಿವಾಹ ವಿಚ್ಛೇದನ ಸಾಂಪ್ರಾದಾಯಿಕವಾಗಿದೆ. ಗಂಡ ಸತ್ತ ನಂತರ ಹೆಣ್ಣು ಇಚ್ಛೆಪಟ್ಟಲ್ಲಿ ಮಾತ್ರ ಯಾರನ್ನಾದರೂ ಮದುವೆ ಮಾಡಿಕೊಳ್ಳಬಹುದು. ಇಲ್ಲವೆಂದರೆ ಹಾಗೆ ಇರಬೇಕು ಎಂಬ ನಿಯಮ ಸುಡುಗಾಡು ಸಿದ್ಧರಲ್ಲಿ ಇನ್ನೂ ಕಂಡುಬರುತ್ತದೆ.

ಆಧುನಿಕ ಮದುವೆ: ಸುಡುಗಾಡು ಸಿದ್ಧರಲ್ಲಿ ವಿವಾಹಗಳು ದಸರಾ ದಿಪಾವಳಿ ಹಬ್ಬಗಳ ಸಮಯದಲ್ಲಿ ನಡೆಯುತ್ತವೆ. ವರ್ಷಕ್ಕೊಮ್ಮೆ ಒಂದಡೆ ಸೇರುವ ಪದ್ದತಿ ಇದೆ. ಇತ್ತೀಚಿನ ದಿನಗಳಲ್ಲಿ ಮದುವೆ ಮಹೂರ್ತಗಳನ್ನು ನೋಡುತ್ತಿದ್ದಾರೆ. ಅಲ್ಲದೆ ಇವರು ಕೂಡ ಆಧುನಿಕತೆಯ

ಪ್ರಭಾವದಿಂದಾಗಿ ಗುಡಿ, ಕಲ್ಯಾಣ ಮಂಟಪಗಳಲ್ಲಿ ಸಮೂಹಿಕ ವಿವಾಹ ಮಾಡಲು ಪ್ರಾರಂಭಿಸಿರುವುದು ಕಂಡುಬರುತ್ತದೆ. ಮೊದಲು ೫ ದಿನ ಮದುವೆ ಕಾರ್ಯಮಾಡುತ್ತಿದ್ದರು ಇತ್ತೀಚಿಗೆ ಒಂದು ದಿನದಲ್ಲಿ ಮದುವೆ ಕಾರ್ಯ ಮಾಡಿ ಮುಗಿಸುತ್ತಾರೆ.

ಕುಪ್ಪಸ ಶಾಸ್ತ್ರ:

ಮಗಳು ಬಸುರಿ ಎಂಬುದು ತಿಳಿದುಕೊಂಡ ತವರಿನವರು ಐದನೆಯ ತಿಂಗಳಲ್ಲಿ ಕುಪ್ಪಸಶಾಸ್ತ್ರ ನೆರವೇರಿಸುತ್ತಾರೆ. ಶಾಸ್ತ್ರಕ್ಕೆಂದು ಹೊರಡುವಾಗ ಹಸಿರು ಸೀರೆ, ಕುಪ್ಪಸ, ಹಸಿರು ಬಳೆ, ಅಕ್ಕಿ, ಗೋಧಿ ಮುಂತಾದವುಗಳನ್ನು ಬಿದಿರಿನ ಬುಟ್ಟಿಯಲ್ಲಿ ತುಂಬಿಕೊಂಡು ಮುತ್ತೈದೆಯರೆಲ್ಲಾ ಪಯಣ ಬೆಳೆಸುತ್ತಾರೆ. ಸುಡುಗಾಡು ಸಿದ್ಧರು ಭಿಕ್ಷಾಟನೆಯಲ್ಲಿಯೇ, ಇರುವುದರಿಂದ ಬಸುರಿಯನ್ನು ತವರು ಮನೆಗೆ ಕಳುಹಿಸಿ ಕೊಡುವುದಿಲ್ಲ. ಸುಡುಗಾಡು ಸಿದ್ಧರು ಭಿಕ್ಷಾಟನೆಗೆಂದು ಪ್ರದೇಶದಿಂದ ಪ್ರದೇಶಕ್ಕೆ ಹರಿದು ಹಂಚಿ ಹೋಗಿರುವುದು ಇದಕ್ಕೆ ಕಾರಣವಾಗಿದೆ.

ಸುಡುಗಾಡು ಸಿದ್ಧರು ತವರು ಮನೆಗೆ ಮದುವೆಯದ ಹೆಣ್ಣನ್ನು ಹೆಚ್ಚಾಗಿ ಕಳುಹಿಸಿಕೊಡುವ ಪದ್ಧತಿಯಿಲ್ಲ. ಸಾಯಂಕಾಲ ಸಿದ್ಧರ ಸಮಾಜದ ಮುತ್ತೈದೆಯರೆಲ್ಲ ಅಂಗಳದಲ್ಲಿ ಕೂಡಿಕೊಂಡು ಬಸುರಿಗೆ ಸೀರೆ, ಕುಪ್ಪಸ, ತೊಡಿಸುತ್ತಾರೆ. ಹೂವು ಮುಡಿಸಿ, ಹಣ್ಣು, ಹಂಪಲು, ಇಡುವುದರೊಂದಿಗೆ, ಉಡಿತುಂಬಿ ಹಾಡಿ ಹರಸುತ್ತಾರೆ. ದೇವರು ಮುನಿಸಿಕೊಳ್ಳಬಾರದೆಂದು ಊರ ಹನುಮಂತ ದೇವರಿಗೆ ಹೂವು ಹಣ್ಣು ಅರ್ಪಿಸುತ್ತಾರೆ. ಶಾಂತವಾದ ವಾತಾವರಣದಲ್ಲಿ ಶಾಸ್ತ್ರ ನೇರವೇರಿಸುವುದರಿಂದ ಗರ್ಭಿಣಿಯ ಮನಸ್ಸು ನೆಮ್ಮದಿಯಿಂದ ಕೂಡಿರುತ್ತದೆ ಎನ್ನುತ್ತಾರೆ. ಮತ್ತು ಗರ್ಭದಲ್ಲಿಯ ಮಗು ಚೆನ್ನಾಗಿ ಬೆಳೆಯುತ್ತದೆಂದು ತಿಳಿದಿದ್ದಾರೆ. ಗರ್ಭವತಿಗೆ ಸಂತೋಷ ತಂದು ಕೊಡುವುದಕ್ಕಾಗಿ ಈ ಶಾಸ್ತ್ರ ನೆರವೇರಿಸುತ್ತಾ, ಅವಳ ಸುತ್ತ-ಮುತ್ತ ಕುಳಿತು ಅನೇಕ ಶಾಸ್ತ್ರದ ಹಾಡುಗಳನ್ನು ಹಾಡುತ್ತಾರೆ. ಸುಡುಗಾಡು ಸಿದ್ಧರ ಗರ್ಭವತಿ ಉಡಿಗೆ, ತೊಡಿಗೆ, ಊಟ-ತಿಂಡಿ, ಸಹಜ ಬಯಕೆಗಳೊಂದಿಗೆ. ಕಪ್ಪುಮಣ್ಣು, ಇದ್ದಲಿ (ಕರ್ರಾ) ವಿಭೂತಿ, ಮಾವಿನಕಾಯಿ, ಹುಣಸೆಹಣ್ಣು, ತಿನ್ನುವುದಕ್ಕೆ ಬಯಸುತ್ತಾಳೆ. ಮುಖ್ಯವಾಗಿ ಕೋಳಿಯ ಮಾಂಸ ತಿನ್ನುತ್ತಾಳೆ. ಗರ್ಭಿಣಿಗೆ ಕೋಳಿಯ ಮಾಂಸದಿಂದ ಸಿದ್ಧಪಡಿಸಿದ ಸಾರವನ್ನು ಊಟಕ್ಕೆ ಹಾಕದಿದ್ದರೆ ಮುಂದೆ ಅವಳಲ್ಲಿ ಹುಟ್ಟುವ ಮಗುವಿನ ಕಿವಿಸೋರುತ್ತವೆ. ಎಂಬ ನಂಬಿಕೆ ಅವರಲ್ಲಿದೆ. ಹೀಗಾಗಿ ಗರ್ಭಿಣಿಯರಿಗೆ ಕೋಳಿಯ ಮಾಂಸದ ಅಡುಗೆ ಮಾಡಿ ಊಟಕ್ಕೆ ಕೊಡುವುದು ಸಾಮಾನ್ಯವಾಗಿ ಕಂಡುಬರುತ್ತದೆ.

ಹೆರಿಗೆ:

ಅಲೆಮಾರಿಗಳಾದ ಸುಡುಗಾಡು ಸಿದ್ಧರು, ಭಿಕ್ಷೆ ಬೇಡಿ ಹೊಟ್ಟೆ ತುಂಬಿಸಿಕೊಳ್ಳುವ ಪರಿಸ್ಥಿತಿಯಲ್ಲಿ ಗರ್ಭಿಣೆಯು ಜೊತೆಯಲ್ಲಿ ಇರುವಾಗ ಆ ಕುಟುಂಬದ ಸಹಾಯಕ್ಕಾಗಿ ನಾಲ್ಕರಿಂದ ಐದು ಕುಟುಂಬಗಳು ಒಂದೇ ಕಡೆಗೆ ಇರುತ್ತವೆ. ಹಿಂದಿನಿಂದಲೂ ಬಂದಿರುವ ಈ ಪದ್ಧತಿಯನ್ನು ಜಾಗರೂಕತೆಯಿಂದ ಪಾಲಿಸುತ್ತಾರೆ. ಒಂದು ವೇಳೆ ಬಸುರಿ ಇರುವ

ಕುಟುಂಬದ ಜೋಪಡಿಯನ್ನು ಬಿಟ್ಟು ಉಳಿದ ಜೋಪಡಿಯವರು ಬೇರೆ ಪ್ರದೇಶಕ್ಕೆ ಹೋದರೆ, ಅಪರಾಧ ಎಂದು ಭಾವಿಸುತ್ತಾರೆ, ಗರ್ಭಿಣಿಗೆ ಒಂಭುತ್ತು ತಿಂಗಳು ತುಂಬಿ ಹೆರಿಗೆ ಬೇನೆ ಪ್ರಾರಂಭವಾದ ವಿಷಯ ತಿಳಿದ ತಕ್ಷಣ ಪಕ್ಕದ ಗುಡಿಸಲಿನ ಹೆಂಗಸರು ಗರ್ಭಿಣಿಯ ಗುಡಿಸಲಿಗೆ ಧಾವಿಸಿ ಬರುತ್ತಾರೆ. ಇವರಲ್ಲಿರುವ ಅನುಭವಸ್ಥರು ಹೆರಿಗೆಯನ್ನು ಸೂಕ್ತ ರೀತಿಯಲ್ಲಿ ನೆರವೇರಿಸುತ್ತಾರೆ. ಹೆರಿಗೆಯಾದ ಕೆಲ ಸಮಯಗಳಲ್ಲಿಯೇ ಬಾಣಂತಿಗೆ ಸಾರಾಯಿ ಕುಡಿಸುತ್ತಾರೆ. ಸದಾ ಸಂಚಾರಿಗಳಾದ ಇವರು ಗರ್ಭಿಣಿ ಹೆಂಗಸರನ್ನು ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗುವುದು ಕಡಿಮೆ ಎಂದು ಹೇಳಬಹುದು. ಒಂದು ವೇಳೆ ಗರ್ಭಿಣಿಯರಿಗೆ ತೊಂದರೆಗಳು ಬಂದೊದಗಿದರೆ ಗಿಡಮೂಲಿಕೆ ಔಷಧಗಳನ್ನು ಕೊಟ್ಟು ಸಮಸ್ಯೆ ಪರಿಹರಿಸಿಕೊಳ್ಳುತ್ತಿದ್ದರು.

ಸುಡುಗಾಡ ಸಿದ್ಧರ ಗರ್ಭಿಣಿಯರು ಹೆರಿಗೆ ಸಂದರ್ಭದಲ್ಲಿ ತೊಂದರೆ ಅನುಭವಿಸುತ್ತಿದ್ದರೆ ಆಗ ಕುದುರೆಗೆ ತಿನ್ನಲು ಬುಟ್ಟಿಯಲ್ಲಿ ಜೋಳವನ್ನು ಇಡುತ್ತಾರೆ. ಕುದುರೆ ಜೋಳವನ್ನು ತಿನ್ನುವಾಗ ಅದರಲ್ಲಿಯ ಎಂಜಲು ಜೋಳವನ್ನು ತೆಗೆದುಕೊಂಡು ಬಂದು ಗರ್ಭಿಣಿಗೆ ತಿನಿಸುತ್ತಾರೆ. ಎಂಜಲು ಜೋಳ ತಿಂದ ಗರ್ಭಿಣಿಗೆ ಹೇಸಿಗೆಯಾಗಿ ವಾಂತಿ ಬರುತ್ತದೆ. ಆಗ ಗರ್ಭಿಣಿ ಮಗುವಿಗೆ ಜನ್ಮ ನೀಡುತ್ತಾಳೆಂಬ ನಂಬಿಕೆ ಅವರಲ್ಲಿದೆ. ಈ ರೀತಿಯ ವಿಶಿಷ್ಟ ಮತ್ತು ವಿಚಿತ್ರ ಸಂಪ್ರಾದಾಯ, ಆಚರಣೆಗಳು ಸುಡುಗಾಡು ಸಿದ್ಧರಲ್ಲಿ ಇರುವುದು ಕಂಡುಬರುತ್ತವೆ. ಈ ಎಲ್ಲಾ ನಂಬಿಕೆ ಮತ್ತು ಆಚರಣೆಗಳ ಮೂಲ ಉದ್ದೇಶ, ಗರ್ಭಿಣಿ ಮಗುವಿಗೆ ಜನ್ಮ ನೀಡಲಿ, ಸಮಯಕ್ಕೆ ಸರಿಯಾಗಿ ಮಗುವಿಗೆ ಜನ್ಮ ನೀಡದಿದ್ದರೆ ತಾಯಿ ಮಗುವಿಗೆ ತೊಂದರೆ ತಪ್ಪದು ಎಂದು ಸುಡುಗಾಡು ಸಿದ್ಧರು ತಿಳಿದುಕೊಂಡಿದ್ದಾರೆ. ಆಧುನಿಕತೆಗೆ ಹೊಂದಿಕೊಳ್ಳುತ್ತಿರುವ ಸುಡುಗಾಡು ಸಿದ್ಧರಲ್ಲಿ ಅನೇಕರು ಇಂದು ಸರಕಾರಿ ಆಸ್ಪತ್ರೆಗಳಿಗೆ ಹೋಗಿ ಹೆರಿಗೆ ಮಾಡಿಸಿಕೊಂಡು ಬರುತ್ತಿರುವುದು ಕಂಡು ಬರುತ್ತಿದೆ. ಈ ಸಂದರ್ಭದಲ್ಲಿ ತಾಯಿ ಮಗುವಿನ ಆರೋಗ್ಯಕ್ಕೆ ಸಂಬಂಧಿಸಿದಂತೆ ವೈದ್ಯರು ನೀಡಿರುವ ಸಲಹೆ ಸೂಚನೆ, ಔಷಧೋಪಚಾರಗಳನ್ನು ಅನುಸರಿಸುತ್ತಿರುವುದು ಕಂಡು ಬರುತ್ತದೆ. ಕೆಲ ಸುಡುಗಾಡು ಸಿದ್ಧರು ಗರ್ಭಿಣಿ ಆದಾಗಿನಿಂದ ಪ್ರತಿ ತಿಂಗಳು ಆಸ್ಪತ್ರೆಗಳಿಗೆ ಕರೆದು ಕೊಂಡು ಹೋಗಿ ತಪಾಸಣೆ ಮಾಡಿಸುತ್ತಿರುವುದು ಕಂಡುಬರುತ್ತದೆ.

ವಸತಿ ವ್ಯವಸ್ಥೆ:

ಸುಡುಗಾಡು ಸಿದ್ಧರು ಸಾಮಾನ್ಯವಾಗಿ ಸೇಂದಿ ಸರಾಯಿ ಪ್ರಿಯರು ಅವರು ಹೆಚ್ಚಾಗಿ ಈಚಲು ಮರಗಳಿದ್ದಲ್ಲಿ ಬೀಡು ಬಿಡುವುದು ವಾಡಿಕೆ. ಈಗ ಸುಡುಗಾಡು ಸಿದ್ಧರು ಹಳ್ಳಿಯ ಬಯಲು ಪ್ರದೇಶಗಳಲ್ಲಿ ಬೀಡು ಬಿಟ್ಟಿರುವುದನ್ನು ಕಾಣುತ್ತೇವೆ. ಪ್ಲಾಸ್ಟಿಕ್ ಚೀಲ ತಾಡಪತ್ರಿಗಳಿಂದ ಡೇರೆಗಳ ನಿರ್ಮಿಸಿಕೊಂಡು ವಾಸಿಸುತ್ತಿದ್ದಾರೆ. ಸುಡುಗಾಡು ಸಿದ್ಧರು ಈಚಲು ಮರದ

ರಸದಿಂದ ಸೇಂದಿ ತಯಾರಿಸಿಕೊಂಡು ಕುಡಿಯಲು ಬಳಸುತ್ತಿದ್ದರೆ ಹೆಂಗಸರು ಆ ಮರದ ಗರಿಗಳನ್ನು ಬಳಸಿ ಚಾಪೆ, ಬುಟ್ಟಿ ಹೆಣೆದು ಮಾರಾಟ ಮಾಡುತ್ತಿರುತ್ತಾರೆ. ಆಧುನಿಕ ಕಾಲದಲ್ಲಿ ಪ್ಲಾಸ್ಟಿಕ್ ಬುಟ್ಟಿ ಹಾಗೂ ಚಾಪೆ ಬಂದಿರುವುದರಿಂದ ಈಚಲು ಮರದ ಗರಿಯ ಚಾಪೆಗಳ ಬಳಕೆ ಕಡಿಮೆಯಾಗಿದೆ.

ಸುಡುಗಾಡು ಸಿದ್ಧರು ಹೆಚ್ಚು ಭಾರವಲ್ಲದ ಹಗುರವಾದ ಪ್ಲಾಸ್ಟಿಕ್‌ಚೀಲ, ಬಟ್ಟೆ ಹಾಗೂ ತಾಡಪತ್ರಿ ಬಳಸಿ ವಾಸದ ಮನೆಗಳನ್ನು ನಿರ್ಮಿಸಿಕೊಳ್ಳುತ್ತಾರೆ. ಕೆಲವರು ಕೌವದಿ ಇಲ್ಲವೇ ಪ್ಲಾಸ್ಟಿಕ್ ಚೀಲಗಳಿಂದ ೨೦-೩೦ ಅಳತೆಯ ಜೋಪಾಡಿಗಳನ್ನು ನಿರ್ಮಿಸುತ್ತಾರೆ. ನೆಲದ ಕೆಳಗಡೆ ಬಿಳಿಪರ್ಸಿ ಹಾಕಿಕೊಳ್ಳುತ್ತಾರೆ ಹಾಗೂ ಸ್ನಾನಕ್ಕೆ ಚಿಕ್ಕ ಕಲ್ಲುಗಳಿಂದ ಅಥವಾ ಪ್ಲಾಸ್ಟಿಕ್ ಬಳಸಿ ನಾಲ್ಕು ಕಡೆ ನಾಲ್ಕು ಮರಗಳ ಕೋಲುಗಳನ್ನು ಬಳಸಿ ಮರೆಮಾಡಿಕೊಳ್ಳುತ್ತಾರೆ.

ಸಾಮಾನ್ಯವಾಗಿ ಒಂದೇ ಗುಡಾರದಲ್ಲಿ ತಮ್ಮ ಇಡೀ ಸಂಸಾರದ ಜೊತೆಗೆ ಕೋಳಿ, ಕುರಿ, ಬೆಕ್ಕು ಇತರೆ ಸಾಮಗ್ರಿಗಳನ್ನು ಇಡಲು ವ್ಯವಸ್ಥೆ ಮಾಡುತ್ತಾರೆ. ಗುಡಿಸಲ ಒಳಗೆ ದೀಪ ತೂಗು ಬಿಟ್ಟಿರುತ್ತಾರೆ. ದೀಪಗಳನ್ನು ಸಾರಾಯಿ ಬಾಟಲಿಗಳಿಂದ ತಯಾರಿಸುತ್ತಾರೆ. ಅದರಲ್ಲಿ ಸೀಮೆ ಎಣ್ಣೆ ಹಾಕಿ ತೆಳುವಾದ ಹತ್ತಿ ಬಟ್ಟೆಯಿಂದ ದೀಪದ ಹಣತೆಯನ್ನು ನಿರ್ಮಿಸುತ್ತಾರೆ ಗುಡಾರದ ಮುಂಭಾಗದಲ್ಲಿ ದನಕರು, ನಾಯಿ, ಬೆಕ್ಕು, ಕುರಿಗಳನ್ನು ಸಾಕುತ್ತಾರೆ. ಪ್ರಾಣಿಗಳನ್ನು ಕಟ್ಟಲು ಗೂಟಗಳನ್ನು ಹಾಕಿರುತ್ತಾರೆ. ಹಾಸಲು ಮತ್ತು ಹೊದೆಯಲು ಕೌದಿಗಳನ್ನು ಬಳಸುತ್ತಾರೆ. ಉಳ್ಳವರು ಕಂಬಳಿಗಳನ್ನು ಬಳಸುತ್ತಾರೆ.

ಮಳೆಗಾಲ, ಚಳಿಗಾಲ ಅಥವಾ ಬೇಸಿಗೆ ಕಾಲದಲ್ಲಿ ಸುಡುಗಾಡು ಸಿದ್ಧರು ಈ ಮೂರು ಕಾಲಕ್ಕೂ ಹೊಂದಿಕೊಳ್ಳುವಂತಹ ಡೇರೆಯಗಳನ್ನು ಸಿದ್ಧಪಡಿಸಿಕೊಂಡಿರುತ್ತಾರೆ. ಮಳೆಗಾಲದಲ್ಲಿ ನೀರು ಗುಡಿಸಲಿನ ಒಳಕ್ಕೆ ಬರದಂತೆ ಸುತ್ತಲು ಮಣ್ಣಿನ ದಿನ್ನೆ ಮಾಡಿರುತ್ತಾರೆ. ಪ್ರಸ್ತುತ ದಿನಗಳಲ್ಲಿ ಸುಡುಗಾಡು ಸಿದ್ಧರಿಗೆ ಸರ್ಕಾರ ಉಚಿತ ಮನೆ, ನಿವೇಶನ ನೀಡುತ್ತಿದೆ. ಸರ್ಕಾರದ ಯೋಜನೆಗಳಾದ ಆಶ್ರಯ ಮನೆಗಳು ಅಂಬೇಡ್ಕರ ಯೋಜನೆ ಮನೆಗಳು ಆಟಲ್ ಜೀ ಯೋಜನೆಗಳು ಹೀಗೆ ಸರ್ಕಾರದ ವಿವಿಧ ಯೋಜನೆಗಳಲ್ಲಿ ಅವರಿಗೆ ಸೂರು ಒದಗಿಸುತ್ತಿದೆ.

ಸುಡುಗಾಡು ಸಿದ್ಧರು ಇತ್ತೀಚೆಗೆ ಅಲೆಮಾರಿ ಬದುಕನ್ನು ನಿಲ್ಲಿಸಿ ಪಟ್ಟಣ ನಗರಗಳಲ್ಲಿ ದುಡಿದು ಬಾಂಬೆ, ದುಬೈ, ಪುಣೆ ಕಡೆ ಹೋಗಿ ಹಣ ಸಂಪಾದಿಸಿಕೊಂಡು ಸ್ವಂತ ಮನೆ, ಹೊಲ, ಆಸ್ತಿ ಮಾಡಿಕೊಂಡು ಒಂದು ಕಡೆ ನೆಲೆ ನಿಂತಿರುವುದನ್ನು ಕಾಣುತ್ತೇವೆ. ಪ್ರಸ್ತುತ ದಿನಗಳಲ್ಲಿ ಸೇಡಂನಲ್ಲಿ ಇವರಿಗೆ ಸರ್ಕಾರ ನಿವೇಶನ ನೀಡಿದ್ದು, ತಮ್ಮ ಸ್ವಂತ ಹಣದಿಂದ ಮನೆಗಳನ್ನು ನಿರ್ಮಿಸಿಕೊಳ್ಳುತ್ತಿದ್ದಾರೆ. ಬಿಳಿ ಕಲ್ಲುಗಳ ಹಾಗೂ ಆರ್‌ಸಿಸಿ ಮನೆಗಳನ್ನು ಅವರು ನಿರ್ಮಿಸಿಕೊಳ್ಳುತ್ತಿದ್ದಾರೆ. ಕೆಲವರು ಶಿಕ್ಷಣ ಪಡೆದು ನಗರ ಪ್ರದೇಶಗಳಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಇವರಲ್ಲಿ ಸರ್ಕಾರಿ ನೌಕರಿ ಪಡೆದವರು ಬಹಳ ವಿರಳ ಎಂದು ಹೇಳಬಹುದು. ಏಕೆಂದರೆ ಇವರು ಶಿಕ್ಷಣ ಕಲಿಸಲು ಸಾಧ್ಯವಾಗಿಲ್ಲ. ಕಡುಬಡತನದಿಂದ ಜೀವನ ಸಾಗಿಸುವುದೇ

ಕಷ್ಟವಾದಾಗ ಶಿಕ್ಷಣ ಪಡೆಯುವುದು ಇವರಿಂದ ಸಾಧ್ಯವಾಗುತ್ತಿರಲಿಲ್ಲ. ಇತ್ತೀಚೆಗೆ ಶಿಕ್ಷಣ ಪಡೆಯುತ್ತಿರುವುದು ಅಲ್ಲಲ್ಲಿ ಕಂಡುಬರುತ್ತಿದೆ.

ಮಾನವನ ಮೂಲಭೂತ ಅವಶ್ಯಕತೆಗಳಲ್ಲಿ ವಸತಿಯೂ ಒಂದು. ಸೂರಿಲ್ಲದ ಕಡುಬಡವರಿಗೆ ಸರಕಾರ ಮನೆಗಳನ್ನು ನಿರ್ಮಿಸಿಕೊಡುತ್ತಿದೆ. ಕೆಲ ಮನೆಗಳನ್ನು ಸರಕಾರವೇ ಕಟ್ಟಿಸಿ ಅರ್ಹ ಫಲಾನುಭವಿಗಳಿಗೆ ನೀಡುತ್ತಿದೆ. ಸುಡುಗಾಡು ಸಿದ್ಧರ ಮನೆಗಳು ಅಲ್ಲೊಂದು ಅಲ್ಲೊಂದು ಇರುತ್ತಿದ್ದವು. ಆದರೆ ಸರ್ಕಾರ ಒಂದೇ ಕಡೆ ಹತ್ತಾರು ಆಶ್ರಯ ಮನೆಗಳನ್ನು ಕಟ್ಟಿಕೊಡುತ್ತಿದೆ. ಕೆಲವು ಕಡೆ ಸುಡುಗಾಡು ಸಿದ್ಧರು ತಮ್ಮಗೆ ಅನುಕೂಲವಾದ ರೀತಿಯಲ್ಲಿ ಸರ್ಕಾರ ಮನೆಗಳನ್ನು ಕಟ್ಟಿಸಿಕೊಂಡಿದ್ದಾರೆ. ಇನ್ನೂ ಕೆಲವು ಕಡೆ ಸರ್ಕಾರ ಯಾವ ರೀತಿಯಾಗಿ ಮನೆಗಳನ್ನು ನಿರ್ಮಿಸಿದೆಯೋ ಅದರಲ್ಲಿಯೇ ವಾಸಿಸುತ್ತಿದ್ದಾರೆ. ಮನೆ ಸುತ್ತ ಮುತ್ತ ಚಿಕ್ಕ ಪುಟ್ಟ ಹೂವು ಹಣ್ಣುಗಳ ಗಿಡಗಳನ್ನು ಬೆಳೆಸುತ್ತಿದ್ದಾರೆ, ನಾಗರಿಕ ಸಮಾಜದವರು ಬಳಸುವ ವಸ್ತುಗಳನ್ನು ಅದಷ್ಟು ತಮ್ಮ ಮನೆಯಲ್ಲಿ ತಂದಿಟ್ಟುಕೊಳ್ಳುವ ಪ್ರಯತ್ನ ಸಾಗಿದೆ. ಇದರ ಫಲವಾಗಿ ಮನೆಯಲ್ಲಿ ಟಿ.ವಿ. ಫ್ಯಾನ್, ಮೊಬೈಲ್ ಮುಂತಾದಗಳನ್ನು ಕಾಣಬಹುದಾಗಿದೆ.

ನಾನು ಕ್ಷೇತ್ರಕಾರ್ಯ ಮಾಡಿದ ಸೇಡಂ ತಾಲೂಕಿನ ಕೋಡ್ಲಾ ಗ್ರಾಮದಲ್ಲಿ ವಾಸಿಸುತ್ತಿರುವ ಸುಡುಗಾಡು ಸಿದ್ಧರ ಮನೆಯ ಮಾದರಿಗಳು ಈ ಕೆಳಗಿನಂತಿವೆ.

ಕ್ರಸಂ	ನಿವೇಶನದ ಮಾದರಿ	ಒಟ್ಟು ಸಂಖ್ಯೆಗಳಲ್ಲಿ	ಶೇಕಡಾವಾರು
೧	ಗುಡಾರ	೨೫	೪೧.೧೬
೨	ಗುಡಿಸಲು	೧೦	೧೬.೬೬
೩	ಟಿನ್ ಮನೆ	೦೦	೦೦
೪	ಡಾಬಾ ಮನೆ	೦೦	೦೦
೫	ಆರ್.ಸಿ.ಸಿ. ಮನೆ	೧೦	೧೬.೬೬
೬	ಆಶ್ರಯ ಮನೆ	೨೫	೪೧.೬
೮	ಬಾಡಿಗೆ ಮನೆ	೦೦	
	ಒಟ್ಟು	೬೦	೧೦೦

ಸುಡುಗಾಡು ಸಿದ್ಧರು ೬೦ ಕುಟುಂಬಗಳಲ್ಲಿ ೧೦ ಕುಟುಂಬಗಳು ಪಕ್ಕಾಮನೆಗಳನ್ನು ಹೊಂದಿದ್ದಾರೆ. ಶೇ.೧೬.೬ರಷ್ಟು ಆಶ್ರಯ ಮನೆಗಳನ್ನು ಹೊಂದಿದ್ದಾರೆ. ಇನ್ನುಳಿದಂತೆ ಶೇ. ೪೧.೧ ರಷ್ಟು ಕುಟುಂಬಗಳು ಹಂಚಿನ ಮನೆಯಲ್ಲಿ ಶೇ. ೧೦ರಷ್ಟು ಗುಡಿಸಲುಗಳಲ್ಲಿ ಶೇ ೨೫ ರಷ್ಟು ಕುಟುಂಬಗಳು ಬಾಡಿಗೆ ಮನೆಯಲ್ಲಿ ಶೇ. ೧೧೪ ರಷ್ಟು ಕುಟುಂಬಗಳು ಗುಡಾರದಲ್ಲಿ

ವಾಸವಾಗಿದ್ದಾರೆ. ಸುಮಾರು ಅರ್ಧದಷ್ಟು ಸುಡುಗಾಡು ಸಿದ್ಧರು ಕುಟುಂಬಗಳಿಗೆ ಆಶ್ರಯ ಮನೆಗಳು ದೊರೆತಿರುವುದು ಅಂಕಿ ಅಂಶಗಳಿಂದ ತಿಳಿದುಬರುತ್ತದೆ.

ಸುಡುಗಾಡು ಸಿದ್ಧರ ಕುಟುಂಬ ವ್ಯವಸ್ಥೆ:

'ಪ್ರತಿಯೊಂದು ಸಮುದಾಯ ತನ್ನದೇ ಆದ ಕುಟುಂಬ ವ್ಯವಸ್ಥೆಯನ್ನು ಹೊಂದಿರುತ್ತದೆ. ಕುಟುಂಬ ಮಾನವನ ಮೂಲಭೂತ ಅವಶ್ಯಕತೆಗಳನ್ನು ಈಡೇರಿಸುವ ಸಂಸ್ಥೆಯಾಗಿದೆ. ಕುಟುಂಬವು ಸದಸ್ಯರ ಅವಶ್ಯಕತೆಗಳಾದ ಲೈಂಗಿಕತೆ, ಸಂತಾನೋತ್ಪತ್ತಿ, ಶಿಶುಗಳ ಪಾಲನೆ–ಪೋಷಣೆ ಪ್ರೀತಿ–ವಾತ್ಸಲ್ಯ ಮೊದಲಾದ ಕಲ್ಪನೆಗಳಿಗೆ ಮಹತ್ವ ಕೊಡುತ್ತದೆ. ಅಲ್ಲದೇ ಧಾರ್ಮಿಕ, ಶೈಕ್ಷಣಿಕ. ಸಾಂಸ್ಕೃತಿಕ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿಯ ಬೇಡಿಕೆಗಳನ್ನು ಕುಟುಂಬದ ಮುಖ್ಯಸ್ಥರು ಜವಾಬ್ದಾರಿಯಿಂದ ನಿರ್ವಹಿಸುತ್ತಾರೆ. "ರಕ್ತ ಸಂಬಂಧಿಗಳ ಸಮೂಹವೊಂದು ಒಂದೇ ಮನೆಯಲ್ಲಿ ವಾಸಿಸುತ್ತಾ ಒಂದೇ ಒಲೆಯಲ್ಲಿ ತಯಾರಿಸಿದ ಅಡುಗೆಯನ್ನು ಸೇವಿಸುತ್ತಾ, ಆಸ್ತಿಯ ಮೇಲೆ ಒಡೆತನವನ್ನು ಹೊಂದಿರುತ್ತಾ ಮತ್ತು ಕುಟುಂಬದ ಪೂಜಾಕಾರ್ಯಗಳಲ್ಲಿ ಸಾಮೂಹಿಕವಾಗಿ ಪಾಲ್ಗೊಳ್ಳುತ್ತಾ ಬರುವಂತಿದ್ದಲ್ಲಿ ಅದನ್ನು ಅವಿಭಕ್ತ ಕುಟುಂಬವೆನ್ನಬಹುದು" ಕುಟುಂಬಗಳಲ್ಲಿ ಕರ್ತೃ ಮುಖ್ಯಸ್ಥ ಎಲ್ಲ ಆಗು–ಹೋಗುಗಳನ್ನು ನೋಡಿಕೊಳ್ಳುತ್ತಾನೆ. ಯಾವುದೇ ತೀರ್ಮಾನ ತೆಗೆದುಕೊಳ್ಳಬೇಕಾದಲ್ಲಿ ಯಜಮಾನನ ತೀರ್ಮಾನವೇ ಅಂತಿಮವಾಗಿದೆ. ಉದಾ:– ವೈವಾಹಿಕ ಕಾರ್ಯಗಳು ನಡೆಯಬೇಕಾದಾಗ ಮುಖ್ಯಸ್ಥನ ತೀರ್ಮಾನ ಮುಖ್ಯವಾಗಿರುತ್ತದೆ ಹೀಗೆ ಸುಡುಗಾಡು ಸಿದ್ಧರು ಸಮುದಾಯದಲ್ಲಿ ಅವಿಭಕ್ತ ಕುಟುಂಬ ಹಾಗೂ ವಿಭಕ್ತ ಕುಟುಂಬ ಪದ್ದತಿಗಳು ಅಸ್ತಿತ್ವದಲ್ಲಿರುವುದು ಕಂಡುಬರುತ್ತವೆ.'[೫]

ಆಹಾರ ಪದ್ದತಿ:

ಪ್ರತಿಯೊಂದು ಸಮುದಾಯವೂ ತನ್ನದೇ ಆದ ವಿಶಿಷ್ಟವಾದ ಆಹಾರ ಪದ್ಧತಿ ಹೊಂದಿರುವುದನ್ನು ಒಂದು ಕಾಲಕ್ಕೆ ಕಾಣುತ್ತೇವೆ. ಈಗ ಆ ವೈಶಿಷ್ಟ್ಯತೆ ಕಂಡುಬರುವುದಿಲ್ಲ.

'ಆದಿಮಾನವ ಮೂಲತಃ ಆಹಾರಕ್ಕಾಗಿ ಪ್ರಾಣಿಗಳನ್ನು ಬೇಟೆಯಾಡುವುದರ ಮುಖಾಂತರ ಜೀವನ ಸಾಗಿಸುತ್ತಿದ್ದು. ಕಾಲನಂತರ ಸರ್ಕಾರ ಅರಣ್ಯ ಇಲಾಖೆಯನ್ನು ವಶಪಡಿಸಿಕೊಂಡಾಗ ಬೇಟೆಗೆ ತೊಂದರೆಯಾಯಿತು. ಈ ಸಂದರ್ಭದಲ್ಲಿ ಗೆಡ್ಡ–ಗೆಣಸು ತಿನ್ನುವುದರ ಮೂಲಕ ಹಸಿವು ನೀಗಿಸಿಕೊಳ್ಳುತ್ತಿದ್ದರು. ನಂತರ ಪಶುಸಂಗೋಪನೆ, ಕೃಷಿಯ ಮೂಲಕ ಆಹಾರ ಧ್ಯಾನಗಳನ್ನು ಬೆಯಳೆದು ಹೊಟ್ಟೆ ತುಂಬಿಸಿಕೊಂಡು ಜೀವನ ನಡೆಸ ತೊಡಗಿದರು. ಮಾನವರೆಲ್ಲ ಒಂದೆಡೆ ಸೇರಿ ಬದುಕುತ್ತಿದ್ದರು. ಅವರ ಮನಸ್ಸಿನ ಸ್ಥಿತಿಗತಿಗಳು ಬದಲಾದವು ಸಮುದಾಯದಲ್ಲಿ ಒಟ್ಟಾರೆ ದುಡಿಯಲು ಪ್ರಾರಂಭಿಸಿದರು. ಆಗ ಸಂಪತ್ತಿನ ಉಳಿತಾಯವಾಗುತ್ತ ಹೋಯಿತ್ತು ಸಮುದಾಯದಲ್ಲಿ ಬಳಸಿದ ಉಳಿದ ಸಂಪತ್ತನ್ನು 'ಮಿಗುತಾಯ' ಎಂದು ಕರೆಯುತ್ತಾರೆ'. ಸುಡುಗಾಡು ಸಿದ್ಧರು ಅಂದಿನ ಆಹಾರ ಆ ದಿನವೇ ಸಂಪಾದಿಸಿಕೊಳುತ್ತಾರೆ. ಇದು ಹೆಚ್ಚಾಗಿ

ಕಂಡುಬರುತ್ತಿದೆ. ಇಂದಿಗೂ ಸುಡುಗಾಡು ಸಿದ್ಧರಲ್ಲಿ ಈ ವ್ಯವಸ್ಥೆ ಇದೆ. ಅಕ್ಕಿ, ಜೋಳ, ರಾಗಿ, ಬೆಲ್ಲ, ತೊಗರಿ, ಗಿಡಮೂಲಿಕೆಗಳು ಜೇನು ಮುಂತಾದ ಆಹಾರ ಪದಾರ್ಥಗಳನ್ನು ತಮ್ಮಗೆ ಬೇಕಾಗುವ ರೀತಿಯಲ್ಲಿ ಸಂಗ್ರಹಣ ಮಾಡಿಕೊಳ್ಳುವ ಪ್ರಯತ್ನವನ್ನು ಮಾಡುತ್ತಿದ್ದಾರೆ. ಹೆಚ್ಚು ಆಹಾರ ಸಂಪತ್ತುಗಳನ್ನು ಸಂಗ್ರಹಿಸುವುದರ ಕಡೆಗೆ ನಿಧಾನವಾದ ಹೆಜ್ಜೆಯನ್ನಿಡುತ್ತಿದ್ದಾರೆ.[೬]

ಕಲಬುರಗಿ ಜಿಲ್ಲೆಯ ಸೇಡಂ ತಾಲೂಕಿನ ಸುಡುಗಾಡು ಸಿದ್ಧರು ಹೆಚ್ಚಾಗಿ ಬಿಳಿ ಜೋಳದ ರೊಟ್ಟಿಯ ಊಟ ಮಾಡುತ್ತಾರೆ. ಬೀದರ ಬಳ್ಳಾರಿ ವಾಸಿಸುವ ಸುಡುಗಾಡು ಸಿದ್ಧರು ಹೈಬ್ರಿಡ್ ಜೋಳದ ರೊಟ್ಟಿಯನ್ನು ಊಟ ಮಾಡುತ್ತಾರೆ ಹಾಗೂ ಸಜ್ಜಿ ಮತ್ತು ಜೋಳವನ್ನು ಊಟಕ್ಕೆ ಉಪಯೋಗಿಸುತ್ತಾರೆ.

ಶಾರೀರಿಕ ಲಕ್ಷಣಗಳು

ಕಪ್ಪು ಮೈಬಣ್ಣ ಹೊಂದಿರುವ ಸುಡುಗಾಡು ಸಿದ್ಧರು ದಕ್ಷಿಣ ಭಾರತದ ದ್ರಾವಿಡ ಜನ ವರ್ಗಕ್ಕೆ ಸೇರಿದವರಾಗಿದ್ದಾರೆ ಎಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಪರಿವಾರ ಹಾಗೂ ಬುಡಗಜಂಗಮ ಸಮುದಾಯದ ಜನರ ಶಾರೀರಿಕ ಲಕ್ಷಣಗಳು ಭಿನ್ನವಾಗಿರುವುದು ಕಂಡುಬರುತ್ತದೆ. ಸುಡುಗಾಡು ಸಿದ್ಧರನ್ನು ಗುರುತಿಸುವ ಪ್ರಮುಖ ಅಂಶಗಳು ಹೀಗಿವೆ. ಮೈ ಬಣ್ಣ ಕಪ್ಪಾಗಿದ್ದು, ಗಡ್ಡ, ಮೀಸೆ, ಹಾಗೂ ತಲೆಕೂದಲುಗಳನ್ನು ಉದ್ದವಾಗಿ ಬಿಟ್ಟಿರುತ್ತಾರೆ. ಹೆಂಗಸರು ತಲೆಯ ಕೂದಲನ್ನು ತಲೆಯ ಹಿಂದಿನ ಭಾಗದಲ್ಲಿ ತುರುಬುಕಟ್ಟಿಕೊಂಡರೆ ಗಂಡಸರು ತಲೆಯ ಮೇಲ್ಭಾಗದಲ್ಲಿ ದುಂಡಾಗಿ ತುರುಬು ಕಟ್ಟಿಕೊಳ್ಳುತ್ತಾರೆ. ಗಡ್ಡ ಮೀಸೆಗಳನ್ನು ಬಾಚಣಿಕೆಯಿಂದ ಬಾಚಿ ಹಾಗೆಯೇ ಇಳಿಯ ಬಿಡುತ್ತಾರೆ. ಮನೆಯಲ್ಲಿ ತೆಲುಗಿನ ಉಪಭಾಷೆ ಮಾತನಾಡುತ್ತಾರೆ. ಭಿಕ್ಷಾಟನೆಯ ಸಂದರ್ಭದಲ್ಲಿ ಬಣ್ಣ ಬಣ್ಣದ ಗಲೀಪುಗಳನ್ನು ಹಾಕಿಕೊಂಡಿರುತ್ತಾರೆ. ಸಂಚಾರದ ಸಮಯದಲ್ಲಿ ಅಲ್ಲಲ್ಲಿ ಕೈಚಳಕದ ಆಟಗಳ ಮಾಡಿ ತೋರಿಸುತ್ತಾರೆ. ಕೆಲವರು ವಿವಿಧ ರೋಗಗಳಿಗೆ ಗಿಡಮೂಲಿಕೆಯನ್ನು ಕೊಡುತ್ತಾರೆ.

ಉಡುಗೆ ತೊಡುಗೆಗಳು

ಮಾನವ ತನ್ನ ಮಾನ ಮುಚ್ಚಿಕೊಳ್ಳಲು ಬಟ್ಟೆ ಧರಿಸುತ್ತಾನೆ. 'ಪ್ರತಿಯೊಂದು ಸಮುದಾಯ ತನ್ನದೆಯಾದ ವಿಶಿಷ್ಟ ಸಂಸ್ಕೃತಿಯನ್ನು ಹೊಂದಿರುತ್ತದೆ. ಆ ಸಂಸ್ಕೃತಿಗೆ ತಕ್ಕಂತೆ ಉಡುಗೆ ತೊಡುಗೆಗಳು ಕಂಡುಬರುತ್ತವೆ.' ಸಾಮಾನ್ಯವಾಗಿ ಸುಡುಗಾಡು ಸಿದ್ಧರು ಹಿಂದೂ ಸ್ತ್ರೀ ಪುರುಷರು ಹಾಕಿಕೊಳ್ಳುವ ಉಡುಗೆ ತೊಡುಗೆಗಳನ್ನೇ ಧರಿಸುತ್ತಾರೆ. ಆದರೆ ಭಿಕ್ಷಾಟನೆಯ ಸಂದರ್ಭದಲ್ಲಿ ವಿಶೇಷವಾದ ವೇಷ ಭೂಷಣಗಳನ್ನು ಧರಿಸುತ್ತಾರೆ. ಗಂಡಸರು ಉದ್ದನೆಯ ನಿಲುವಂಗಿ ಹಾಕಿಕೊಂಡು ಕೊರಳಿಗೆ ಘಂಟೆ, ರುದ್ರಾಕ್ಷಿಮಾಲೆ, ಕಿವಿಗೆ, ಕರ್ಣ ಕುಂಡಲ, ಹಣೆಗೆ ವಿಭೂತಿ, ಎರಡು ಕೈಬೆರಳುಗಳಿಗೆ ಬೆಳ್ಳಿ ಇಲ್ಲವೆ ತಾಮ್ರದ ಉಂಗುರುಗಳು, ಕೊರಳಿಗೆ ಆಂಜನೇಯನ ಪದಕ ಹಾಕಿಕೊಳ್ಳುತ್ತಾರೆ, ಕೈಯಲ್ಲಿ ಶಂಖ, ಬೆತ್ತ, ತಲೆಗೆ ಸುರುಳಿ ಸುರುಳಿಯಾದ ಪೇಟಾ, ತುರಾಯಿ ಅದರ ಮೇಲೆ ನವಿಲು ಗರಿ, ಹಾಕಿಕೊಳ್ಳುತ್ತಾರೆ.

ಸುಡುಗಾಡು ಸಿದ್ಧರಲ್ಲಿ ಹಿರಿಯರು: ಹಳೆಯ ಕಾಲದ ಜನರು ಪಂಚೆ ಅಥವಾ ಧೋತರ ಉಟ್ಟುಕೊಳ್ಳುತ್ತಾರೆ. ಮತ್ತು ಜೇಬು(ಕಿಸೆ) ಇರುವ ಅಂಗಿ ಧರಿಸುತ್ತಾರೆ. ತಲೆಗೆ ರುಮಾಲು ಅಥವಾ ದೊಡ್ಡದಾದ ಟವೆಲ್ ಸುತ್ತುತ್ತಾರೆ. ಹಳೆಯ ಕಾಲದ ಸುಡುಗಾಡು ಸಿದ್ಧರು ಬಟ್ಟೆಯಿಂದ ತಯಾರಿಸಿದ ಟೊಪ್ಪಿಗೆ ಅಥವಾ ರುಮಾಲು ಧರಿಸಿರುತ್ತಾರೆ. ಹೆಣ್ಣು ಮಕ್ಕಳು ಸೀರೆ ಮತ್ತು ಕುಪ್ಪಸ ತೊಡುತ್ತಾರೆ. ಹಣೆಗೆ ಕುಂಕುಮ, ಕೈಗೆ ಬಳೆಗಳನ್ನು ಹಾಕುತ್ತಾರೆ. ಸ್ವಲ್ಪ ಸ್ಥಿತಿವಂತರಾಗಿದ್ದರೆ ಗಾಜಿನ ಬಳೆಗಳನ್ನು ಧರಿಸಿರುತ್ತಾರೆ. ಕಲಿಗೆ ಕಾಲುಂಗುರ, ಮೂಗಿಗೆ ಮೂಗುತಿ, ಕಿವಿಗೆ ಓಲೆ, ಕೊರಳಿಗೆ ಕೆಲವು ಮುತ್ತಿನ ಸರಗಳನ್ನು ಧರಿಸಿರುತ್ತಾರೆ.

ಆಧುನಿಕ ಸಮಾಜದಲ್ಲಿ ಸುಡುಗಾಡು ಸಿದ್ಧರ ಉಡುಗೆ ತೊಡುಗೆಗಳಲ್ಲಿ ಗಣನೀಯವಾದ ಬದಲಾವಣೆಗಳಾಗಿರುವುದು ಕಂಡುಬರುತ್ತದೆ. ಯುವಕರು ಆಧುನಿಕ ಸ್ಪರ್ಶಕ್ಕೆ ಮಾರು ಹೋಗಿದ್ದಾರೆ. ಪ್ಯಾಂಟ್‌ಗಳನ್ನು ಧರಿಸುತ್ತಿದ್ದಾರೆ. ನವೀನ ಶೈಲಿಯ ವಿವಿಧ ವಿನ್ಯಾಸದ ಪ್ಯಾಂಟ್ ಶರ್ಟ್, ಟೀಶರ್ಟ್, ಬೂಟ್‌ಗಳನ್ನು ಯುವತಿಯರು ಚೂಡಿದಾರ, ನೈಟಿ, ಕುಪ್ಪಸ, ತೊಡುವುದು ಕಂಡುಬರುತ್ತಿದೆ. ಪೌಡರ್, ಸ್ನೋ ಮತ್ತಿತರ ಮೇಕಪ್ ಸಾಮಗ್ರಿಗಳನ್ನು ಇವರು ಬಳಸುತ್ತಿದ್ದಾರೆ.

ನಾಟಿ ವೈದ್ಯ:

ಸುಡುಗಾಡು ಸಿದ್ಧರು ವಿವಿಧ ರೋಗಗಳಿಗೆ ನಾಟಿ ಔಷಧಿ ನೀಡುವುದರಲ್ಲಿ ನಿಪುಣರು. ಆಧುನಿಕ ದಿನಗಳಲ್ಲಿಯೂ ಕೂಡ ಇವರು ನಾಟಿ ಔಷಧ ಕೊಡುವುದು ಕಂಡುಬರುತ್ತದೆ. ಸುಡುಗಾಡು ಸಿದ್ಧರು ನೀಡುವ ಔಷಧಗಳ ವಿವರಗಳನ್ನು ಹೀಗೆ ಪಟ್ಟಿ ಮಾಡಬಹುದು.

ಸುಡುಗಾಡು ಸಿದ್ಧರು ಗಿಡಮೂಲಿಕೆಗಳನ್ನು ಮುಖ್ಯವಾಗಿ ಐದು ರೀತಿಯಿಂದ ವಿಂಗಡಿಸಿದ್ದಾರೆ.

೧. ಮಕ್ಕಳ ರೋಗಕ್ಕೆ ಉಪಯೋಗಿಸುವ ಔಷಧ

೨. ಗಂಡಸರ ರೋಗಕ್ಕೆ ಉಪಯೋಗಿಸುವ ಔಷಧ

೩. ಹೆಂಗಸರ ರೋಗಕ್ಕೆ ಉಪಯೋಗಿಸುವ ಔಷಧ

೪. ಪ್ರಾಣಿ ಮತ್ತು ವಿಷ ಜಂತುಗಳು ಕಚ್ಚಿದಾಗ ಉಪಯೋಗಿಸುವ ಔಷಧ

೫. ಪ್ರಾಣಿ, ಪಶು,ಪಕ್ಷಿಗಳ ರೋಗಕ್ಕೆ ಉಪಯೋಗಿಸುವ ಔಷಧ

ಮಕ್ಕಳ ರೋಗಕ್ಕೆ ಉಪಯೋಗಿಸುವ ಔಷಧ:

೧. **ಹೊಟ್ಟೆ ಕಡಿತ:–** 'ಹೊಟ್ಟೆಯ ಒಳಗೆ ಜಂತುಗಳು ಇರುವುದರಿಂದ ಹೊಟ್ಟೆ ಬೇನೆ ಕಾಣಿಸಿಕೊಳ್ಳುತ್ತದೆ. ಅದಕ್ಕೆ ಸೈದರಲವಣ ಲಿಂಬೆಹಣ್ಣು, ಕೂಡಿಸಿ ಪುಡಿ ಮಾಡಿ ಅದರಲ್ಲಿ ಸಕ್ಕರೆ ಬೆರೆಸಿ, ಒಂದು ದಿವಸ ಕುಡಿಸಬೇಕು. ಅಥವಾ ಬಜೆ ಗಿಡದ ರಸವನ್ನು ತೆಗದುಕೊಳ್ಳುವುದರಿಂದ ಹೊಟ್ಟೆಯುಬ್ಬರ ಮತ್ತು ಹೊಟ್ಟೆ ನೋವನ್ನು ಇದು ಗುಣಕಾರಿ ಹಸಿವನ್ನು ಹೆಚ್ಚಿಸುತ್ತದೆ ಕಫವನ್ನು ಹೊರಗೆ ಹಾಕುತ್ತದೆ.'[೭]

೨. ಕೆಮ್ಮು: 'ಬಳ್ಳುಳ್ಳಿ ಉಪ್ಪಿನ ಹರಳು, ನೀರಿನಲ್ಲಿ ಬೆರೆಸಿ ಮೂರು ದಿವಸ ಕುಡಿಸಿದರೆ ಕೆಮ್ಮುವಾಸಿಯಾಗುತ್ತದೆ. ಹಿಂಗು ತೆಗೆದುಕೊಂಡರೆ ಅಜೀರ್ಣ, ನಾಯಿ ಕೆಮ್ಮು, ಉದರಶೂಲೆ, ಹೊಟ್ಟೆಯುಬ್ಬರ ಕಾಲರ ಮುಂತಾದ ರೋಗಗಳು ವಾಸಿಯಾಗುತ್ತವೆಂದು ಹೇಳುತ್ತಾರೆ.'[೮]

೩. ಉರಿ(ಜ್ವರ) : ಕಲ್ಲು ಸಕ್ಕರೆ ಮತ್ತು ಜೀರಗಿ ಅರೆದು ನೀರಿನಲ್ಲಿ ಬೆರೆಸಿ ಕುಡಿಸಿದರೆ ಜ್ವರ ವಾಸಿಯಾಗುತ್ತವೆ. ಜೊತೆಗೆ ಕಿವಿಯ ಮೇಲಿನ ಭಾಗದಲ್ಲಿ ಕಲ್ಲಾರ ಒತ್ತಿದರೆ ಉರಿ ನಿಲ್ಲುತ್ತವೆ. ಎಂದು ಸಿದ್ಧರು ಹೇಳುತ್ತಾರೆ.

೪. ಕಣ್ಣು ನೋವು: ಹುಣಸೆ ಸೊಪ್ಪು ಬಾಯಿಯಲ್ಲಿ ಅಗಿದು ಅದರ ರಸದ ಒಂದು ಹನಿಯನ್ನು ಕಣ್ಣಿನಲ್ಲಿ ಹಾಕುತ್ತಾರೆ. ಹೀಗೆ ಮೂರು ದಿವಸ ಹಾಕಿದರೆ ಕಣ್ಣು ನೋವು ಗುಣವಾಗುತ್ತದೆ.

ಗಂಡಸರ ರೋಗಗಳಿಗೆ ಔಷಧ

೧. ಗಂಡಮಲಗಿ: ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿರುವಂತೆ ಮನುಷ್ಯನಿಗೆ ಒಂದು ಸಲ ಗಂಡಮಲಗಿ ಆದರೆ ಕ್ರಮೇಣ ಏಳು, ಸಲ ಅದು ಆಗುತ್ತದೆ ಎಂಬುದು ಸುಡುಗಾಡು ಸಿದ್ಧರು ನಂಬಿಕೊಂಡವರಾಗಿದ್ದಾರೆ.

೧) ಗಂಡು ಗಂಡ ಮಲಗಿ

೨) ಸರಗಂಡ ಮಲಗಿ

೩) ಆಸನ ಗಂಡಮಲಗಿ

೪) ಗೂಬಗಂಡ ಮಲಗಿ

೫) ಹೆಣ್ಣ ಗಂಡಮಲಗಿ

೬) ಎದೆಗಂಡಮಲಗಿ

೭) ಪಕ್ಕಿ ಗಂಡಮಲಗಿ ಗಳೆಂದು ಸುಡುಗಾಡು ಸಿದ್ಧರು ಹೇಳುತ್ತಾರೆ.

ಗಂಡಮಲಗಿ

ಕುದರೆ ಬೇವಿನ ತೊಗಟೆಯನ್ನು ರವಿವಾರದಂದು ತಂದು ಅದನ್ನು ಕುಟ್ಟಿ ಅದರ ರಸವನ್ನು ಒಂದು ಚಿಕ್ಕ ಮಡಿಕೆಯಲ್ಲಿ ಹಾಕುತ್ತಾರೆ. ಅಂದು ಹನುಮಂತ ದೇವರಿಗೆ ದೀಪದಾರುತಿ ಬೆಳಗಿಸಿ ಕುಡಿಯುತ್ತಾರೆ. ಹೀಗೆ ಅವರು ಹನ್ನೊಂದು ರವಿವಾರ ಈ ಪದ್ಧತಿಯನ್ನು ಅನುಸರಿಸುತ್ತಾರೆ. ಗಂಡ ಮಲಗಿ ಗುಣವಾಗುವವರೆಗೂ ನಂಜಿನ ಪದಾರ್ಥ ತಿನ್ನುವುದಿಲ್ಲ.

ಧಾತು: ರತ್ನ ಪರುಷ ತೊಪ್ಪಲು ನಾಲ್ಕು ಇಲಾಚಿ, ಸ್ವಲ್ಪ ಕಲ್ಲು ಸಕ್ಕರೆ, ಒಂದು ಚಮಚ ಬಾಕ ಬೆರಸಿ ಕಟ್ಟುತ್ತಾರೆ. ಅದರಿಂದ ಹನ್ನೊಂದು ಗುಳಿಗೆ ಮಾಡಿ ಹೊಸ ಮಡಿಕೆಯಲ್ಲಿಟ್ಟು ಅದರಲ್ಲಿ ಮೊಸರು ಹಾಕುತ್ತಾರೆ. ಮುಂಜಾನೆ ಎದ್ದು ಒಂದು ಗುಳಿಗೆಯಂತೆ ಹನ್ನೊಂದು ದಿವಸ ತೆಗೆದುಕೊಳ್ಳುತ್ತಾರೆ.

ಖಲಿ ಬೀಳುವ ಧಾತು: ಸಣ್ಣ ಗೋಳಿ ತೊಪ್ಪಲು, ಒಂದಿಷ್ಟು ಜೀರಗಿ, ಎಂಟು ಇಲೇಚಿ, ಒಂದು ರೂಪಾಯಿ ಕಲ್ಲು ಸಕ್ಕರೆಯಲ್ಲಿ ಬೆರೆಸಿ ಪುಡಿ ಮಾಡಿ ಏಳು ದಿವಸ ಮೊಸರಿನಲ್ಲಿ ತೆಗೆದುಕೊಳ್ಳುತ್ತಾರೆ.

ಹೆಂಗಸರ ರೋಗಕ್ಕೆ ಉಪಯೋಗಿಸುವ ಔಷಧ:

ನಿಸರ್ಗದ ನಿಯಮದಂತೆ ಹೆಣ್ಣು ಹನ್ನೆರಡರಿಂದ ಹದಿನಾಲ್ಕು ವರ್ಷಗಳ ನಡುವಿನ ಅವಧಿಯಲ್ಲಿ ಋತುಮತಿಯಾಗುತ್ತಾಳೆ. ಮುಂದೆ ತಿಂಗಳಿಗೆ ಒಂದು ಸಲ ಮುಟ್ಟು ಬರುವುದು ಸ್ವಾಬಾವಿಕವಾಗಿದೆ. ಇದು ಆರೋಗ್ಯದ ದೃಷ್ಟಿಯಿಂದ ಒಳ್ಳೆಯದು. ಆದರೆ ಕೆಲವು ಹೆಂಗಸರಿಗೆ ಸತತವಾಗಿ ಮುಟ್ಟು ಬರುತ್ತದೆ. ಕೆಲವು ಸಲ ಇದು ಪ್ರಾಣವನ್ನೇ ಬಲಿತೆಗೆದುಕೊಳ್ಳುತ್ತದೆ. ಇದರಲ್ಲಿ ಬಿಳಿ ಮತ್ತು ಕೆಂಪು ಸೆರಗು ಎಂದು ಗುರುತಿಸಲಾಗುತ್ತದೆ. ಸುಡುಗಾಡು ಸಿದ್ಧರು ತಮ್ಮ ಹೆಂಗಸರಿಗೆ ಸೆರಗು ಬಂದಾಗ ಔಷಧ ಗಿಡ ಮೂಲಿಕೆಗಳನ್ನ ಕೊಟ್ಟು ಗುಣಪಡಿಸುತ್ತಾರೆ. ಭಿಕ್ಷಾಟನೆಯಲ್ಲಿದ್ದಾಗ ಹಲವು ಹೆಂಗಸರು ಸೆರಗು ರೋಗವನ್ನು ನಿವಾರಿಸುತ್ತಾರೆ.

ಬಿಳಿ ಸೆರಗು: 'ಒಂದೂವರೆ ಕಿಲೋ ಬಿಳಿ ಪಾಂಗರೆ ತೊರಟೆ, ಒಂದೂವರೆ ಕಿಲೋ ಉಮರಾವತಿ ತೊಗಟೆಯ ಜೊತೆಗೆ ಬೆರೆಸಿ ಪುಡಿ ಮಾಡುತ್ತಾರೆ. ಆ ಮೇಲೆ ಅದರಲ್ಲಿ ಸಕ್ಕರೆ ಬೆರೆಸಿ ದಿನಾಲು ಒಂದು ಚಮಚದಂತೆ ಏಳು ದಿವಸ ತೆಗೆದುಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ಮಜ್ಜಿಗೆ ಮೊಸರು ಕುಡಿಯಲಾಗುತ್ತದೆ. ರೊಟ್ಟೆ ಮತ್ತು ಕಾರವನ್ನು ಊಟ ಮಾಡಬಾರದು. ಅಶೋಕ ಮರದ ರಸವನ್ನು ತೆಗೆದುಕೊಳ್ಳುವುದರಿಂದ ಸ್ತ್ರೀಯರ (ಬಿಳಿಯ' ಸೆರಗು ಹೋಗುವುದು) ರಕ್ತ ಪ್ರದರ ಮತ್ತು ಇತರ ಯೋನಿ ವಿಕಾರಗಳಲ್ಲಿ ಅತ್ಯುಪಯುಕ್ತವಾದದ್ದು.'[೯]

ಕೆಂಪು ಸೆರಗು: ಅವರೆ ಕುಡಿಯ ತೊಗಟೆ ಅಕ್ಕಿಯ ಹಿಟ್ಟನ್ನು ಕುದಿಸಿದ ನೀರಿನಲ್ಲಿ ಹಾಕಿ ಅಕ್ಕಿಯ ಕಡಬು ತಯಾರಿಸುತ್ತಾರೆ. ಆ ಮೇಲೆ ಕಡುಬು ಊಟಮಾಡುತ್ತಾರೆ. ಹನ್ನೊಂದು ದಿವಸಗಳವರೆಗೆ ತರಹದ ಊಟ ಮಾಡುವುದಿಲ್ಲ.

ಬಿಳಿಸೆರಗು: ಕೆಂಪು ದಾಸವಾಳ ಹೂವಿನಲ್ಲಿ ಕಲ್ಲು ಸಕ್ಕರೆ ಮೆಣಸು ಮತ್ತು ಬೆಳ್ಳುಳ್ಳಿ ಪುಡಿ ಮಾಡಿ ತೆಂಗಿನ ಎಳೆ ನೀರಿನಲ್ಲಿ ಮೂರು ದಿವಸ ಕುಡಿದರೆ ಬಿಳಿಸೆರಗು ನಿಲ್ಲುತ್ತದೆ. ಇಲ್ಲದೆ ಬಿಳಿಸೊಪ್ಪು ಹಕ್ಕಗರಗಿ ಸೊಪ್ಪು ಪುಡಿ ಮಾಡಿ ಅದರಲ್ಲಿ ಸಕ್ಕರೆ ಬೆರೆಸಿ ಪ್ರತಿದಿವಸ ಸ್ವಲ್ಪ ತೆಗೆದುಕೊಳ್ಳಬೇಕು. ಪತ್ಯ: ತೊಗರಿ ಬೆಳೆ, ಕೆಮ್ಮಣ್ಣು ನಿಷಿದ್ಧವಿರುತ್ತದೆ.

ಪ್ರಾಣಿ ಪಶು ಪಕ್ಷಿಗಳ ರೋಗಕ್ಕೆ ಔಷಧ:

ಮಾನವ ತನಗೆ ರೋಗ ಕಾಣಿಸಿ ಕೊಂಡಾಗ ಔಷಧ ಗಿಡಮೂಲಿಕೆಗಳನ್ನು ತೆಗೆದುಕೊಂಡು ಗುಣಪಡಿಸಿಕೊಳ್ಳುತ್ತಾನೆ. ಇಲ್ಲವೆ ಸರಕಾರಿ ಆಸ್ಪತ್ರೆಯ ಔಷಧಗಳಿಂದ ಕಾಯಿಲೆ ಉಪಷಮನ ಮಾಡಿಕೊಳ್ಳುತ್ತಾನೆ. ಅದೇ ರೀತಿಯಲ್ಲಿ ತನಗೆ ಸಹಾಯಕವಾಗಿರುವ ಎತ್ತು, ಹಸು, ಎಮ್ಮೆ, ಕುರಿ, ಕೋಳಿ ಮುಂತಾದ ಪ್ರಾಣಿಗಳಿಗೆ ರೋಗ ಬಂದಾಗ ಔಷಧೋಪಚಾರಗಳನ್ನು ಕೊಟ್ಟು ಗುಣಪಡಿಸುತ್ತಾರೆ. ಅದು ಅವನ ಕರ್ತವ್ಯವೂ ಆಗಿದೆ.

ಕಾಲು ಮುರಿದರೆ: ಎಲುಬು ಸಂದಕ ತೊಪ್ಪಲು ಬೆಳ್ಳುಳ್ಳಿ ಮತ್ತು ಒಳ್ಳೆಣ್ಣೆಯು ಆಡಿನ ಹಾಲಿನಲ್ಲಿ ಬೆರೆಸಿ ರುಬ್ಬಿ ಮತ್ತು ಒಂದು ಅಡಿಕೆಯಷ್ಟು ತಿನ್ನಿಸುತ್ತಾರೆ. ಔಷಧ ಕುಡಿಸುವಾಗ ಮುರಿದ ಕಾಲು ನೇರವಾಗಿ ಹಿಡಿಯುತ್ತರೆ. ಔಷಧ ಐದು ದಿವಸ ಕುಡಿಸುತ್ತಾರೆ. ಕ್ರಮೇಣ ಮುರಿದ ಕಾಲು ಮೊದಲಿನಂತಾಗುತ್ತದೆ.

ನಂಬಿಕೆ ನಿಷೇಧಗಳು :-

'ನಂಬಿಕೆ ಮತ್ತು ನಿಷೇಧಗಳನ್ನು ಹೊಂದಿರದ ಸಮುದಾಯಗಳನ್ನು ಕಾಣುವುದು ಅಸಾಧ್ಯ. ಇವು ಸಮುದಾಯದ ಬೆಳವಣಿಗೆಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತವೆ. ನಡೆ–ನುಡಿ, ಸಂಪ್ರದಾಯ, ಲೋಕರೂಢಿಗಳು ನೈತಿಕ ನಿಯಮಗಳು, ನಂಬಿಕೆ, ನಿಷೇಧಗಳು, ಸಮುದಾಯದ ಅಲಿಖಿತ ಕಾನೂನುಗಳಾಗಿ ಸಮುದಾಯವನ್ನು ನಿಯಂತ್ರಣ ಮಾಡುತ್ತಿರುತ್ತವೆ. ಇವುಗಳನ್ನು ಸಮುದಾಯಗಳು ಪರಂಪರಾನುಗತವಾಗಿ ಮುಂದುವರೆಸಿಕೊಂಡು ಬಂದಿವೆ. ಇವು ವ್ಯಕ್ತಿಗೆ ಸಮಾಜದಲ್ಲಿ ಶಿಸ್ತನ್ನು ಅಳವಡಿಸಿಕೊಂಡು ಉತ್ತಮವಾದ ಜೀವನ ನಿರ್ವಹಣೆಗೆ ಅನುವು ಮಾಡಿಕೊಡುತ್ತವೆ. ಇವುಗಳಿಗೆ ವಿರುದ್ದವಾಗಿ ನಡೆದರೆ ಅಂತಹವರನ್ನು ಸಮುದಾಯ ಬಹಿಷ್ಕರಿಸುತ್ತದೆ. ಆದ್ದರಿಂದ ಇವುಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿರುವುದು ಕಂಡುಬರುತ್ತದೆ.'

ಸುಡುಗಾಡು ಸಿದ್ಧರಲ್ಲಿರುವ ನಂಬಿಕೆಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದಾಗಿದೆ.

೧. ಸುಡಗಾಡು ಸಿದ್ಧರು ಭಿಕ್ಷಾಟನೆ ಹೊರಟಾಗ ಒಂಟಿ ಬ್ರಾಹ್ಮಣ ಎದುರಾದರೆ ಭಿಕ್ಷೆ ಸಿಗುವುದಿಲ್ಲ ಎಂಬ ನಂಬಿಕೆ.

೨. ಗಂಡ ಸತ್ತ ವಿಧವೆ ಬಂದರೆ ಅನಿಷ್ಟ.

೩. ಕರಿಬೆಕ್ಕು ತಮ್ಮ ಬಲಭಾಗದಿಂದ ಎಡಭಾಗಕ್ಕೆ ಚಲಿಸಿದರೆ ಕೆಡಕುಂಟಾಗುತ್ತದೆ.

೪. ಒಂಟಿ ಸೀನು ಸೀನಿದರೆ ಅಪಶಕುನ.

೫. ತಲೆ ಮೇಲಿಂದ ಕಾಗೆ ಹಾರಿ ಹೋದರೆ ಒಳ್ಳೆಯದಾಗುವುದಿಲ್ಲ ಎನ್ನುವ ನಂಬಿಕೆ ಹಿಂದಿನ ತಲೆಮಾರಿನಿಂದ ಬಂದಿರುವುದನ್ನು ಮುಂದುವರೆಸಿದ್ದಾರೆ.

೬. ಹಾವು ತಮ್ಮ ಬಲಭಾಗಕ್ಕೆ ಹರಿದು ಹೋದರೆ ಒಳ್ಳೆಯದಾಗುತ್ತದೆ.

೭. ಮನೆಯ ಮಾಳಿಗೆಯ ಮೇಲೆ ಕಾಗೆ ಕೂಗಿದರೆ ಅತಿಥಿಗಳು ಬರುತ್ತಾರೆ.

೮. ಶುಭ ಕಾರ್ಯಗಳಲ್ಲಿ ಮುತ್ತೈದೆಯರು ಮುಂದಾಗಿ ಕಾರ್ಯನಿರ್ವಹಿಸಿದರೆ ಶ್ರೇಯಸ್ಸು.

೯. ಮನೆಗೆ ಏನಾದರೂ ಕೆಡುಕು ಪದೇ ಪದೇ ಸಂಭವಿಸುತ್ತಿದ್ದರೆ, ತಾವು ಹಿರಿಯರಿಗೆ ಏನೋ ತಪ್ಪು ಮಾಡಿದ್ದೇವೆ ಎನ್ನುವ ನಂಬಿಕೆ ಇದೆ.

೧೦. ಎದುರಿಗೆ ಹೂ ಬಂದರೆ ಶುಭ.

೧೧. ವಿವಾಹಿತ ಮಹಿಳೆ ಕೂದಲನ್ನು ಬಾಚದೆ ಕೂದಲನ್ನು ಹರಡಿ ಕೊಂಡು ಬಂದರೆ ಅಶುಭ.

೧೨. ಶುಭ ಕಾರ್ಯಕ್ಕೆ ಹೋಗುವಾಗ ಕಸ ಪೊರಕೆ ಎದುರು ಬಂದರೆ ಅಪಶಕನ.

೧೩. ಕಟ್ಟಿಗೆ ಹೊರೆ ಎದುರಿಗೆ ಬಂದರೆ ಅಪಶಕುನ.

೧೪. ಮೂರು ಸಂಖ್ಯೆ ಅಪಶಕುನ.

೧೫. ಶವ ಸಂಸ್ಕಾರಕ್ಕೆ ಹೋದವರು ನೇರವಾಗಿ ಮನೆಯೊಳಗೆ ಪ್ರವೇಶಿಸುವಂತಿಲ್ಲ.

೧೬. ಶುಭ ಕಾರ್ಯಕ್ಕೆ ಹೊರಡುವಾಗ ವಿಧವೆಯು ಎದುರು ಬಂದರೆ ಅಪಶಕುನ.

೧೭. ಋತುಮತಿಯಾದವಳು ಪರಪುರುಷನನ್ನು ನೋಡುವಂತಿಲ್ಲ.

ಹೀಗೆ ಹಲವಾರು ರೀತಿಯ ನಂಬಿಕೆ ನಿಷೇಧಗಳು ಸುಡುಗಾಡ ಸಿದ್ಧರಲ್ಲಿ ಕಂಡುಬರುತ್ತವೆ. ಆಧುನಿಕತೆಯ ಇಂದಿನ ದಿನಗಳಲ್ಲಿ ಅವರ ನಂಬಿಕೆ ಮತ್ತು ನಿಷೇಧಗಳಲ್ಲಿ ಕೆಲವು ಬದಲಾವಣೆಗಳಾಗಿರುವುದು ಕಂಡುಬರುತ್ತದೆ.

ಬೆಡಗುಗಳು:

ಕರ್ನಾಟಕದಲ್ಲಿ ಸುಡುಗಾಡು ಸಿದ್ಧರಲ್ಲಿ ಮುಖ್ಯವಾಗಿ ಮೂರು ಬೆಡಗುಗಳನ್ನು ಕಾಣುತ್ತೇವೆ

'೧. ಹರಪನಹಳ್ಳಿಯ ಕಟ್ಟೆ

೨. ಗೋಲಕುಂಡ ಕಟ್ಟೆ

೩. ಗದ್ವಾಲ ಕಟ್ಟೆ

೧. ಹರಪನಹಳ್ಳಿಯ ಕಟ್ಟೆಯ ಸುಡುಗಾಡು ಸಿದ್ದರು ಕುಲಗಳು

೧. ಶಂಕಿನವರು

೨. ಗಂಟಿಯವರು

೩. ಕಕ್ಕೇಳು

೪. ಹಾವಿನವರು

೫. ಪರಿಯವರು

೨. ಗೋಲಕುಂಡ ಕಟ್ಟೆಯ ಕುಲಗಳು

೧. ಪದ ಪತ್ಯೋಳ

೨. ಇಪ್ಪೇಳು

೩. ಗಟ್ಟೆಲೋಳು

೪. ಮೋಡಿಮೊರು

೩. ಗದ್ವಾಲ ಕಟ್ಟೆಯ ಕುಲಗಳು

೧. ರುದ್ರಾಕ್ಷಿಯವರು

೨. ಬಾದಿಗಿಯವರು

೩. ತುಮ್ಮಲವರು

೪. ಆಲಟಿಗೇರಿ

೫. ಕಡಮಂಚಿಯವರು.'[೧೧]

ಮಾಟ, ಮಂತ್ರ, ಮೋಡಿ:

ಅನಾದಿಕಾಲದಿಂದಲೂ ಮಾಟ, ಮಂತ್ರ. ಮೊಡಿ ಈ ಪ್ರಕ್ರಿಯೆಗಳು ಎಲ್ಲ ಜನಪದ ಹಾಗೂ ಅದಿವಾಸಿ ಸಮುದಾಯಗಳ ಬದುಕಿನಲ್ಲಿ ಜೀವಂತವಾಗಿ ಉಳಿದುಕೊಂಡು ಬಂದಿವೆ. ಇಂದಿನ ಕಂಪ್ಯೂಟರ್ ಯುಗದಲ್ಲಿಯು ಕೂಡ ಇವು ಪ್ರಾಶಸ್ತ್ಯವನ್ನು ಪಡೆಯುತ್ತಿವೆ ಇದಕ್ಕೆ ಕಾರಣಗಳೇನು? ಎನ್ನುವುದು ತುಂಬ ಕುತೂಹಲಕರವಾದ ವಿಷಯ.

'ಮಾಟ, ಮಂತ್ರ, ಮೋಡಿಯು ಇವು ಮಾನವ ಪ್ರಾಣಿ ಹಾಗೂ ಇತರೆ ಭೌತಿಕ ವಸ್ತುಗಳ ಮೇಲೆ ಪರಿಣಾಮಗಳನ್ನು ಬೀರುತ್ತದೆಯೇ ಎಂಬುದನ್ನು ಯೋಚಿಸಬೇಕಾದ ಸಂಗತಿಯಾಗಿದೆ. ಮಾಟ, ಮಂತ್ರದ ಬಗ್ಗೆ ಆದಿವಾಸಿ ಸಮುದಾಯಗಳಲ್ಲಿ ಬಹಳ ನಂಬಿಕೆ ಇದೆ. ಮಾಟ ಮಂತ್ರಗಳಲ್ಲಿ ರಕ್ಷಣಾತ್ಮಕ ಮಾಟ ಮಂತ್ರ ಮತ್ತು ಇನ್ನೊಬ್ಬರಿಗೆ ಕೆಡಕು ಮಾಡಲು ಮಾಟ ಮಂತ್ರ ಸ್ತ್ರೀ ಹಾಗೂ ಇತರೆ ವಸ್ತುಗಳನ್ನು ವಶೀಕರಿಸಿಕೊಳ್ಳಲು ರೋಗ ರುಜಿನಗಳು ಬರದಂತೆ ಅಥವಾ ಬಂದಿದ್ದರೆ ತಡೆಯಲು ಮಾಟ ಮನುಷ್ಯ ಪ್ರಾಣಿ, ಪಕ್ಷಿಗಳ ಜೀವ ತೆಗೆಯಲು ಮಾಟ ವ್ಯಾಪಾರ ವ್ಯವಹಾರಗಳು ಉತ್ತಮಗೊಳ್ಳಲು ಇನ್ನೊಬ್ಬರ ಸ್ವಂತ ಉದ್ಯೋಗಗಳನ್ನು ಹಾಳು ಮಾಡಲು ಹೀಗೆ ಹತ್ತು ಹಲವಾರು ಬಗೆಯ ಮಾಟ ಮಂತ್ರಗಳನ್ನು ಮಾಡಿಸುವ ಪರಂಪರೆ ಕಂಡುಬರುತ್ತದೆ.'

'ಕರ್ನಾಟಕ ಮತ್ತು ಆಂಧ್ರದಲ್ಲಿ ಮಾಟ ಮಾಡಿಸಲಿಕ್ಕೆ ಮತ್ತು ಅದನ್ನು ತೆಗೆಸಲಿಕ್ಕೆ ಪ್ರಸಿದ್ಧ ಪಡೆದಿದೆ ಎಂದು ತಿಳಿದು ಬರುತ್ತದೆ. ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಕರಾವಳಿ ಕರ್ನಾಟಕ ಈ ಪ್ರದೇಶಗಳಲ್ಲಿ ಮಾಟ ಮಂತ್ರ ಮಾಡುವ ಸಂಪ್ರದಾಯಗಳು ಭಿನ್ನ ಭಿನ್ನವಾಗಿರುವುದು ಕಂಡುಬರುತ್ತದೆ. ಮಾಟ ಮಂತ್ರ ಮಾಡುವವರಿಗೆ ಗಿಡಮೂಲಿಕೆಗಳ ಪರಿಚಯವೂ ಇರುತ್ತದೆ. ಇವರು ಆಯುರ್ವೇದದ ಜ್ಞಾನವನ್ನು ಪಡೆದುಕೊಂಡಿರುತ್ತಾರೆ. ಮಾಟಗಾರರು ಅಮಾವಾಸ್ಯೆ, ಗ್ರಹಣದ ಸಂದರ್ಭದಲ್ಲಿ ಸಿದ್ದಿಯನ್ನು ಪಡೆದುಕೊಳ್ಳುತ್ತಾರೆ.' ಸುಡುಗಾಡು ಸಿದ್ಧರು ಮಾಟ ಮಂತ್ರ, ಮಾಡಲು ಪ್ರಸಿದ್ದರು, ಇವರು ಸಹ ಅಮಾವಾಸ್ಯೆ ಗ್ರಹಣಗಳ ಸಂದರ್ಭದಲ್ಲಿ ಅನೇಕ ಆಚರಣೆಗಳನ್ನು ಮಾಡುವುದರ ಮೂಲಕ ಮಂತ್ರ ತಂತ್ರ ಸಿದ್ಧಿಯನ್ನು ಪಡೆದುಕೊಳ್ಳುತ್ತಾರೆ. ಎಂದು ಹೇಳಲಾಗುತ್ತಿದೆ. ಸಾಮಾನ್ಯವಾಗಿ ಮಾಟ, ಮಂತ್ರ, ಮಾಡಿಸುವ ಬಗೆಗಳನ್ನು ಹೀಗೆ ಪಟ್ಟಿ ಮಾಡಬಹುದು.[೨]

೧. ಜೂಜಿನಲ್ಲಿ ಗೆಲ್ಲುವುದಕ್ಕಾಗಿ

೨. ಭೂತ, ಪ್ರೇತ, ಪಿಶಾಚಿ, ಬ್ರಹ್ಮರಾಕ್ಷಸ, ಗಾಳಿ, ಹಿಡಿದಾಗ ಅದರ ನಿವಾರಣೆಗೆ.

೩. ಕಂಟಕಗಳಿಂದ ಮುಕ್ತಿ ಪಡೆಯಲು.

೪. ಕೋರ್ಟು ಕಛೇರಿ ವ್ಯವಹಾರದಲ್ಲಿ ಜಯಗಳಿಸಲು.

೫. ಶ್ರೀಮಂತರಾಗಲು.

೬. ಪುರಷ ಮತ್ತು ಸ್ತ್ರೀ ವಶೀಕರಣಕ್ಕಾಗಿ.

೭. ದೆವ್ವ ಪಿಶಾಚಿಗಳನ್ನು ವಶಪಡಿಸಿಕೊಳ್ಳಲು.

೮. ರಾಜಕೀಯ ಹುದ್ದೆಗಾಗಿ.

೯. ಹೀಗೆ ಇನ್ನು ಹಲವಾರು ರೀತಿಯಲ್ಲಿ ಮಾಟ, ಮಂತ್ರ, ಮಾಡಿಸವು ಪರಂಪರೆಯನ್ನು ಕಾಣುತೇವೆ.

ಸುಡುಗಾಡು ಸಿದ್ಧರಲ್ಲಿ ಕುಲಪಂಚಾಯತಿ:

'ಕುಲ ಪಂಚರು ತಪ್ಪಿತಸ್ಥರನ್ನು ಹಲವು ಬಗೆಯ ಶಿಕ್ಷೆ ದಂಡ ಮತ್ತು ಸಮುದಾಯದಿಂದ ಬಹಿಷ್ಕಾರ ಹಾಕುವ ಪದ್ಧತಿ ಇವರಲ್ಲಿ ಇರುವುದು ಕಂಡುಬರುತ್ತದೆ. ಇದರಿಂದ ಈ ಸಮುದಾಯದಲ್ಲಿ ಮೋಸ, ವಂಚನೆ, ದುರ್ನಡತೆಯಿಂದ ನಡೆಯುವ ವ್ಯಕ್ತಿಗಳನ್ನು ನಿಯಂತ್ರಣದಲ್ಲಿಡಲು ಸಾಧ್ಯವಾಗಿದೆ. ನ್ಯಾಯ ಪಂಚಾಯತಿಯಲ್ಲಿ ನ್ಯಾಯಾಧೀಶರ ಮುಂದೆ ಜಗಳವಾಡಿದರೆ ಕೋಲು, ಬಡಿಗೆ, ಚಪ್ಪಲಿ, ಹಾಗೂ ಆಶ್ಲೀಲ ಪದಗಳಿಂದ ನಿಂದಿಸಿದರೆ ಅಂಥವರಿಗೆ ದಂಡ ಹಾಕುತ್ತಾರೆ. ಇನ್ನೊಬ್ಬನ ಹೆಂಡತಿಯೊಡನೆ ಅನೈತಿಕ ಸಂಬಂಧ

ಇಟ್ಟುಕೊಂಡರೆ ಅಥವಾ ಇಬ್ಬರು ಓಡಿಹೋದರೆ ಶಿಕ್ಷಿಸುತ್ತಾರೆ. ಇವರಲ್ಲಿ ಅಂತರ ಜಾತಿ ವಿವಾಹಕ್ಕೆ ಆಸ್ಪದ ಇರುವುದಿಲ್ಲ. ತಮಗಿಂತ ಕೆಳಗಿನ ಜಾತಿಯ ಹೆಣ್ಣನ್ನು ಮದುವೆಯಾಗಿದ್ದರೆ ಸಮುದಾಯದಲ್ಲಿ ಸೇರಿಕೊಳ್ಳವುದಿಲ್ಲ. ಅಲ್ಲದೆ ಅವರನ್ನು ಸಮುದಾಯದಿಂದ ಬಹಿಷ್ಕಾರಿಸುತ್ತಾರೆ.'

ಭಾಷೆ:

'ಸುಡುಗಾಡು ಸಿದ್ಧರಲ್ಲಿ ಭಾಷೆ ಸಹಜವಾಗಿ ಮೂಡಿ ಬರುವಂಥದ್ದು. ಇವರ ಮಾತೃಭಾಷೆ ಅನುವಂಶಿಕವಾಗಿ ಮುಂದುವರಿಯುತ್ತಿದೆ. ಭಾಷಾ ದೃಷ್ಟಿಯಿಂದ ಬುಡಕಟ್ಟುಗಳು ತಮ್ಮ ಸ್ಥಾನವನ್ನು ಉಳಿಸಿಕೊಂಡಿವೆ. ಸಂಸ್ಕೃತಿಯ ಅಧ್ಯಯನದಲ್ಲಿ ಅವರ ಭಾಷೆ ತುಂಬ ಉಪಯುಕ್ತವಾಗಿದೆ. ಪರಿವಾರದ ಸುಡುಗಾಡು ಸಿದ್ಧರಿಗೆ ಪ್ರತ್ಯೇಕ ಭಾಷೆ ಇಲ್ಲದಿದ್ದರೂ ಅವರು ತೆಲುಗು, ಕನ್ನಡ ಮತ್ತು ಹಿಂದಿ ಮರಾಠಿ ಭಾಷೆಗಳನ್ನು ಮಾತಾಡುತ್ತಾರೆ. ಸಿದ್ಧರು ಯಾವ ಪ್ರಾಂತದಲ್ಲಿ ಭಿಕ್ಷೆ ಬೇಡುತ್ತಾರೆಯೋ, ಆಯಾ ಸ್ಥಳೀಯ ಭಾಷೆಗಳ ಪ್ರಭಾವ ಬೀರಿರುವುದು ಸ್ವಾಭಾವಿಕ. ಉದಾಹರಣೆ: ಸೇಡಂನಲ್ಲಿ ವಾಸಿಸುವ ಸುಡುಗಾಡು ಸಿದ್ಧರ ಭಾಷೆಯ ಮೇಲೆ ಕನ್ನಡದ ಪ್ರಭಾವವಾಗಿರುವುದು ಕಂಡು ಬರುತ್ತದೆ. ಹಾಗೆಯೇ ಮರಾಠಿ ಮತ್ತು ಹಿಂದಿ ಭಾಷೆಗಳ ಪ್ರಭಾವವೆಂದು ಹೇಳಬೇಕಾಗುತ್ತದೆ. ತೆಲಗು ಸುಡುಗಾಡು ಸಿದ್ಧರ ಮಾತೃ ಭಾಷೆಯಾಗಿದ್ದರೂ ಇದರ ಜೊತೆಯಲ್ಲಿ ಕನ್ನಡ, ಹಿಂದಿ, ಮರಾಠಿ ಭಾಷೆಗಳನ್ನು ಮಾತನಾಡುತ್ತಾರೆ.

ವಿಶ್ವದ ಯಾವುದೇ ಜನಾಂಗದ ಸಂಸ್ಕೃತಿಯನ್ನು ತಿಳಿದುಕೊಳ್ಳಬೇಕಾದರೆ ಆಯಾ ಜನಾಂಗಗಳು ಮಾತನಾಡುವ ಭಾಷೆಯನ್ನು ಅಧ್ಯಯನ ಮಾಡಬೇಕಾಗುತ್ತದೆ ಭಾಷೆಯು ಮಾನವ ಎಲ್ಲ ಸಾಂಸ್ಕೃತಿಕ ಚಟುವಟಿಕೆಗಳ ಬುನಾದಿಯಾಗಿದೆ.'[೧೩]

ಮರಣ:

ಪ್ರತಿಯೊಂದು ಸಮಾಜದಲ್ಲಿ ಹುಟ್ಟಿದ ವ್ಯಕ್ತಿಗೆ ಕೆಲವು ಆಚರಣೆ ವಿಧಿವಿಧಾನಗಳನ್ನು ಮಾಡುವಂತೆ, ಸಾಯುವಾಗಲೂ ಕೆಲವು ವಿಧಿ-ವಿಧಾನಗಳನ್ನು ಮಾಡುತ್ತಾರೆ. ಸತ್ತ ಮೇಲೆ ಸತ್ತವನ ತಿಥಿ ಮಾಡುವ ಸಂಪ್ರದಾಯ ಪ್ರತಿಯೊಂದು ಸಮಾಜದಲ್ಲಿಯೂ ಕಂಡುಬರುತ್ತದೆ. ಸುಡುಗಾಡು ಸಿದ್ಧರ ಸ್ಮಶಾನ ಸಾಮಾನ್ಯವಾಗಿ ದಕ್ಷಿಣ ದಿಕ್ಕಿನಲ್ಲಿರುತ್ತದೆ. ಶವವನ್ನು ಸ್ಮಶಾನಕ್ಕೆ ಒಯ್ಯುವಾಗ ಮಣ್ಣಿನ ಮಡಕೆಯಲ್ಲಿ ಅರ್ಧಬೆಂದ ಅನ್ನ ಅರಿಸಿಣವನ್ನು ಮರಣಿಸಿದ ವ್ಯಕ್ತಿಯ ಹಿರಿಯ ಮಗ ಒಂದು ಕೈಯಲ್ಲಿ ಹಿಡಿದು ಇನ್ನೊಂದು ಕೈಯಲ್ಲಿ ಕುಡುಗೋಲನ್ನು ಹಿಡಿದುಕೊಂಡು ಮುಂದೆ ಸಾಗುತ್ತಾನೆ. ಸ್ಮಶಾನ ಸಮೀಪಿಸುತ್ತಿದ್ದಂತೆ ಹೆಣ ಇಳಿಸಿ ಅನ್ನದ ಮಡಿಕೆಯನ್ನು ಬೋರಲಾಗಿ ಎಡಗೈಯಲ್ಲಿ ಕುಡುಗೊಲನ್ನು ಹಿಡಿದು ಅದನ್ನು ಪುಡಿ ಪುಡಿಯಾಗುವಂತೆ ಒಡೆದು ಹಾಕುತ್ತಾನೆ. ಸತ್ತವರು ದೆವ್ವವಾಗಿ ಹಿಂತಿರುಗಿ ಬರಬಾರದೆಂಬುದೇ ಅವರ ಆಶಯವಾಗಿದೆ. ಶವ ಸಂಸ್ಕಾರಕ್ಕೆಂದು ಹೋದ ಜನರು ಸಮೀಪದ ಹಳ್ಳಕ್ಕೆ ಹೋಗಿ ಸ್ನಾನ ಮಾಡಿ ತಿರುಗಿ ಬರುವಾಗ ದಾರಿಯಲ್ಲಿ ದೇವರ ದರ್ಶನ ಮಾಡಿಕೊಂಡು ನೇರವಾಗಿ

ಹೆಂಡದಂಗಡಿಗೆ ಹೋಗಿ ಸಾಕಷ್ಟು ಕುಡಿದು ಸತ್ತವರ ಮನೆಗೆ ಬಂದು ದೀಪ ನೋಡಿ ತಮ್ಮ ತಮ್ಮ ಮನೆಗಳಿಗೆ ತೆರಳುತ್ತಾರೆ. ಸತ್ತವರ ಮನೆಗೆ ಮೂರು ದಿನಗಳವರೆಗೆ ಇವರ ಸಮುದಾಯದವರು ಊಟ ತಂದು ಕೊಡುತ್ತಾರೆ.'[೧೪]

ಸುಡುಗಾಡು ಸಿದ್ಧರು ಶವ ಸಂಸ್ಕಾರಕ್ಕೆ ಹೂಳುವ ಮತ್ತು ಸುಡುವ ಎರಡು ಸಂಪ್ರದಾಯಗಳನ್ನು ಅನುಸರಿಸುತ್ತಾರೆ.

೧. ಹೂಳುವ ಪದ್ಧತಿ

ಸುಡುಗಾಡು ಸಿದ್ಧರು ಹೆಣವನ್ನು ಸ್ಮಶಾನಕ್ಕೆ ಒಯ್ಯುವಾಗ ಹಲಗೆ, ಶಹನಾಯಿ, ಬಾರಿಸುವುದಿಲ್ಲ, ಹೊಲೆ ಮಾದಿಗರಿಗೆ ಸಂಸ್ಕಾರದಲ್ಲಿ ಪ್ರವೇಶವಿಲ್ಲ. ಹೆಣ ಒಯ್ಯುವಾಗ ಹಾಡು, ಮಂತ್ರ, ಹೇಳುತ್ತಾರೆ. ಏಳು ಪಾದ ಎಣಿಸಿ ಅಳತೆ ದಕ್ಷಿಣೋತ್ತರವಾಗಿ ಕುಣಿ ತೆಗೆಯುತ್ತಾರೆ. ವ್ಯಕ್ತಿ ಸತ್ತನಂತರ ಬಿಸಿನೀರಿನ ಸ್ನಾನ ಮಾಡಿಸಿ ವಿಭೂತಿ, ರುದ್ರಾಕ್ಷಿ, ಕಾವಿ, ಕಮಂಡಲಗಳಿಂದ ಶೃಂಗರಿಸುತ್ತಾರೆ. ಶವದ ಬಾಯಲ್ಲಿ ಎಲೆ, ಅಡಿಕೆ, ಕೊಟ್ಟು ಮುಂದೆ ಕಂಚಕಳಶವನ್ನಿಟ್ಟು ದೀಪ ಉರಿಸಿ ಬಳಗದವರೆಲ್ಲ ಬಂದು ನಮಸ್ಕರಿಸುತ್ತಾರೆ. ಹೆಣವನ್ನು ಉತ್ತರಕ್ಕೆ ಕಾಲು ದಕ್ಷಿಣಕ್ಕೆ ತಲೆಮಾಡಿ ಕುಣಿಯಲ್ಲಿಟ್ಟು ಹಣೆಗೆ ವಿಭೂತಿ, ಹಚ್ಚಿ, ಮಗ್ಗಲು, ಮಾಡಿದಲ್ಲಿ ದೀಪ ಬೆಳಗಿಸಿ, ಹಣ್ಣು, ಕಾಯಿ, ಲೋಬಾನವಿಟ್ಟು ಪೂಜಿಸಿ ಮಣ್ಣು ಎಳೆಯುತ್ತಾರೆ. ಮದುವೆಯಾದವರನ್ನು ಅಂಗಾತವಾಗಿ ಹೂಳುತ್ತಾರೆ. ಅಪ್ರಾಪ್ತ ಮತ್ತು ಅವಿವಾಹಿತರನ್ನು ಬೋರಲಾಗಿ ಹೂಳುತ್ತಾರೆ.

೨. ಸುಡುವ ಪದ್ಧತಿ

ಸುಡುಗಾಡು ಸಿದ್ಧರು ಸತ್ತವ್ಯಕ್ತಿ ಸುಡುವ ಪದ್ದತಿ ಇದೆ. ಗರ್ಭಿಣಿ, ಬಾಣಂತಿ, ತೊನ್ನ ಇದ್ದವರನ್ನು ಮತ್ತು ಅನುಮಾನಾಸ್ಪದವಾದ ಸಾವುಗಳು ಏಡ್ಸ್ ರೋಗದಿಂದ ಸಾವು ಸಂಭವಿಸಿದಲ್ಲಿ ಶವಗಳನ್ನು ಸಾಮಾನ್ಯವಾಗಿ ಸುಡುತ್ತಾರೆ.

ಅಡಿಟಿಪ್ಪಣಿಗಳು

೧. ಕಂಬಾರರ ಬದುಕಿನ ಸ್ಥಿತ್ಯಂತರಗಳು, ಪಿಎಚ್.ಡಿ ಅಪ್ರಕಟಿತ ಮಹಾಪ್ರಬಂಧ ಪುಟ ಸಂಖ್ಯೆ-೨೫

೨. ಚ.ನ.ಶಂಕರ್‌ರಾವ್ ಸಮಾಜಶಾಸ್ತ್ರದ ಕಿರು ವಿಶ್ವಕೋಶ ಪುಟ ಸಂಖ್ಯೆ ೭೭೪

೩. ಅದೇ ಪುಟ ಸಂಖ್ಯೆ ೭೭೪

೪. ಎಂ.ಎಸ್.ಗಂಟಿ ಸುಡುಗಾಡು ಸಿದ್ಧ ಪುಟ ಸಂಖ್ಯೆ ೬೭

೫. ಚ.ನ. ಶಂಕರ್‌ರಾವ್ ಸಮಾಜಶಾಸ್ತ್ರರ ಕಿರು ವಿಶ್ವಕೋಶ ಪುಟ ಸಂಖ್ಯೆ ೨೬೭

೬. ಪಿ.ಕಿ. ಖಂಡೋಬ ಸುಡುಗಾಡು ಸಿದ್ಧರ ಸಂಸ್ಕೃತಿ ಪುಟ ಸಂಖ್ಯೆ ೧೬

೬. ಎ.ಎಸ್ ರಾಮಸ್ವಾಮಿ ಆಯುರ್ವೇದ ಮನೋವಿಜ್ಞಾನ ಪುಟ ಸಂಖ್ಯೆ ೧೦

೭ ಅದೇ ಪುಟ ಸಂಖ್ಯೆ ೧೧೦

೮. ಅದೇ ಪುಟ ಸಂಖ್ಯೆ ೧೪೩

೯. ಅದೇ ಪುಟ ಸಂಖ್ಯೆ ೨೨

೧೦. ಅದೇ ಪುಟ " " " " ಸಂಖ್ಯೆ೨೫

೧೧. ಎಂ.ಎಸ್. ಗಂಟಿ ಸುಡುಗಾಡು ಸಿದ್ಧರು ಪುಟ ಸಂಖ್ಯೆ ೨೯-೩೦

೧೨. ಸಿ.ಆರ್. ಚಂದ್ರಶೇಖರ ಭಾನಾವತಿ: ಪುಟ ಸಂಖ್ಯೆ ೦೯

೧೩ ಪಿ.ಕೆ. ಖಂಡೋಬ ಸುಡುಗಾಡು ಸಿದ್ಧರ ಸಂಸ್ಕೃತಿ ಪುಟ ಸಂಖ್ಯೆ ೫೦

❑❑❑

ಅಧ್ಯಾಯ ನಾಲ್ಕು

ಸಮುದಾಯದ ಧಾರ್ಮಿಕತೆ

ಅಧ್ಯಾಯ ನಾಲ್ಕು

ಸಮುದಾಯದ ಧಾರ್ಮಿಕತೆ

'ಪ್ರತಿಯೊಬ್ಬ ವ್ಯಕ್ತಿ ಒಂದಲ್ಲಾ ಒಂದು ಧರ್ಮವನ್ನು ಅನುಸರಿಸಿ ನಡೆಯುತ್ತಿರುವುದು ಕಂಡುಬರುತ್ತದೆ. ಭಾರತೀಯ ಸಮಾಜದಲ್ಲಿ ಹಲವಾರು ಧರ್ಮಗಳು ಕಂಡುಬರುತ್ತವೆ. ಕ್ರೈಸ್ತ, ಮುಸ್ಲಿಂ, ಹಿಂದೂ, ಬೌದ್ಧ, ಜೈನ್, ಸಿಖ್, ಪಾರ್ಸಿ, ಯಹೂದಿ, ಮುಂತಾದವು ಪ್ರತಿಯೊಂದು ಧರ್ಮ ಮಾನವನಿಗೆ ಒಳ್ಳೆಯದನ್ನೇ ಬಯಸುತ್ತದೆ. ಧರ್ಮವು ಮಾನವನ ಜೀವನಕ್ಕೆ ದಾರಿದೀಪವಾಗಿದೆ.'

ಇಂದು ಒಂದು ಧರ್ಮದಿಂದ ಮತ್ತೊಂದು ಧರ್ಮಕ್ಕೆ ಮತಾಂತರವಾಗುವುದು ಕಾಣುತ್ತಿದೆ. ಉದಾರಹರಣೆಗೆ ಡಾ.ಬಿ.ಆರ್. ಅಂಬೇಡ್ಕರ್ ಅವರು ಹಿಂದೂವಾಗಿ ಹುಟ್ಟಿದ್ದೇನೆ, ಹಿಂದೂವಾಗಿ ಸಾಯಲಾರೇ ಎಂದು ಹೇಳಿ ಅವರು ಬೌದ್ದ ಧರ್ಮಕ್ಕೆ ಮಂತಾತರವಾಗಿರುವುದನ್ನು ಕಾಣುತ್ತೇವೆ. ಸುಡುಗಾಡು ಸಿದ್ಧರು ತಮ್ಮ ಮೂಲ ಧರ್ಮವನ್ನು ಬಿಟ್ಟು ಬೇರೆ ಬೇರೆ ಪಂಗಡಕ್ಕೆ ಹೋಗುತ್ತಿರುವುದನ್ನು ಕ್ಷೇತ್ರಕಾರ್ಯದ ಮೂಲಕ ಕಂಡುಕೊಂಡಿದ್ದೇನೆ. ನಾವು ಸುಡುಗಾಡು ಸಿದ್ಧರು ಎಂದು ಹೇಳಿದರೆ ಯಾರು ಅವರಿಗೆ ನಗರ ಪ್ರದೇಶದಲ್ಲಿ ನಿವೇಶನ ಕೊಡುವುದಿಲ್ಲ ಎಂದು ತಿಳಿದ ಇವರು ದಾಸರು ಎಂದು ಹೇಳಿ ನಿವೇಶನ ಪಡೆದುಕೊಡ ಉದಾಹರಣೆಗಳಿವೆ. ಮದುವೆ ಸಂದರ್ಭಗಳಲ್ಲಿ ತಮ್ಮ ಧರ್ಮವನ್ನು ಬಿಟ್ಟು ಬೇರೆ ಧರ್ಮದೊಂದಿಗೆ ಮತಾಂತರ ಹೊಂದಿ ಮದುವೆಗಳಾಗಿರುವುದನ್ನು ಕಾಣುತ್ತೇವೆ. ಈಗ ಪ್ರೇಮ ವಿವಾಹಗಳು ಅಂತರ್‌ಜಾತಿ ವಿವಾಹಗಳು ಕಂಡುಬರುತ್ತವೆ.

ಸುಡುಗಾಡು ಸಿದ್ಧರು ಜೋಳಿಗೆ ಭಿಕ್ಷಾಟನೆಯ ಸಾಮಾನುಗಳಾದ, ಗಂಟೆ, ಶಂಖ, ಜೋಳಿಗೆ, ನಫೀರಿಗಳನ್ನು ಪೂಜಿಸುತ್ತಾರೆ. ಸುಡುಗಾಡು ಸಿದ್ಧರ ಸ್ತ್ರೀ ದೇವತೆಗಳಾದ ದುರುಗಮ್ಮ, ಮರಗಮ್ಮ, ಗುಡ್ಡದ ದ್ಯಾಮವ್ವ ಮುಂತಾದ ಹೆಣ್ಣು ದೇವತೆಗಳ ಆರಾಧಕರಾಗಿದ್ದಾರೆ. ಹಾಗೆಯೇ ಶಿವ, ಗಣೇಶ, ಹನುಮಂತ ಬಸವಣ್ಣ, ಮೊದಲಾದ ಪುರಷ ದೈವಗಳನ್ನು ಪೂಜಿಸುತ್ತಾರೆ. ತಾವು ವಾಸಿಸುವ ಗ್ರಾಮದ ದೇವತೆಗಳಿಗೂ ಪೂಜೆ ಸಲ್ಲಿಸುತ್ತಾರೆ. ಇವರು ಸಂಚಾರಿಗಳಾಗಿರುವುದರಿಂದ ಮತ್ತು ಗುಡಾರ ಗುಡಿಸಲಿನಲ್ಲಿ ವಾಸಿಸುವುದರಿಂದ ದೇವರ ಮೂರ್ತಿಗಳನ್ನು ಜೋಳಿಗೆಯಲ್ಲಿ ಇಟ್ಟಿರುತ್ತಾರೆ, ಈ ಜೋಳಿಗೆಯನ್ನು ಗುಡಿಸಲಿನ ಮೂಲೆಯಲ್ಲಿ ತೂಗು ಹಾಕಿ ಪೂಜಿಸುವುದು ಕಂಡುಬರುತ್ತದೆ.

ದೇವತರಾಧನೆ

'ಆರಾಧನೆ ಪದವು ವ್ಯಾಪಕ ಅರ್ಥವನ್ನು ಪಡೆದುಕೊಂಡಿದೆ. ಗೌರವಿಸು, ಪೂಜಿಸು, ವಂದಿಸು, ನಮಸ್ಕರಿಸು, ಭಕ್ತಿಯಿಂದ ಹಿರಿಯರನ್ನು ಮತ್ತು ದೇವರನ್ನು ಸ್ಮರಿಸುವ ಹಿನ್ನೆಲೆಯಲ್ಲಿ

ಈ ಪದವು ಹೆಚ್ಚಿನ ವ್ಯಾಪಕತೆಯನ್ನು ಪಡೆದಿದೆ. ಮಾನವ ಭಯ, ಮತ್ತು ಭಕ್ತಿಗಳಿಂದಾಗಿ ದೇವರನ್ನು ಸೃಷ್ಟಿ ಮಾಡಿಕೊಂಡಂತೆ ತೋರುತ್ತದೆ. ತನ್ನನ್ನು ತಾನು ರಕ್ಷಿಸುವಲ್ಲಿ ನಿಯಾಮಕ ಶಕ್ತಿಯ ಪೂರ್ಣ ಪ್ರಮಾಣದ ಅನುಗ್ರಹಗಳಿಸಲು ಆ ಆಚರಣೆಗಳು ಸಹಾಯಕವಾದವು. ಹೀಗೆ ದೈವಾರಾಧನೆಗೆ ಸಂರಕ್ಷಣಾ ಭಾವನೆಯೇ ಮೂಲ ಕಾರಣವಾಯಿತು. ಮಾನವ ತಾನು ರೋಗರುಜಿನಗಳಿಂದ ಮುಕ್ತನಾಗಿರಲಿ ಹಿಡಿದ ಕೆಲಸ ಸರಳವಾಗಿ ಸಾಗಲಿ ಎಂದು ದೇವತಾರಾಧನೆಯಲ್ಲಿ ತೊಡಗುತ್ತಾನೆ. ಅದೇ ರೀತಿಯಾಗಿ ಶಿಷ್ಟ ದೇವತೆಗಳಾದ ಗಣೇಶ, ಶಿವ, ಬಸವಣ್ಣ, ಸಿದ್ಧರಾಮ, ಮುಂತಾದವರ ಆರಾಧನೆಯನ್ನು ಕೈಗೊಳ್ಳುತ್ತಾರೆ. ಇದರ ಫಲವೇ ತಾವು ಮತ್ತು ತಮ್ಮ ಕುಟುಂಬ ಸುಖದಿಂದ ಇರಲಿ ಎಂಬುದು ಆಗಿದೆ.'

ಸುಡುಗಾಡು ಸಿದ್ಧರು ನಾಡಿನ ಹಲವು ಭಾಗಗಳಲ್ಲಿ ಚದುರಿ ಹೋಗಿರುವುದರಿಂದ ಆಯಾ ಗ್ರಾಮದ ದೇವರು ದೇವತೆಗಳನ್ನು ಭಕ್ತಿ ಗೌರವದಿಂದ ಕಂಡು ಪೂಜೆಯನ್ನು ಸಲ್ಲಿಸುತ್ತಾರೆ, ತಿರುಪತಿ ತಿಮ್ಮಪ್ಪ, ಕಲಬುರ್ಗಿಯ ಶರಣಬಸವೇಶ್ವರ, ಸೇಡಂ ತಾಲೂಕಿನ ಕೊತ್ತಲಬಸವೇಶ್ವರ, ಸಿದ್ಧರಾಮೇಶ್ವರ ಹೀಗೆ ಅನೇಕ ದೈವಗಳ ಆರಾಧನೆಯನ್ನು ಅವರು ಮಾಡುವುದು ಕಾಣುತ್ತದೆ.

ಪ್ರತಿ ಶುಕ್ರವಾರ ಮತ್ತು ಮಂಗಳವಾರ ಸುಡುಗಾಡು ಸಿದ್ಧರ ಹೆಂಗಸರು ಶಕ್ತಿ ದೇವತೆಗಳ ಆರಾಧನೆ ಮಾಡಿದರೆ, ಗಂಡಸರು ಪುರುಷ ದೈವಗಳನ್ನು ಪೂಜಿಸುವುದು ಕಂಡುಬರುತ್ತದೆ. ತಮ್ಮ ಆರಾಧ್ಯ ದೇವತೆಗಳನ್ನು ಜೋಳಿಗೆಯ ಮೇಲಿಟ್ಟು ಮೀಸಲು ನೀರಿನಿಂದ ತೊಳೆದು ಕುಂಕುಮ, ಭಂಡಾರ, ವಿಭೂತಿ ಮುಂತಾದವುಗಳನ್ನು ಲೇಪಿಸಿ ತಮ್ಮೆಲ್ಲರ ಸಮಸ್ಯೆಗಳನ್ನು ಪರಿಹರಿಸು ಎಂದು ಬೇಡಿಕೊಳ್ಳುತ್ತಾರೆ. ಅವರ ದೇವತಾರಾಧನೆಯಲ್ಲಿ ಆ ಬುಡಕಟ್ಟಿನ ವಿಶಿಷ್ಟ ಸಂಸ್ಕೃತಿಯನ್ನು ನಾವು ಸ್ಪಷ್ಟವಾಗಿ ಕಾಣುತ್ತೇವೆ.

'ಸುಡುಗಾಡು ಸಿದ್ಧರಲ್ಲಿ ಇಂದಿಗೂ ದೇವರು ಮೈ ಮೇಲೆ ಬಂದು ತನ್ನ ಪವಾಡಗಳನ್ನು ತೊರಿಸುವುದನ್ನು ಗಮನಿಸಬಹುದು. ದೇವರು ಕೇಳುವುದು, ದೇವರು ಕಲ್ಲು ಎತ್ತುವುದು, ಮೈಯಲ್ಲಿ ಕುಡ್ಡಿ ದ್ಯಾಮವ್ವ ಬರುವುದು ವಾಡಿಕೆಯಾಗಿದೆ. ಅವರ ಸಾಂಸ್ಕೃತಿಕ ಬದುಕಿನ ಮೇಲೆ ದೇವರು ದೇವತೆಗಳು ಹೆಚ್ಚಿನ ಪ್ರಭಾವ ಬೀರಿವೆ. ದೇವರ ಮೇಲಿನ ನಂಬಿಕೆ ಶ್ರದ್ದೆ ಮತ್ತು ಕಠಿಣ ವ್ರತಗಳಿಂದ ದೇವರು ಮೈಯಲ್ಲಿ ಬರುತ್ತದೆನ್ನುತ್ತಾರೆ. ದೇವರು ಹೇಳುವುದರಲ್ಲಿ ನಾಲ್ಕೈದು ಪ್ರಕಾರಗಳಿವೆ. ೧. ರುದ್ರಾಕ್ಷಿ ಸೆಕಿನಮಲ (ರುದ್ರಾಕ್ಷಿ ಸಾಲಾವಳಿ) ಬಿಂದಿ ಪರಿವಾರದವರು ದೇವರ ಮುಂದಿನ ಕಲ್ಲು ಎತ್ತುವುದು ಕುಡ್ಡಿ ದ್ಯಾಮವ್ವ ಬರುವುದೆಂದು ಹೇಳುವರು.'[೧]

ಕಲಬುರಗಿ ಜಿಲ್ಲೆಯ ಆಳಂದ ತಾಲೂಕಿನಲ್ಲಿ ಬರುವ ಚಿಂಚೇನಸೂರ ಹಳ್ಳಿ ದೇವತೆಯಾದ ಚುಂಚುರ ಮಾಪೂರ ತಾಯಿಯ ಗುಡಿಯ ಮುಂದೆ ಇಂತಹ ಕಲ್ಲು ಪ್ರಸ್ತುತ ನಮಗೆ ನೋಡಬಹುದು.

ಸುಡುಗಾಡು ಸಿದ್ಧರಲ್ಲಿ ಹಬ್ಬಗಳು

ಹಿಂದುಗಳು ಆಚರಿಸುವ ಎಲ್ಲ ಹಬ್ಬಗಳನ್ನು ಸುಡುಗಾಡು ಸಿದ್ಧರು ಸರಳ ರೀತಿಯಲ್ಲಿ ಆಚರಿಸುತ್ತಾರೆ. ಅವರದೇ ಆಗಿರುವ ಕೆಲವು ಹಬ್ಬಗಳನ್ನು ಚಾಚೂ ತಪ್ಪದೆ ಆಚರಿಸುತ್ತಾರೆ. ಅವರು ಆಚರಿಸುವ ಹಬ್ಬ ಹರಿದಿನಗಳು ಅವರ ಸಂಸ್ಕೃತಿಯ ಮೇಲೆ ಬೆಳಕು ಚೆಲ್ಲುತ್ತವೆ. ಹಬ್ಬ-ಹರಿದಿನಗಳು, ಧರ್ಮ, ಶ್ರದ್ದೆಯ ಸಾಧನ ವ್ರತಗಳು, ಸಂಸ್ಕೃತಿ ಸಂವರ್ಧಕ ಕಾಯಕಗಳು ಇವುಗಳ ಆಚರಣೆ ಎಲ್ಲ ಜನಾಂಗದಲ್ಲೂ ಕಂಡು ಬರುತ್ತದೆ. ವರ್ಷದಲ್ಲಿ ಒಂದು ಇಲ್ಲವೆ ಎರಡು ಸಲ ಒಂದು ಕಡೆಗೆ ಸೇರಿಕೊಂಡು ತಮ್ಮ ತಮ್ಮ ಸುಖ ದು:ಖಗಳು ವಿಚಾರಿಸಿಕೊಳ್ಳುವುದರ ಜೊತೆಗೆ ಹಬ್ಬ-ಹರಿದಿನಗಳನ್ನು ಆಚರಿಸುತ್ತಾರೆ. ಅಂತಹ ಹಬ್ಬಗಳಲ್ಲಿ ದಸರಾ ಹಬ್ಬ, ಹಬ್ಬಗಳು ಮಕರ ಸಂಕ್ರಮಣ, ಮೊಹರಂ, ಪ್ರಮುಖವಾದವುಗಳಾಗಿವೆ.

ದಸರಾ ಹಬ್ಬ

ಭಾರತೀಯ ಹಬ್ಬಗಳಲ್ಲಿ ಒಂದಾದ ದಸರಾ ಹಬ್ಬವನ್ನು ಸುಡುಗಾಡು ಸಿದ್ಧರೂ ಆಚರಿಸುತ್ತಾರೆ. ನಾಡಿನ ಹಲವು ಪ್ರದೇಶಗಳಲ್ಲಿ ಭಿಕ್ಷಾಟನೆಯಲ್ಲಿ ತೊಡಗಿದ ಸಿದ್ಧರು ಚಂದ್ರಗಿರಿ (ಆಲಮಟ್ಟಿ) ಬಯಲು ಪ್ರದೇಶದಲ್ಲಿ ಸೇರುತ್ತಾರೆ. ಇದು ಪರಂಪರಾನುಗತವಾಗಿ ನಡೆದು ಬರುತ್ತಿರುವ ರೂಢಿಗಳಲ್ಲಿ ಒಂದಾಗಿದೆ. ಸಮಾಜದ ಹಿರಿಯರೆನಿಸಿಕೊಂಡವರು, ಪ್ರತಿಯೊಂದು ಕುಟುಂಬದ ಸುಖ ದು:ಖವನ್ನು ವಿಚಾರಿಸಿಕೊಳ್ಳತ್ತಾರೆ ಮತ್ತು ಜಗಳ ಇಲ್ಲವೆ ಹಲವು ಸಮಸ್ಯೆಗಳಿಗೆ ಪರಿಹಾರ ಸೂಚಿಸುತ್ತಾರೆ. ಇದೇ ಸಂದರ್ಭದಲ್ಲಿ ವರನ ಕಡೆಯವರು ವಧುವನ್ನು ಹುಡುಕುತ್ತಾರೆ. ಹೀಗಾಗಿ ದಸರಾ ಹಬ್ಬ ಸುಡುಗಾಡು ಸಿದ್ಧರಲ್ಲಿ ಹೆಚ್ಚಿನ ಮಹತ್ವವನ್ನು ಪಡೆದಿದೆ ಎಂದು ಹೇಳಬಹುದು.

ಸುಡುಗಾಡು ಸಿದ್ಧರು ಹರಕೆ ಮತ್ತು ಶಕ್ತಿಗೆ ಅನುಸಾರವಾಗಿ ಹಬ್ಬಕ್ಕೆ ಖರ್ಚುಮಾಡುತ್ತಾರೆ. ಕೆಲವರು ದಿನನಿತ್ಯ ದೇವರ ಪೂಜೆ ಮಾಡಿದರೆ ಇನ್ನೂ ಕೆಲವರು ಹೊಸ ಬಟ್ಟೆಗಳನ್ನು ತಂದು ದೇವರ ಜಗುಲಿಯ ಮೇಲಿಟ್ಟು ಪೂಜಿಸಿ ಎಲ್ಲರಿಗೂ ಸಿಹಿ ಪದಾರ್ಥವನ್ನು ಹಂಚುತ್ತಾರೆ.

ಗಂಗಮ್ಮನ ಪೂಜೆ

ಸುಡುಗಾಡು ಸಿದ್ಧರು ತಮ್ಮ ದೈವದ ನಿಯಮದಂತೆ ಮುತ್ತೈದೆಯರು ಗಂಗಾಸ್ಥಳಕ್ಕೆ ಹೋಗಿ ಎಡೆಯನ್ನು ಗಂಗೆಯಲ್ಲಿ ಹರಿಬಿಟ್ಟು ಅಲ್ಲಿಯ ಮೃದುವಾದ ಮಣ್ಣು ತಂದು ಗಂಗಮ್ಮನ ಮೂರ್ತಿ ಮಾಡುತ್ತಾರೆ. ಅದನ್ನು ದೇವರ ಜಗುಲಿಯ ಮೇಲಿಟ್ಟು ಕುಂಕುಮ, ವಿಭೂತಿಯಿಂದ ಪೂಜಿಸಿ, ಕಾಯಿ, ಕರ್ಪೂರ ಸಲ್ಲಿಸುತ್ತಾರೆ. ಅಂದಿನ ರಾತ್ರಿ ಪ್ರತಿಯೊಂದು ಗುಡಿಸಲಿನಲ್ಲಿಯೂ ತಮ್ಮ ಭಿಕ್ಷೆಗೆ ಬಳಸುವ ಜೋಳಿಗೆಯ ಪೂಜೆ ಇರುತ್ತದೆ. ಆ ದಿನ ರಾತ್ರಿ ಭಜನೆ, ಜಾಗರಣೆಯ ಮೂಲಕ ದೇವತಾರಾಧನೆಯಲ್ಲಿ ಕಳೆಯುತ್ತಾರೆ. ಮುಂಜಾನೆಯಾಗುತ್ತಿದ್ದಂತೆ ಪ್ರತಿಯೊಂದು ಗುಡಿಸಲಿನವರು ಹತ್ತು ಜನರಿಗಾದರೂ ಊಟ ಹಾಕುವ ನಿಯಮವಿದೆ.'[೨]

ದೇವಿಯ ಗುಡಿ:

ಸುಡುಗಾಡು ಸಿದ್ಧರ ಹದಿನೈದು ಹೊನ ಲಕ್ಕಿ ಪೋಕ ಬಡಗಿಗಳನ್ನು ತಂದು ಗುಡಿಸಲು ರಚಿಸಿ ಅದರ ಮೇಲೆ ಹೊಸ ಬಟ್ಟೆ ಹಾಕಿ ದಾರದಿಂದ ಕಟ್ಟುತ್ತಾರೆ. ವಿಶೇಷವಾಗಿ ಅಂದು ಹುಲಿಗೆಮ್ಮನ ಪೂಜೆ ಇದ್ದರೆ ಘಟ್ಟದ ಗಡಗಿ ಇಟ್ಟು ಅದರಲ್ಲಿ ಸೇಂದಿಯನ್ನು ಹಾಕುತ್ತಾರೆ. ಇನ್ನೊಂದು ಮಡಿಕೆಯಲ್ಲಿ ಅಕ್ಕಿ ತೊಳೆದ ನೀರು ಇಡುತ್ತಾರೆ. ಹಸಿಯ ಮೇಲೆ ದುರ್ಗಮ್ಮ ಹುಲಿಗೆಮ್ಮನ ಮೂರ್ತಿಗಳಿರುತ್ತವೆ. ದೇವತೆಗಳ ಕೊರಳಿಗೆ ಬೇವಿನ ತಪ್ಪಲು ಕಟ್ಟಿರುತ್ತಾರೆ. ಗುಡಿಸಲಿನಿಂದ ಎರಡು ಮೊಳ ದೂರದಲ್ಲಿ ಸುಮಾರು ಆರು ಅಂಗುಲ ತಗ್ಗು ತೋಡಿ ಸಗಣಿಯಿಂದ ಸಾರಿಸುತ್ತಾರೆ. ಅದರ ಸುತ್ತ ರಂಗೋಲಿ ಬರೆಯುತ್ತಾರೆ. ಸುರ್ಯಾಸ್ತ ಸಮೀಪಿಸುತ್ತಿದ್ದಂತೆ ಹರಕೆಯ ಕುರಿಯನ್ನು ತಂದು ತಗ್ಗಿಗೆ ಐದು ಪ್ರದಕ್ಷಿಣೆ ಹಾಕಿಸಿ ಉಧೋ ಉಧೋ ಎಂದು ಕುರಿಯನ್ನು ಬಲಿಕೊಡುತ್ತಾರೆ. ಅದರ ರಕ್ತವೆಲ್ಲ ಆ ತಗ್ಗಿನಲ್ಲಿಯೇ ಬೀಳುವಂತೆ ವ್ಯವಸ್ಥೆ ಮಾಡುತ್ತಾರೆ. ಕುರಿಯ ಬಾಯಿಯಲ್ಲಿ ಅದರ ಬಲಗಾಲು ಕಡಿದು ಇಡುತ್ತಾರೆ. ಆ ಕಾಲಿನಿಂದ ತೆಗೆದ ಮಾಂಸ, ಕಾಳಜ, ಚಿಗುರೆಲುಬು ಉಪ್ಪು ಹಾಕದೆ ಅಡುಗೆ ಮಾಡುತ್ತಾರೆ. ಹೀಗೆ ತಯಾರಿಸಿದ ಅಡಿಗೆಯು ದೇವಿಗೆ ಮಾತ್ರ ಮೀಸಲಾಗಿರುತ್ತದೆ. ಆ ಮೇಲೆ ಅಡಿಗೆಯಲ್ಲಿ ಉಪ್ಪುಕಾರ ಬೆರೆಸಿ ಮಾಡುತ್ತಾರೆ. ಈ ಕಾರ್ಯ ಮಾಡಿದ ಮಾರನೆಯ ದಿವಸವೇ ಬನ್ನಿ ಮುರಿಯುವ ಕಾರ್ಯಕ್ರಮವಿರುತ್ತದೆ.

ಪರಶುರಾಮನ ಕಳಿಸುವುದು:

'ಸುಡುಗಾಡು ಸಿದ್ಧರು ಗಂಡಸರು ದೇವರ ಮುಂದಿರುವ ತಲಿಕಾಲನ್ನು ಹಿಡಿದುಕೊಂಡು ಆ ಊರು ಬಿಟ್ಟು ದೂರದಲ್ಲಿರುವ ಬೇವಿನ ಮರದ ಹತ್ತಿರ ಹೋಗುತ್ತಾರೆ. ಚಿಕ್ಕ ಐದು ಕಲ್ಲುಗಳನ್ನು ಮರದ ಕೆಳಗೆ ತಂದಿಟ್ಟು ಮೀಸಲು ನೀರಿನಿಂದ ತೊಳೆದು ಭಂಡಾರ ಹಚ್ಚಿ ಪೂಜಿಸುತ್ತಾರೆ. ಆ ಮೇಲೆ ಸೌದೆಗೆ ಬೆಂಕಿ ಹಚ್ಚಿ ಕುರಿಯ ತಲೆಕಾಲು ಸುಟ್ಟು ದೇವರಿಗೆ ನೈವೇದ್ಯ ಅರ್ಪಿಸುತ್ತಾರೆ. ಹಾಗೆಯೇ ಮರದ ಬಡ್ಡೆಗೂ ಪೂಜಿಸುತ್ತಾರೆ. ಆ ಮೇಲೆ ತೆಂಗು ಒಡೆದು ಎಲ್ಲ ಪ್ರಸಾದವನ್ನು ಅಲ್ಲಿಯೇ ತಿಂದು ಬರುವ ವಿಶಿಷ್ಟ ಪದ್ಧತಿ ಅವರಲ್ಲಿದೆ. ಯಾರಾದರೂ ಪ್ರಸಾದ ಮನೆಗೆ ತಂದರೆ ದೇವರಿಗೆ ಶಾಂತಿ ಆಗಿಲ್ಲ, ನಮಗೆ ಮುಂದೆ ಶನಿ ಕಾಡುವುದು ತಪ್ಪುವುದಿಲ್ಲವೆಂಬ ನಂಬಿಕೆ ಅವರಲ್ಲಿದೆ.'

ಜಾತ್ರೆ–ಉತ್ಸವಗಳು

ಜಾತ್ರೆ–ಉತ್ಸವಗಳ ಆಚರಣೆ ಜಾತಿಯಿಂದ ಜಾತಿಗೆ, ಸಮಾಜದಿಂದ ಸಮಾಜಕ್ಕೆ ಮತ್ತು ಬುಡಕಟ್ಟುಗಳಿಂದ ಬುಡಕಟ್ಟಿಗೆ ಭಿನ್ನತೆ ಇರುವುದನ್ನು ನಾವು ಕಾಣುತ್ತೇವೆ. ಒಂದು ಬಡುಕಟ್ಟು ಆಚರಿಸುವ ಜಾತ್ರೆ–ಉತ್ಸವ ಇನ್ನೊಂದು ಬುಡಕಟ್ಟು ಆಚರಿಸದೇ ಇರಬಹುದು. ಯಾವ

ಬುಡಕಟ್ಟು ಒಂದು ಹಬ್ಬ ಅಥವಾ ಜಾತ್ರೆಯನ್ನು ಆಚರಿಸುತ್ತದೆಯೋ ಅಂತಹ ಸಮಯದಲ್ಲಿ ಬಡಕಟ್ಟಿನವರಲ್ಲಿ ಒಂದು ಗೊತ್ತಾದ ಸ್ಥಳದಲ್ಲಿ ಸೇರುವುದು ಸಾಮಾನ್ಯ ಸಂಗತಿ. ವಿಶೇಷ ಸಂದರ್ಭಗಳಲ್ಲಿ ಮಾತ್ರ ಆಚರಿಸಬಹುದಾದ ಈ ಜಾತ್ರೆಗಳು ಜನಪದರ ಜೀವನದಲ್ಲಿ ಒಂದು ಬಗೆಯ ಬದಲಾವಣೆಯನ್ನು ಉಂಟು ಮಾಡುತ್ತವೆ.

ಹಿಂದುಗಳು ಆಚರಿಸುವ ಎಲ್ಲ ಜಾತ್ರೆಗಳಲ್ಲಿ ಸುಡುಗಾಡು ಸಿದ್ಧರು ಭಾಗವಹಿಸುತ್ತಾರೆ. ಮತ್ತು ತಮ್ಮ ಹರಕೆಯನ್ನು ಸಲ್ಲಿಸುತ್ತಾರೆ. ಇದರ ಜೊತೆಗೆ ಅವರದೇ ಆಗಿರುವ ಕೆಲವೊಂದು ಜಾತ್ರೆಗಳು ಇರುವುದು ಕಂಡುಬರುತ್ತದೆ ಅವುಗಳ ಆಚರಣೆ ಬಹಳ ವಿಶಿಷ್ಟತೆಗಳಿಂದ ಕೂಡಿದ್ದಾಗಿದೆ. ಉದಾಹರಣೆ ಪೋಚಮ್ಮನ ಜಾತ್ರೆ, ದುರ್ಗಮ್ಮನ ಜಾತ್ರೆ ಮುಂತಾದ ಶಕ್ತಿ ದೇವತೆಗಳ ಜಾತ್ರೆಗಳನ್ನು ಸಿದ್ಧರು ಅವರದೇ ಆಗಿರುವ ಆಚರಣೆ ಸಂಪ್ರದಾಯಗಳ ಹಿನ್ನೆಲೆಯಲ್ಲಿ ಆಚರಿಸುವುದು ಕಂಡುಬರುತ್ತದೆ.

ಪೋಚಮ್ಮನ ಜಾತ್ರೆ

"ಮಳೆಗಾಲ ಪ್ರಾರಂಭವಾಗುತ್ತಿದ್ದಂತೆ ನಾಡಿನ ಜನತೆಗೆ ಎಲ್ಲಿಲ್ಲದ ಸಂತೋಷ. ಭೂಮಿ, ತಾಯಿಯನ್ನು ಆಶ್ರಯಿಸಿಕೊಂಡು ಬಂದಿರುವ ರೈತರಿಗೆ ಎಲ್ಲಿಲ್ಲದ ಹರ್ಷ. ಮಳೆರಾಯನನ್ನು ಪೂಜಿಸುವ ಪದ್ಧತಿಯಲ್ಲಿ ಕೆಲ ಭಿನ್ನತೆಗಳನ್ನು ಕಾಣುತ್ತೇವೆ. 'ಮಿರಗ' ಪ್ರಾರಂಭವಾಗುತ್ತಿದ್ದಂತೆ ರೈತ ಕೋಳಿಯನ್ನು ಬಲಿಕೊಟ್ಟು ಶಾಂತಿ ಮಾಡುವ ಹಾಗೆ ಕೆಲವರು ಅಂದು ಸಿಹಿ ಅಡುಗೆ ಮಾಡಿ ಮಳೆರಾಯನಿಗೆ ನೈವೇದ್ಯ ಅರ್ಪಿಸುತ್ತಾರೆ. ಸುಡುಗಾಡು ಸಿದ್ಧರು ಮಳೆರಾಯನ ಪೂಜೆಮಾಡುವುದು ವಿಶಿಷ್ಟವಾಗಿ ಕಂಡು ಬರುತ್ತದೆ.

ಸುಡುಗಾಡು ಸಿದ್ಧರು ಅಂದು ತಮ್ಮ ಗುಡಿಸಲುಗಳನ್ನು ಸಗಣಿಯಿಂದ ಸಾರಿಸುತ್ತಾರೆ, ಬಟ್ಟೆಗಳನ್ನು ತೊಳೆದು ಒಣಗಿಸುತ್ತಾರೆ. ಅಂದು ಎಲ್ಲರೂ ಸ್ವಚ್ಛತೆಯನ್ನು ಕಾಪಾಡುತ್ತಾರೆ. ಗುಡಿಸಲಿನ ಮೂಲೆಯಲ್ಲಿ ಒಂದು ಕಲ್ಲನಿಟ್ಟು ತಮ್ಮಲ್ಲಿಯ ಹಿರಿಯರನ್ನು ಅಥವಾ ಸ್ವಾಮಿಯನ್ನು ಗುಡಿಸಲಿಗೆ ಬರಮಾಡಿಕೊಂಡು ಆ ಕಲ್ಲಿಗೆ ಪೂಜೆ ಮಾಡಿಸುತ್ತಾರೆ. ಪೂಜೆ ಮುಗಿದ ಮೇಲೆ ಕೋಳಿ ಅಥವಾ ಕುರಿಬಲಿಕೊಡುತ್ತಾರೆ. ಎಲ್ಲರೂ ಪೋತಮ್ಮನ ಹೆಸರಿನಲ್ಲಿ ಘೋಷಣೆ ಕೂಗುತ್ತಾರೆ. ಈ ಸಂದರ್ಭದಲ್ಲಿ

ದೇವದತ್ತ–ಗುದ್ದಿಂಡವಿತ್ತ

ಆಕಾಶಂಬಯ್ಯ ನಿನ್ನೂರು

ಬೀದಿಗುದ್ದ"[೩]

ಎಂದು ಚಿಕ್ಕ ಮಕ್ಕಳು ಹಾಡುತ್ತಾರೆ, ಮೂರು ದಿನಗಳವರೆಗೆ ಈ ಜಾತ್ರೆಯನ್ನು ಅವರು ನಡೆಸುತ್ತಾರೆ. ಸುಡುಗಾಡ ಸಿದ್ಧರು ಈ ಸಂದರ್ಭದಲ್ಲಿ ಮಾಂಸಾಹಾರ ಸೇವಿಸುವುದು

ವಿಶೇಷವಾಗಿರುತ್ತದೆ. ಈ ಜಾತ್ರೆಯಲ್ಲಿ ಮೈಲಿಗೆ ಆದವರಿಗೆ ಭಾಗವಹಿಸಲು ಆಸ್ಪದವಿಲ್ಲ. ಈ ನಿಯಮವನ್ನು ಉಲ್ಲಂಘಿಸಿದವರಿಗೆ ಶಿಕ್ಷಿಸಿ ದಂಡ ವಿಧಿಸುತ್ತಾರೆ. ಸುಡುಗಾಡು ಸಿದ್ಧರ ಕುಲ ಬಾಂಧವರೆಲ್ಲ ಸೇರಿ ಈ ಜಾತ್ರೆ ಆಚರಿಸುತ್ತಾರೆ.

ಸೇಡಂ ತಾಲೂಕಿನ ಕೊತ್ತಲಬಸವೇಶ್ವರ ಜಾತ್ರೆ

ಕಲಬುರಗಿ ಜಿಲ್ಲೆಯ ಸೇಡಂ ತಾಲೂಕಿನಲ್ಲಿ ಈ ಜಾತ್ರೆಯು ಶಿವರಾತ್ರಿ ಮುಗಿದ ಐದು ದಿವಸಕ್ಕೆ ನಡೆಯುತ್ತದೆ. ತಾಲೂಕಿನ ಸುತ್ತ ಮುತ್ತಲಿನ ಜನರು ಹಾಗೂ ಹೈದ್ರಬಾದ್‌ನಿಂದ ಜನರು ಈ ಜಾತ್ರೆ ನೋಡಲು ಬರುತ್ತಾರೆ. ಇಲ್ಲಿ ಬಸವಣ್ಣನ ಮೂರ್ತಿ ಇದೆ. ಹಾಗು ಬಾಣಂತಿ ಕಂಬ ಅತ್ಯಂತ ಅಕರ್ಷಣೆಯಲ್ಲಿ ಒಂದಾಗಿದೆ. ಜಾತ್ರೆ ದಿನದಂದು ಸಂಜೆ ೫.೩೦ಕ್ಕೆ ಕೊತ್ತಲಬಸವೇಶ್ವರ ರಥೋತ್ಸವ ನಡೆಯುತ್ತದೆ. ಆ ಜಾತ್ರೆಯಲ್ಲಿ ಸಂಗೀತ ಗೋಷ್ಠಿಗಳು ಭಜನೆ, ಕುಣಿತ, ಕುಸ್ತಿ, ಹೀಗೆ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗುತ್ತವೆ. ವಿಶೇಷವೆಂದರೆ ಸುಡುಗಾಡು ಸಿದ್ಧರು ಕಲಿತ ನಾಟಕವನ್ನು ಈ ಜಾತ್ರೆಯಲ್ಲಿ ಪ್ರದರ್ಶಿಸುತ್ತಾರೆ. ಈ ಜಾತ್ರೆಯಲ್ಲಿ ಸುಡುಗಾಡು ಸಿದ್ಧರು ಗಿಡಮೂಲಿಕೆಗಳನ್ನು ಮಾರಾಟ ಮಾಡುತ್ತಾರೆ.

ಕಲಬುರಗಿ ಶರಣಬಸವೇಶ್ವರ ಜಾತ್ರೆ

ಕಲಬುರಗಿ ದೊಡ್ಡಪ್ಪ ಶ್ರೀ ಶರಣಬಸವೇಶ್ವರ ಜಾತ್ರೆ ಪ್ರತಿ ವರ್ಷ ವೈಶಾಖ_ಜ್ಯೇಷ್ಠ ದಿನದಂದು (ಮೇ ೬ನೇ ತಾರೀಖಿನ ದಿನ ಜಾತ್ರೆ) ಸಂಜೆ ೬:೩೦ಕ್ಕೆ ರಥ ಎಳೆಯುತ್ತಾರೆ. ಜಾತ್ರೆ ಹಿಂದಿನ ದಿನ ಉಚ್ಚಾಯ ಎಳೆಯುತ್ತಾರೆ. ಮಹಾರಾಷ್ಟ್ರ, ಕರ್ನಾಟಕ, ಆಂಧ್ರಪದೇಶ ಸುತ್ತ ಮುತ್ತಲಿನ ಹಳ್ಳಿ, ಪಟ್ಟಣ, ನಗರ ಪ್ರದೇಶದಿಂದ ಜನರು ಆಗಮಿಸುತ್ತಾರೆ. ಈ ಜಾತ್ರೆಯ ರಥೋತ್ಸವ ಬಹಳ ವಿಂಜೃಭಣೆಯಿಂದ ನೇರವೇರುತ್ತದೆ. ರಥಕ್ಕೆ ನಾರು, ಉತ್ತತ್ತಿ, ಹೂವು ತೆಗೆದುಕೊಂಡು ರಥಕ್ಕೆ ಎಸೆಯುತ್ತಾರೆ. ರಾತ್ರಿ ಭಜನೆ, ಪುರಾಣ, ಪುಣ್ಯ ಕಥೆಗಳು, ಗೀಗೀ ಪದಗಳು ಅನ್ನದಾಸೋಹ ಕಾರ್ಯಕ್ರಮ ನಡೆಯುತ್ತವೆ. ಈ ಜಾತ್ರೆ ಒಂದು ತಿಂಗಳು ಕಾಲ ನಡೆಯುತ್ತದೆ. ಈ ಜಾತ್ರೆಗೆ ಬೇರೆ ಬೇರೆ ಪ್ರದೇಶಗಳಿಂದ ಸುಡುಗಾಡು ಸಿದ್ಧರು ಆಗಮಿಸಿ ಭಾಗವಹಿಸುತ್ತಾರೆ. ವಿವಿಧ ರೋಗಗಳಿಗೆ ಔಷಧಗಳನ್ನು ಕೊಡುತ್ತಾರೆ.

ಅಡಿಟಿಪ್ಪಣಿಗಳು

೧. ಅಂಬಳಿಕೆ ಹಿಯಣ್ಣ, ಬುಡಕಟ್ಟು ಜನರ ಬದಲಾಗುತ್ತಿರುವ ಆರ್ಥಿಕ ಜೀವನ, ಜಾನಪದ ಕೆಲವು ಅಧ್ಯಯನಗಳು ಪುಟ ಸಂಖ್ಯೆ-೯೭

೨. ಬಸವರಾಜ ಸಬರದ, ಜನಪದ ದೇವತೆಗಳು ಮತ್ತು ಶಿಷ್ಟ ದೇವತೆಗಳು, ೧೯೯೪, ಪುಟ ಸಂಖ್ಯೆ ೧೯

೩. ಟಿ.ಎಂ. ಭಾಸ್ಕರ್, ಸುಡುಗಾಡು ಸಿದ್ಧರ ಒಂದು ಅಧ್ಯಯನ, ೧೯೯೪, ಪುಟ ಸಂಖ್ಯೆ-೨೦೪

❑❑❑

ಅಧ್ಯಾಯ ಐದು

ಸುಡುಗಾಡು ಸಿದ್ಧರ ಕಲೆ

ಅಧ್ಯಾಯ ಐದು

ಸುಡುಗಾಡು ಸಿದ್ಧರ ಕಲೆ

'ಜನಪದ ಕಲೆ ಎಂಬುದು ಮಾನವನ ಅಪೂರ್ವ ಶಕ್ತಿಯ ಪ್ರತೀಕವಾಗಿ ನಿಂತುಕೊಂಡ ಒಂದು ದಿವ್ಯ ಶಕ್ತಿ ಸಾಮಾನ್ಯವಾಗಿ ಅರ್ಥ ಮಾಡಿಕೊಳ್ಳುವ ಸಂದರ್ಭದಲ್ಲಿ ಕಲೆ ಯಾವುದೇ ಮಾಧ್ಯಮವನ್ನು ಬಳಸಿಕೊಂಡು ನಮ್ಮ ಭಾವನೆಗಳನ್ನು ಹೃದಯ ಮೆಚ್ಚುವಂತೆ ತಿಳಿಸುವುದೇ ಕಲೆಯ ವಿಶಿಷ್ಟ ಲಕ್ಷಣವಾಗಿರುತ್ತದೆ. ಪ್ರಾಚೀನ ಕಾಲದ ಕಾಡು ಮಾನವ ನಿಸರ್ಗದ ನಿಗೂಢ ರಹಸ್ಯಗಳನ್ನು ಕಂಡು ಆಶ್ಚರ್ಯ ಮತ್ತು ಸಂತೋಷಪಟ್ಟಿರಬಹುದು. ಗಾಳಿ ಬೀಸುವಿಕೆ ಪ್ರಾಣಿ ಮತ್ತು ಪಕ್ಷಿಗಳು ಕೂಗುವಿಗೆ ಅಥವಾ ಗುಡುಗು ಮಿಂಚುಗಳ ವಿಸ್ಮಯಕಾರಿ ಸನ್ನಿವೇಶಗಳನ್ನು ಕಂಡು ಮಾನವ ಅವುಗಳಂತೆ ಅನುಕರಿಸಲು ಪ್ರಾರಂಭಿಸಿದಂತೆ ತೋರುತ್ತದೆ. ಅದು ಹಾಗೆ ಬೆಳೆದು ಅವನ ಹೃದಯದಲ್ಲಿ ವಿಶಿಷ್ಟ ರೂಪ ತಾಳಿ ಅಭಿವ್ಯಕ್ತಿವಾಗಿರಬಹುದು. ಹೀಗಾಗಿ ಪ್ರಾಚೀನ ಮಾನವನ ಅಂತರಾಳದಿಂದ ಮೂಡಿ ಬಂದ ವಿಶಿಷ್ಟ ರೂಪವೇ ನಾವು ಕಲೆ ಎಂದು ಕರೆಯುತ್ತೇವೆ. ಕಲೆ ಎಂಬುದು ಆದಿವ್ಯ ಶಕ್ತಿಯ ಶಾಂತಿಯ ಒಂದು ಕಿರಣ.'[೧]

'ಕರ್ನಾಟಕದಲ್ಲಿ ಜನ ಜೀವನದಲ್ಲಿ ಸಾಹಿತ್ಯ 'ಕಲೆಗಾಗಿ ಕಲೆ' ಎನ್ನುವ ಭಾವನೆಯ ಹಿನ್ನೆಲೆಯಲ್ಲಿ ರೂಪತಾಳುತ್ತದೆ. ಅದು ಕೆಲವು ಸುಡುಗಾಡು ಸಿದ್ಧರ ಮತ ಧರ್ಮಗಳ ಪ್ರಸಾರಕ್ಕಾಗಿ ಮತ್ತು ಕೆಲವು ವ್ಯಕ್ತಿಗಳ ಸೊತ್ತಾಗಿ ಉಳಿದುಕೊಂಡು ಬಂದಿದೆ. ಜನಪದ ಸಾಹಿತ್ಯವೆಂಬುದು ಆಯಾ–ಜನಾಂಗ ಜಾತಿಗಳಲ್ಲಿ ಕಂಠದಿಂದ ಕಂಠಕ್ಕೆ ಎಂದರೆ ಬಾಯಿಯಿಂದ ಬಾಯಿಗೆ ಕಿವಿಯಿಂದ ಕಿವಿಗೆ ಸರಾಗವಾಗಿ ಹರಿದು ಬಂದಿರುವ ಸಮೃದ್ಧ ಸಂಪತ್ತು. ಅದು ಹಲವಾರು ಶತಮಾನಗಳಿಂದ ಉಳಿದುಕೊಂಡು ಬೆಳೆದುಕೊಂಡು ಬಂದಿರುವ ಸಾಹಿತ್ಯವಾಗಿದೆ. ದಿನಂಪ್ರತಿ ಜನಪದರು ತಾವು ಕೆಲಸಗಳಲ್ಲಿ ತೊಡಗಿದಾಗ ಅದ ಸುಖ: ದು:ಖಗಳ ನಡು ನಡವೆ ಅನುಭವಿಸಿದ ಅನುಭವನ್ನು ಹೃದಯ ತುಂಬಿ ಹೊರ ಹಾಕುತ್ತಾ ಬಂದವರಾಗಿದ್ದಾರೆ ತಮ್ಮ ಪಾಡನ್ನ ಹಾಡಾಗಿ ನೀಡಿದ್ದ ಬಾಳಿನ ನೋವು ನಲಿವುಗಳನ್ನೇ ಸಾಹಿತ್ಯವನ್ನಾಗಿಸಿಕೊಂಡು ಒಂದು ಅಪೂರ್ವ ಪ್ರಕಾರವಾಗಿದೆ.'[೨]

ಸುಡುಗಾಡು ಸಿದ್ಧರ ಜನಪದ ಸಾಹಿತ್ಯ ಯಾರು ಕೃಷಿ ಮಾಡದಿರುವ ಫಲವತ್ತಾದ ಭೂಮಿ. ಅಷ್ಟೇ ಏಕೆ ಭಾರತದಲ್ಲಿ ಅದು ಕೂಡಾ ಒಂದು ಜನಾಂಗವೆಂಬುದು ಇದೂವರೆಗೂ ಸ್ಪಷ್ಟವಾಗಿ ಗುರುತಿಸಿಲ್ಲ. ಜನಪದರ ಕಲೆಗಳು ಉಪಜೀವನದ ಮಾರ್ಗವಾಗಿ ವೃತ್ತಿ ಕಲೆಗಾಗಿ ಮಾಡಿಕೊಂಡರು. ಜನಪದ ಕ್ರೀಡೆಗಳು ಜನರ ಮನರಂಜನೆಗೆ ಹಾಗೂ ಜನರನ್ನು ಸಂತೋಷ ಪಡಿಸಲು ಹಾಗೂ ಕುಟುಂಬ ನಿರ್ವಹಣೆಗಾಗಿ ಕಲೆಗೆ ಹಂಚಿಕೊಳ್ಳುವುದು ಅನಿವಾರ್ಯವಾದವು. ಜನಪದ ಕಲೆಗಳನ್ನು ಸಮೂಹದ ಮಧ್ಯೆ ಪ್ರದರ್ಶಿಸುವುದರ ತಮ್ಮ ಬದುಕಿನ ಜೊತೆಗೆ ಆ

ಕಲೆಗಳಿಗೆ ಜೀವಂತಿಕೆಯನ್ನು ಸುಡುಗಾಡು ಸಿದ್ಧರು ನೀಡಿದ್ದರು. ಸುಡುಗಾಡು ಸಿದ್ಧರು ಕೈಚಳಕದ ಮೂಲಕ ಜನರಿಗೆ ಮನರಂಜನೆ ನೀಡುತ್ತಿದ್ದರು. ಅದು ಅವರ ಉಪಜೀವನಕ್ಕೂ ದಾರಿಯಾಗಿತ್ತು. ಪ್ರತಿಯೊಂದು ಸಮುದಾಯದಲ್ಲಿ ಕಲೆಗಳನ್ನು ಕಾಣುತ್ತೇವೆ. ಸುಡುಗಾಡು ಸಿದ್ಧರು ತಮ್ಮ ಕಲೆಯನ್ನು ಧಾರ್ಮಿಕವಾಗಿ ಭಕ್ತಿಯಿಂದ ಮುಂದುವರೆಸಿಕೊಂಡು ಬಂದಿದ್ದಾರೆ. ಆಧುನಿಕ ದಿನಗಳಲ್ಲಿ ಸಿನಿಮಾ, ಟಿ.ವಿ. ಮುಂದೆ ಜಾನಪದ ಕಲೆಗಳು ಸುಡುಗಾಡು ಸಿದ್ಧರ ಕೈಚಳದ ಆಟಗಳು ಮರೆತು ಹೋಗುತ್ತಿವೆ. ಬಯಲಾಟ, ನಾಟಕ, ಕಲಾ ಪ್ರದರ್ಶನಗಳ ಬಹುದೂರ ಉಳಿದಿವೆ. ಮುಂದೆ ನಾವು ಪುಸ್ತಕಗಳಿಂದ ಓದಿ ತಿಳಿದುಕೊಳ್ಳುವ ಪ್ರಸಂಗಗಳು ಬರಬಹುದು. ಸಿದ್ಧರ ಕೈಚಳಕದ ಆಟಕ್ಕೆ ಲಾಗ್ಮ ಎಂದು ಕರೆಯುತ್ತಾರೆ ಸಿದ್ಧರ ಮೂಲ ಆಡುವ ಜೋಳಿಗೆಯಲ್ಲಿ ಅಡಗಿರುತ್ತದೆ ಸಿದ್ದರ ಜೋಳಿಗೆ ಬಗ್ಗೆ ಅಪಾರ ಭಕ್ತಿ ಇದೆ. ಅದು ಅವರ ಅಕ್ಷಯ ಪಾತ್ರೆ ಇದ್ದಂತೆ ಎಂದು ಹೇಳುತ್ತಾರೆ.

ಸುಡಗಾಡು ಸಿದ್ಧರು ಸಂಪೂರ್ಣ ಆಟ ಜೋಳಿಗೆಯಲ್ಲಿ ಇರುತ್ತದೆ. ಜೋಳಿಗೆಯಲ್ಲಿ ಜಾದು ಮಾಡುವ ಪರಿಕಗಳನ್ನು ಇಟ್ಟಿ ಕೊಂಡಿರುತ್ತಾರೆ. ಅವರು ಒಂದು ಶಂಖ ಮತ್ತು ನಪೂರಿಯಿಂದ ಬಸವಣ್ಣನನ್ನು ಮಾಡುತ್ತಾರೆ. ಕಾಗದದಿಂದ ರೂಪಾಯಿ ನೋಟು ಮಾಡುತ್ತಾರೆ. ಅವರು ಮುಂದಿನ ಭವಿಷ್ಯ ಹೆಳುತ್ತಾರೆ. ಒಳ್ಳೆಯ ಮಾತುಗಳನ್ನು ಹೇಳಿ ಕಾಯಿಲೆ ಇದ್ದರೆ ಗಿಡಮೂಲಿಕೆ ಔಷಧಗಳನ್ನು ಕೊಟ್ಟು ಹೋಗುತ್ತಾರೆ. ಲಿಂಬೆಹಣ್ಣು, ಗಜಗ, ಲಿಂಗದ ಸಹಾಯದಿಂದ ಈಶ್ವರ ಮೂರ್ತಿಮಾಡುವುದರ ಮೂಲಕ ಪ್ರೇಕ್ಷಕರನ್ನು ರಂಜಿಸುತ್ತಾರೆ. ಸನ್ನಿವೇಶಕ್ಕೆ ತಕ್ಕಂತೆ ಹಾಸ್ಯದ ಮಾತುಗಳನ್ನು ಆಡುತ್ತಾರೆ. ಮಲ್ಲಿ ಮಲಾಡ ಚಾಡಿ ಎಂದು ಕುಗಿದ್ದಾಗ ಚಿವ್ವ್ ಚಿವ್ವ್ ನಾದ ಮಾಡುವುದು. ಅವರ ಜೋಳಿಗೆಯಿಂದ ನಾದ ಹೊರಬರುತ್ತದೆ. ಹಾಗೂ ಅವರು ಜೋಳಿಗೆಯನ್ನು ಒತ್ತಿದ್ದರೆ ಚಿವ್ವ್ ಚಿವ್ವ್ ಎಂದು ಶಬ್ದ ಮಾಡುತ್ತದೆ. ಸುಡುಗಾಡು ಸಿದ್ಧರು ಒಂದು ತಾಸು ಜನರ ಸಮೂಹವನ್ನು ರಂಜಿಸುತ್ತಾರೆ. ಜನರಲ್ಲಿ ಭಯ ಭಕ್ತಿಬರುವ ಹಾಗೆ ಮಾಡಿ ಜನರಿಂದ ಹಣ ಪಡೆದು ದೇವರ ಹೇಳುತ್ತಾರೆ. ಇತ್ತೀಚಿನ ದಿನಗಳಲ್ಲಿ ಈ ಕಲೆಯ ಪ್ರದರ್ಶನ ನೀಡುವವರು ಬಹಳ ಕಡಿಮೆ ಸಂಖ್ಯೆಯಲ್ಲಿದ್ದಾರೆ.

ಸುಡುಗಾಡು ಸಿದ್ಧರು ಹೆಚ್ಚಿನ ಸಂಖ್ಯೆಯಲ್ಲಿ ಅನಕ್ಷರಸ್ಥರಾಗಿದ್ದಾರೆ. ಆದರೂ ಇವರ ಕಲೆ ಸಾಹಿತ್ಯ, ಜಾದು ತುಂಬ ಉತ್ಕೃಷ್ಟವಾಗಿದೆ ಸುಡುಗಾಡು ಸಿದ್ಧರ ಸಾಹಿತ್ಯ ಕಲೆ ಸ್ವಲ್ಪ ಕಡಿಮೆಯಾಗುತ್ತಿದೆ. ಅದರೆ ಸುಡುಗಾಡು ಸಿದ್ಧರಲ್ಲಿ ಕಥೆ, ಹಾಡು, ಮುಂತಾದ ಸಾಹಿತ್ಯ ಪ್ರಕಾರಗಳಿರುವುದು ಕಂಡುಬರುತ್ತದೆ. ಅವುಗಳನ್ನು ಈ ಕೆಳಗಿನಂತೆ ಗಮನಿಸಬಹುದು.

ಸಂಪ್ರದಾಯದ ಹಾಡುಗಳು: ಸುಡುಗಾಡು ಸಿದ್ಧರು ಗೌಡ ಮತ್ತು ಕುಲಕರ್ಣಿಯವರ ಆದೇಶದಂತೆ ಗ್ರಾಮಗಳಲ್ಲಿ ಮೂರು ದಿನಗಳ ಕಾಲ ಮಾತ್ರ ಉಳಿದುಕೊಂಡು ಭಿಕ್ಷೆ ಬೇಡುತ್ತಾರೆ. ಹೀಗಾಗಿ ಇವರು ಇಂತಹ ಗ್ರಾಮದವರು ಎಂದು ಹೇಳುವುದು ಕಷ್ಟದ ಕೆಲಸ.

ಸಿದ್ಧರು ಆಯಾ ಗ್ರಾಮಗಳಲ್ಲಿ ಉಳಿದುಕೊಂಡು ಅಮಾವಾಸ್ಯೆ, ಹುಣಿಮ್ಮೆ, ಹಬ್ಬ-ಹರಿದಿನ, ಜಾತ್ರೆ ಉತ್ಸಗಳನ್ನು ಆಚರಿಸುತ್ತಾರೆ. ಈ ಸಂದರ್ಭದಲ್ಲಿ ಅನೇಕ ಸಂಪ್ರದಾಯದ ಹಾಡುಗಳನ್ನು ಹಾಡುತ್ತಾರೆ. ಅಲ್ಲದೆ ಮದುವೆಯಲ್ಲಿ ಸುಡುಗಾಡು ಸಿದ್ಧರು ಸೋಬಾನೆ ಹಾಡುಗಳನ್ನು ಹೇಳಿ ಕಾರ್ಯ ನೆರವೇರಿಸಿಕೊಡುತ್ತಾರೆ.

ಹೆಂಗಸರು ಹಾಡುವ ಹಾಡುಗಳು:

೧. ಋತುಮತಿ ಸಂದರ್ಭದಲ್ಲಿ ಹಾಡುವ ಹಾಡುಗಳು

೨. ಮದುವೆ ಹಾಡುಗಳು

೩. ಸೋಬನ ಹಾಡುಗಳು

೪. ಪ್ರಾರ್ಥನಾ ಹಾಡುಗಳು

೫. ಬೀಸುವ ಹಾಡುಗಳು

೬. ಲಾಲಿ-ಜೋಗುಳ ಹಾಡುಗಳು

೭. ಕಥ-ಗೀತೆಗಳು

ಋತುಮತಿ ಸಂದರ್ಭದಲ್ಲಿ ಹಾಡುವ ಹಾಡುಗಳು

ಸುಡುಗಾಡು ಸಿದ್ಧರಲ್ಲಿ ಋತುಮತಿಯಾದ ಒಂಭತ್ತರಿಂದ ಹನ್ನೊಂದು ದಿವಸ ಪ್ರತ್ಯೇಕ ಗುಡಿಸಲಿನಲ್ಲಿ ಕುಳ್ಳರಿಸುವ ಪದ್ಧತಿ ರೂಢಿಯಲ್ಲಿದೆ. ಕಂಬಳಿ ಇಲ್ಲವೆ ಶಾಲಿನ ಮೇಲೆ ಹುಡುಗಿಯನ್ನು ಪೂರ್ವಕ್ಕೆ ಮುಖಮಾಡಿ ಕುಳ್ಳಿರಿಸಿ ಹೂ ಮುಡಿಸಿ ಆರತಿ ದೀಪವನ್ನು ಇಟ್ಟು ಹಾಡು ಹಾಡುತ್ತಾರೆ. ಸಾಮಾನ್ಯವಾಗಿ ಸಂಚಾರದಲ್ಲಿರುವ ಸುಡುಗಾಡು ಸಿದ್ಧರ ಹೆಂಗಸರು ತೆಲುಗು ಮತ್ತು ಕನ್ನಡದಲ್ಲಿ ಹಾಡುತ್ತಾರೆ. ಅದರೆ ಹೊರಗಿನ ಗುಡಿಸಲಿನ ಹೆಂಗಸರು ಋತುಮತಿಗೆ ಮುಟ್ಟದೆ ಗುಡಿಸಲಿನ ದೂರದಲ್ಲಿ ಕುಳಿತುಕೊಂಡು ಹಾಡುತ್ತಾರೆ.

ಸುಡುಗಾಡು ಸಿದ್ಧರಲ್ಲಿ ಹಿಂದಿನ ಕಾಲದಲ್ಲಿ ಬಾಲ್ಯದಲ್ಲೇ ಮದುವೆ ಆಗುತ್ತಿತ್ತು. ಅಂದರೆ ೧೨-೧೬ ವರ್ಷಕ್ಕೆ ಋತುಮತಿಯಾಗುತ್ತಾರೆ. ಈ ಪದ್ದತಿ ಪ್ರಸ್ತುತ ದಿನಗಳಲ್ಲಿ ಇಲ್ಲಿ ಸರ್ಕಾರದ ಕಾನೂನುಗಳು ಮದುವೆ ವಯಸ್ಸು ನಿರ್ಧಿಷ್ಟ ಪಡಿಸಿವೆ ಹುಡಗರಿಗೆ - ೨೧ ಹುಡಿಗಿಗೆ - ೧೮ ತುಂಬಿದ ನಂತರ ಮದುವೆ ಮಾಡಿಸಿಬೇಕು ಎಂದು ಕಾನೂನಲ್ಲಿ ನಿರ್ಧಸಿದೆ.

ಮದುವೆ ಹಾಡುಗಳು: 'ಇದರಲ್ಲಿ ಸಾಸಿ ಬರೆಯುವಾಗ ಹಾಡುಗಳು ಅಕ್ಷತೆ ಹಾಕಿ ಉಡಿ ತುಂಬುವಾಗ ಹಾಡುವ ಹಾಡುಗಳೆಂದು ವಿಂಗಡಿಸಲಾಗಿದೆ.

ಸಾಸಿಯ ಬರಿಲಿಕ್ಕೆ ಕಾಳವ್ವನ ಕರಿಸಿದೆ

ಸೋ ಬನ್ನಿ ಈರಣ್ಣ ಪಟ್ಟದರಸಿಗೆ'[೩]

ಸೋ ಬನ್ನಿ ಎಲ್ಲ ಮುತ್ತೈದೆಯವರು ಮದುವೆ ಹಂದರದಲ್ಲಿ ಬಂದಿದ್ದಾರೆ. ಅಂತಹ ಸಂದರ್ಭದಲ್ಲಿ ಕಾಳಮ್ಮ ಕರೆರು ಸಾಸಿ ಬರೆಸುತ್ತಿದ್ದಾನೆ. ಅವಳ ಸಾಸಿ ಬರೆದ ಮೇಲೆ ಚಿಕ್ಕ ಚಿಕ್ಕ ಮಕ್ಕಳು ಭಾಗವಹಿಸುತ್ತಾರೆ. ಈ ಸನ್ನಿವೇಶದಲ್ಲಿ ಸುಸಿ ಸೊಗಸಾಗಿ ಹಾಡುಗಳನ್ನು ಹಾಡುತ್ತಾರೆ.

'ಅರಸಿಣ ತುಂಬಕ್ಕೆ ಹುಲಿಗೆಮ್ಮನ ಕರಸಿರೆ

ಸೋ ಬನ್ನಿ ಬಸವಣ್ಣನ ಪಟ್ಟದರಸಿಗೆ'[೪]

ಸೋ ಬನ್ನಿ ಎಂದು ಹಾಡುತ್ತಾ ತಮ್ಮ ಕರ್ತವ್ಯವನ್ನು ವ್ಯವಸ್ಥಿತವಾಗಿ ಮುಗಿಸುತ್ತಾರೆ. ಆಗ ಮುನಿಗಳು ಮದುವೆ ಹಂದರದಲ್ಲಿ ಬಂದು ವರ-ವಧುವಿನ ಕೊರಳಿಗೆ ತಾಳಿಯನ್ನು ಕಟ್ಟುತ್ತಾನೆ. ಮುತ್ತೈದೆಯರು ವಧು ವರರಿಗೆ ಮುಯ್ಯುಮಾಡುತ್ತಾರೆ. ಕೊನೆಗೆ ಉಡಿ ತುಂಬಿ ಗಂಡನ ಮನೆಗೆ ಕಳಿಸುತ್ತಾರೆ.

ಹಾಸ್ಯ ಗೀತೆಗಳು: ಪ್ರತಿಯೊಂದು ಸಮುದಾಯದಲ್ಲಿ ನವೀರಾದ ಹಾಸ್ಯ ಹೊರ ಸೂಸುವ ಹಾಡುಗಳಿರುತ್ತವೆ. ಸಂಪ್ರದಾಗಳು ಈ ಹಾಸ್ಯ ಗೀತೆಗಳು ಕೋಲ್ಮಿಂಚಿನಂತೆ ಮಿಂಚುತ್ತವೆ. ಸುಡುಗಾಡು ಸಿದ್ಧರು ಕಾಲಹರಣ ಮಾಡುವಾಗ ಒಂದೊಂದು ಹಾಸ್ಯ ಚಟಾಕಿಗಳನ್ನು ಹಾರಿಸುತ್ತಾರೆ. ಅವುಗಳು ಹೆಚ್ಚಾಗಿ ಬಡತನಕ್ಕೆ ಸಂಬಂಧಿಸಿದಂತೆಯೇ ಇರುತ್ತವೆಂಬುದನ್ನು ಗಮನಿಸಬಹುದು.

'ದಸರಿ ಹಬ್ಬಕ್ಕೆ ಹಸನಾದ ಹೋಳಿಗೆ

ಮಾಡು ಎಂದನಲ್ಲೆ! ಕೇಳೆ

ಜಾಣೆ ಮಾಡು ಎಂದನಲ್ಲೆ

ಹಸನಾದ ಹೋಳಿಗಿ ಬೆಲ್ಲ ಹಾಕಲಿಕ್ಕೆ

ನೆನಪೆ ಬರಲಿಲ್ಲೆ'[೫]

ಸುಡುಗಾಡು ಸಿದ್ಧರು ಬೀಡುವಿನ ವೇಳೆಯಲ್ಲಿ ನಾಟಕ, ಭಜನೆ ತರಬೇತಿ ಪಡೆಯುತ್ತಾರೆ. ಸುಡುಗಾಡು ಸಿದ್ಧರು ಸ್ವಂತ ಸಂಘಗಳನ್ನು ರಚಿಸಿಕೊಂಡಿದ್ದಾರೆ. ಜಾತ್ರೆ, ಹಬ್ಬದ ಸಂದರ್ಭದಲ್ಲಿ ಇವುಗಳನ್ನು ಪ್ರಯೋಗ ಮಾಡುವುದು ಕಂಡುಬರುತ್ತದೆ. ಹಾರ್ಮೋನಿಯಂ, ತಬಲಾ, ಡೊಲಕ್, ಇನ್ನಿತರ ವಸ್ತುಗಳನ್ನು ಸಂಗೀತಕ್ಕೆ ಬಳಸಿಕೊಳ್ಳುತ್ತಾರೆ. ಸುಡುಗಾಡು ಸಿದ್ಧರು ತಮ್ಮ ಕಲೆಯನ್ನು ಪ್ರದರ್ಶಿಸುವ ಸಲುವಾಗಿ ಒಂದು ವೇದಿಕೆಯನ್ನು ಸಿದ್ಧಪಡಿಸಿಕೊಂಡಿದ್ದಾರೆ.

ಜನಪದ ಕ್ರೀಡೆಗಳು: ಹಾಡು, ಕುಣಿತ, ಮಣ್ಣಾಟ, ಹರಗಳಾಟ, ಕುಂಟಾಟ, ಎಳೆದಾಟ, ಮುಟ್ಟಾಟ ಈ ಮೊದಲಾದ ಕ್ರೀಡೆಗಳ ಸುಡುಗಾಡ ಸಿದ್ಧರ ಮಕ್ಕಳು ಆಡುತ್ತಾರೆ. ಚಕ್ಕರ್ ಆಟ

ಇಸ್ಪಿಟ್ಟು ಆಡುವುದು ಕಂಡುಬರುತ್ತದೆ. ಹೆಣ್ಣು ಮಕ್ಕಳು ಕುಂಟಬಿಲ್ಲೆ, ಕಲ್ಲಾಟ, ಕಣ್ಣುಮುಚ್ಚಾಲೆ, ಇತ್ಯಾದಿ ಆಟಗಳನ್ನು ಆಡುತ್ತಾರೆ.

ಸುಡುಗಡು ಸಿದ್ಧರಲ್ಲಿ ಕಂಡುಬರುವ ಕಲಾ ಪ್ರಕಾರಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು.

೧. ಚಾಪೆ ಹೆಣೆಯುವುದು

೨. ಗುಡಾರ ಹೊಲಿಯುವುದು

೩. ಕೌದಿ ಹೊಲಿಯುವುದು

೪. ಕಿರೀಟ ತಯಾರಿಕೆ

೫. ಬಲೆಗಳು ನೇಯುವುದು

೬. ಚಿತ್ರ ಬಿಡಿಸುವುದು

೭. ಶಂಖ ಮತ್ತು ನಫೂರಿ ನುಡಿಸುವಿಕೆ

೮. ರಂಗೋಲಿ ಕಲೆ

ಚಾಪೆ ಹೆಣೆಯುವುದು: ಸುಡುಗಾಡು ಸಿದ್ದರು ಸೇಂದಿ ಪೊರಕೆ ತಂದು ಮನೆಯಲ್ಲಿ ಹೆಂಗಸರು ಚಾಪೆ ಹೆಣೆಯುತ್ತಾರೆ. ಬಿದಿರು, ಬೆತ್ತ, ಆಪು, ಹುಲ್ಲಿನ ಕಡಿ, ತೆಂಗು, ಮತ್ತು ಈಚಲು ಗರಿಗಳನ್ನು ಬಳಸಿ ಬುಟ್ಟೆ ಮತ್ತು ಚಾಪೆ ಸಿದ್ಧಪಡಿಸುವರು. ಸುಡುಗಾಡು ಸಿದ್ಧರ ಗಂಡಸರು ಅಡವಿಗೆ ಹೋಗಿ ಸೇಂದಿ ಗಿಡದ ಎಲೆಗಳನ್ನು ಕೊಯ್ದುತಂದು ಪೊರಕೆ ಸಿದ್ಧಪಡಿಸಲು ಅನುಕೂಲವಾಗುವಂತೆ ಅವುಗಳನ್ನು ಸೀಳುತ್ತಾರೆ. ನಾಲ್ಕು ದಿವಸ ಪೋರಕೆಯನ್ನು ಬಿಸಿಲಿಗೆ ಒಣಗಿಸುತ್ತಾರೆ. ಸುಡುಗಾಡು ಸಿದ್ಧರ ಚಿಕ್ಕ ಮಕ್ಕಳನ್ನು ಚಾಪಿ ಹೆಣೆಕೆಯಲ್ಲಿ ತೊಡಗಿಸುತ್ತಾರೆ. ಚಾಪೆಗಳನ್ನು ಸಂತೆಯಲ್ಲಿ ೨೦-೩೦ ರೂಪಾಯಿಗೆ ಮಾರಾಟ ಮಾಡಿ ತಮ್ಮ ಉಪಜೀವನ ನಡೆಸುತ್ತಾರೆ. ಹರಿದ ಬಟ್ಟೆಗಳನ್ನು ಬಳಸಿ ಕೌದಿಗಳನ್ನು ಹೊಲಿಯುತ್ತಾರೆ. ಇದರಿಂದ ಬಂದ ಹಣದಿಂದ ನಿತ್ಯೋಪಜೀವನಕ್ಕೆ ಬೇಕಾಗುವು ಪದಾರ್ಥಗಳನ್ನು ಕೊಂಡುಕೊಳ್ಳುತ್ತಾರೆ.

ಬಲೆ ನೇಯುವುದು: ಸುಡುಗಾಡು ಸಿದ್ಧರು ಕೌದಿ ಹೊಲಿಯುವುದು, ಚಾಪೆ ಹೆಣೆಯುವುದು, ಜೋಳಿಗೆ ಹೊಲಿಯುವುದು, ಚಿತ್ರ ಬಿಡಿಸುವುದು, ಮುಂತಾದ ಕಲೆಗಳ ಜೊತೆಗೆ ಮೀನು ಹಿಡಿಯಲು ಬಲೆಗಳನ್ನು ನೇಯುತ್ತಾರೆ. ಮೀನಿನ ಬಲೆಗಳನ್ನು ನೇಯುವ ಕಲೆಯಲ್ಲಿ ಇವರು ನಿಪುಣರು. ಇವರು ಮೀನಿನ ಬಲೆ, ಜುಗಬಲೆ, ಮೊಲದ ಬಲೆ, ಅಳಿಲುಬಲೆ, ಉಡದ ಬಲೆ, ಪಾರಿವಾಳಬಲೆ ಹೆಣೆಯುತ್ತಾರೆ.

ಮೀನಿನ ಬಲೆ: ಮೀನು ಹಿಡಿಯುವ ಬಲೆಯನ್ನು ರೇಷ್ಮೆ ದಾರ ಮತ್ತು ಕಾಟನ ದಾರಗಳಿಂದ ನೇಯುತ್ತಾರೆ. ಅಗಲ ಎರಡುವರೆ ಮಾರು ಇದ್ದು ಉದ್ದ ನಲವತ್ತರಿಂದ ನೂರು ಮಾರು ಇರುತ್ತದೆ. ದೊಡ್ಡ ಬಲೆ ನದಿ ಹೊಳೆ ಕೆರೆಗಳಲ್ಲಿ ಹಾಕಿ ಮೀನುಗಳನ್ನು ಹಿಡಿದರೆ, ಚಿಕ್ಕ ಬಲೆಗಳನ್ನು ವಡ್ಡು, ಹಳ್ಳಗಳಲ್ಲಿಯ ಮೀನುಗಳನ್ನು ಹಿಡಿಯಲು ಬಳಸುತ್ತಾರೆ. ಕೆಲವರು ನೀರಿನಲ್ಲಿ ಕಟ್ಟಿಗೆಯ ಬೆತ್ತದಿಂದ ಶಬ್ದ ಮಾಡುತ್ತ ಬರುತ್ತಾರೆ. ಹೀಗಾಗಿ ಮೀನುಗಳು ಸಿಕ್ಕಿ ಹಾಕಿಕೊಳ್ಳುತ್ತವೆ. ಬಲೆಯಿಂದ ಮೀನುಗಳು ಹೊರಗೆ ಹೋಗದಂತೆ ಚಿಕ್ಕ ಚಿಕ್ಕ ಕಣ್ಣುಗಳಂತೆ ಮನೆಗಳನ್ನು ಮಾಡಿರುತ್ತಾರೆ. ಹೆಚ್ಚಾಗಿ ಬಲೆಗಳನ್ನು ಹೆಣೆಯಲು ರೇಷ್ಮೆ ದಾರವನ್ನು ಉಪಯೋಗಿಸಿರುವುದರಿಂದ ಬೇಗ ಹಾಳಾಗದೆ ಎಂಟು ರಿಂದ ಹತ್ತು ವರ್ಷಗಳು ಬಾಳಿಕೆಗೆ ಬರುತ್ತದೆ.

ಕೌಜುಗ ಬಲೆ: ಒಂದು ಇಂಚು ಅಗಲ ಹದಿನೈದು ಇಂಚು ಉದ್ದವಾಗಿರುವ ಹಲವು ಬಿದಿರು ಕಡ್ಡಿಗಳಿಂದ ಈ ಬಲೆ ತಯಾರಿಸುತ್ತಾರೆ. ಈ ಬಲೆಯ ಅಗಲ ಒಂದು ಇಂಚು ಅಂತರವಿರುವಂತೆ ಬಿದಿರು ಕಡ್ಡಿಗಳನ್ನು ಬಿಗಿಯಾಗಿ ರೇಷ್ಮೆ ದಾರಗಳಿಂದ ತಳುಕು ಹಾಕುತ್ತ ಹೋಗುತ್ತಾರೆ. ಐದು ಬದಿರು ಕಡ್ಡಿಗಳು ಅದ ಮೇಲೆ ಒಂದು ಅವುಗಳಗಿಂತಲೂ ಸ್ವಲ್ಪ ಎತ್ತರ ವಿರುವ ಗೂಟವಿರುತ್ತದೆ ರೇಷ್ಮ ಮತ್ತು ಹೆಂಗಸರ ಕೂದಲುಗಳಿಂದ ತಯಾರಿಸಿದ ದಾರಗಳಿಂದ ಬಿಗಿಯಾಗಿ ಕಟ್ಟುತ್ತಾರೆ. ಆ ಮೇಲೆ ಒಂದೊಂದು ಮನೆಯ ಬಿಗಿದ ದಾರದ ನಡುಭಾಗಕ್ಕೆ ಕುದುರೆಯ ಕೂದಲು ನಿಂದ ಎಳೆದು ಬಿಗಿಯಾಗಿ ಕಟ್ಟುತ್ತಾರೆ.

ಮೊಲದ ಬಲೆ: ಸುಡುಗಾಡು ಸಿದ್ಧರು ಮೊಲದ ಬಲೆಯನ್ನು ರೇಷ್ಮೆ ಹಾಗೂ ಕಾಟನ ದಾರದಿಂದ ತಯಾರಿಸುತ್ತಾರೆ ಅದು ೩೦ ಅಡಿ ಉದ್ದ ೬ ಅಡಿ ಅಗಲ ಇರುತ್ತದೆ. ಮೊಲಗಳು ವಾಸವಾಗುವ ಪ್ರದೇಶವನ್ನು ಗುರುತಿಸಿಕೊಂಡು ಆಯ ಕಟ್ಟಿನ ಜಾಗದಲ್ಲಿ ಬಲೆಕಟ್ಟುವ ವ್ಯವಸ್ಥೆ ಮಾಡುತ್ತಾರೆ. ಬಲೆಯ ಎರಡು ಕಡೆಗೂ ಕಬ್ಬಿಣದ ಗೂಟಗಳಿರುತ್ತವೆ. ಬಲೆಯ ನಡುವಿನ ಭಾಗದಲ್ಲಿ ಬಡಗಿಗಳನ್ನು ನೆಟ್ಟು ನೇರವಾಗಿ ನಿಲ್ಲುವಂತೆ ಮಾಡುತ್ತಾರೆ. ಬಲೆಯ ಎರಡೂ ಕಡೆಗೂ ಹತ್ತು ಅಡಿಗಳ ದೂರದಲ್ಲಿ ಒಬ್ಬೊಬ್ಬರು ಕುಳಿತುಕೊಳ್ಳುತ್ತಾರೆ. ವ್ಯವಸ್ಥಿತವಾಗಿ ಹೊಲಿದ ಬಲೆ ಎರಡು ವರ್ಷಗಳಿಂದ ಐದು ವರ್ಷ ವರೆಗೆ ಬಾಳಿಕೆ ಬರುತ್ತವೆ.

ಪಾರಿವಾಳ ಬಲೆ: 'ಸುಡುಗಾಡು ಸಿದ್ಧರು ಪಾರಿವಾಳ ಹಿಡಿಯುವ ಬಲೆಯನ್ನು ರೇಷ್ಮೆದಾರದಿಂದ ತಯಾರಿಸುತ್ತಾರೆ. ಇದು ಸುಮಾರು ಎಂಟು ಅಡಿ ಅಗಲ ಮತ್ತು ಎಂಟು ಅಡಿ ಉದ್ದ ಹೊಂದಿದ ಈ ಬಲೆ ಚೌಕಾಕೃತಿಯಲ್ಲಿರುತ್ತದೆ. ಗುಮ್ಮಟ ಕೋಟೆ ಕೊತ್ತಲ ಹಳೆಯ ಕಟ್ಟಡಗಳಲ್ಲಿ ವಾಸಿಸುವ ಪಾರಿವಾಳಗಳ ರಂಧ್ರಗಳಿಗೆ ಈ ಬಲೆ ಹಾಕಿ ಹಿಡಿಯುತ್ತಾರೆ ಈ ಬಲೆ ಐದರಿಂದ ಏಳು ವರ್ಷ ಬಾಳಿಕೆ ಬರುತ್ತದೆ.'

ಗುಡಾರ ಮತ್ತು ಡೇರಗಳು ಹೊಲಿಯುವುದು: 'ಒಂಬತ್ತರಿಂದ ಹನ್ನೊಂದು ಅಡಿ ಅಗಲ ಮತ್ತು ಉದ್ದವಿರುವ ಬಿರುಸಾದ ಹತ್ತಿಬಟ್ಟೆಯನ್ನು ನೆಲದ ಮೇಲೆ ಹಾಸುತ್ತಾರೆ. ಆ ಬಟ್ಟೆ ಹಾರಿ ಮುದ್ದೆ ಆಗದಂತೆ ನೀರು ಸಿಂಪಡಿಸುತ್ತಾರೆ. ಮತ್ತು ನಾಲ್ಕು ಮೂಲೆಗಳಿಗೂ ಬಟ್ಟೆ ಹಾರದಂತೆ ಕಲ್ಲು ಇಡುತ್ತಾರೆ. ಆ ಮೇಲೆ ತುಂಡು ಬಟ್ಟೆಗಳನ್ನು ಪ್ರತಿ ಅರ್ಧ ಅಡಿ ದೂರಕ್ಕೆ ಹೊಲಿಗೆ ಹಾಕುತ್ತಾರೆ. ಅದರ ಮೇಲೆ ಮೊದಲಿನ ಬಟ್ಟೆಯ ಅಳತೆಯಷ್ಟು ಇರುವ ಬಟ್ಟೆಯನ್ನು ಹೊದಿಸಿ ನಾಲ್ಕು ಇಂಚು ದೂರದಲ್ಲಿ ದಾರದಿಂದ ಹೊಲಿಯುತ್ತಾರೆ. ಗುಡಾರದ ನಾಲ್ಕು ಕಡೆಗೆ ಹಗ್ಗ ಹಾಕುವ ಪದ್ದತಿ ಇದೆ. ಏಕೆಂದರೆ ಈ ಹಗ್ಗದ ಸಹಾಯದಿಂದ ತಮ್ಮ ಗುಡಿಸಿಲಿನ ಮೇಲೆ ಹೊದಿಸಿ ಬಿಗಿಯಾಗಿ ಕಟ್ಟುವಲ್ಲಿ ಸಹಾಯವಾಗುತ್ತದೆ.

ಜೊತೆಗೆ ನಾಲ್ಕು ಮೂಲೆಯ ಅಂಚಿಗೆ ಚಿಕ್ಕ ಚಿಕ್ಕ ಹಗ್ಗಗಳಿರುತ್ತವೆ. ಈ ಹಗ್ಗಗಳು ಗುಡಿಸಲಿನ ನಾಲ್ಕು ಮೂಲೆಗೆ ಹೊಡೆದ ಕಬ್ಬಿಣದ ಗೂಟಗಳಿಗೆ ಬಿಗಿಯಾಗಿ ಕಟ್ಟುತ್ತಾರೆ. ಹರಿಯದಂತೆ ರಿಪೇರಿ ಮಾಡುತ್ತಾರೆ. ಯಾವ ಕಾರಣಕ್ಕೂ ಅದನ್ನು ಅವರು ಎಸೆಯುವುದಿಲ್ಲ. ಗುಡಾರ ಹೋಲಿಯುವುದಕ್ಕೆ ಇವರು ದೊಡ್ಡ ಸೂಜಿಯನ್ನು ಇಟ್ಟುಕೊಂಡಿರುತ್ತಾರೆ. ಈ ಗುಡಾರಗಳನ್ನು ಕೇವಲ ಗಂಡಸರು ಮಾತ್ರ ಹೊಲಿಯುತ್ತಾರೆ. ಇಂದಿನ ದಿನಗಳಲ್ಲಿ ಗುಡಾರಗಳ ಸಂಖ್ಯೆ ಕಡಿಮೆಯಾಗಿವೆ. ಕಾರಣ ಸರ್ಕಾರದ ವಿವಿಧ ಯೋಜನೆಗಳ ಮೂಲಕ ವಸತಿ ಸೌಲಭ್ಯಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಉದಾಹರಣೆಗೆ ಆಶ್ರಯ ಮನೆಗಳು, ಅಂಬೇಡ್ಕರ್ ಆಶ್ರಯ ಮನೆಗಳನ್ನು ನಿರ್ಮಾಣ ಮಾಡಿಕೊಳ್ಳುತ್ತಿದ್ದಾರೆ.'[೬]

ಕೌದಿ ಹೊಲಿಯುವುದು: 'ಸುಡುಗಾಡು ಸಿದ್ಧರ ಹೆಂಗಸರು ಚಿಕ್ಕ ಸೂಜಿಯಿಂದ ಕೌದಿಗಳನ್ನು ಹೊಲಿಯುತ್ತಾರೆ. ಅರ್ಧ ಇಂಚಿಗೆ ಒಂದರಂತೆ ದಾರಗಳಿಂದ ಹೊಲಿಗೆ ಹಾಕುತ್ತಾರೆ. ನಡುಭಾಗದಲ್ಲಿ ತಮಗೆ ಗೊತ್ತಿರುವ ಕಲಾಕೃತಿಯ ಚಿತ್ರಗಳನ್ನು ಬಿಡಿಸುತ್ತಾರೆ. ನಡುವಿನ ಭಾಗದಿಂದ ಕೌದಿಯ ಕೊನೆಯ ಅಂಚಿನವರಗೂ ವಿಶಿಷ್ಟ ರೀತಿಯಲ್ಲಿ ಹೊಲಿಗೆ ಹಾಕುತ್ತಾರೆ. ಕೊನೆ ಕೊನೆಗೆ ಹಕ್ಕಿ ಮತ್ತು ಕವುಜುಗಳ ಕಾಲ ಬೆರಳಿನ ಚಿತ್ರಗಳನ್ನು ತೆಗೆಯುವುದು ವಿಶಿಷ್ಟವಾಗಿದೆ. ಮೊದಲೇ ನಾಲ್ಕು ದಂಡಿ ಹೊಲಿದು ಕೊನೆಗೆ ಹಂತ ಹಂತವಾಗಿ ಕೌದಿಯ ಎಲ್ಲ ಭಾಗಗಳಿಂದ ಸುತ್ತ ಹಾಕುತ್ತ ಬಟ್ಟೆ ಹಚ್ಚುತ್ತಾರೆ.'

ಆಧುನಿಕ ಜೀವನದಲ್ಲಿ ಸುಡುಗಾಡು ಸಿದ್ಧರು ಕೌದಿ ಹೊಲಿಯುವುದನ್ನು ಸ್ವಲ್ಪ ಕಡಿಮೆ ಮಾಡಿದ್ದಾರೆ. ಕಾರಣ ಕಂಪನಿಯಲ್ಲಿ ಕಾಟನ್ ಬಟ್ಟೆಯನ್ನು ತಯಾರಿಸಿ ಹಾಸಿಗೆ, ರಗ್ಗೂ, ಜಮಕನ, ಖಾದಿ, ಭಂಡಾರದ ಕಾರ್ಖಾನೆಗಳಿಂದ ಹೊಸ ಹೊಸ ಹೊದಿಕೆಗಳನ್ನು ಪಡೆದುಕೊಳ್ಳುತ್ತ ಹೊಸ ಬದಲಾವಣೆ ಹೊಂದುತ್ತಿದ್ದಾರೆ.

ಜೋಳಿಗೆ ಹೊಲಿಯುವುದು: 'ಸುಡುಗಾಡು ಸಿದ್ಧರು ಜೋಳಿಗೆಯನ್ನು ತಮ್ಮ ದೇವರೆಂದು ಭಾವಿಸುತ್ತಾರೆ. ಗಟ್ಟಿಯಾದ ಕಾವಿ ಬಟ್ಟೆಯನ್ನು ತೆಗೆದುಕೊಂಡು ಎಲ್ಲಾ ಕಡೆಗೂ ಆರು ಅಡಿ

ಇರುವಂತೆ ಕತ್ತರಿಸುತ್ತಾರೆ. ಆ ಬಟ್ಟೆಯ ನಡುವಿನ ಭಾಗದಲ್ಲಿ ಗಟ್ಟಿಯಾದ ಬಟ್ಟೆಯನ್ನು ಹಾಕಿ ಹೊಲಿಯುತ್ತರೆ. ಹೊಲಿಯುವಾಗ ಅರ್ಧ ಇಂಚಿಗೆ ಒಂದು ಎಳೆಯಂತೆ ಹೊಲಿಯುವ ವಿಧಾನವನ್ನು ಅನುಸರಿಸುತ್ತಾರೆ. ಈ ರೀತಿಯಲ್ಲಿ ಹೊಲೆದ ಜೋಳಿಗೆಯ ನಾಲ್ಕು ಅಂಚುಗಳನ್ನು ಉತ್ತರದಲ್ಲಿ ಜೋಡಿಸುತ್ತಾರೆ. ಆ ಮೇಲೆ ನಾಲ್ಕು ಭಾಗಗಳಿಂದಲೂ ಒಂದು ಇನ್ನೊಂದನ್ನು ಕೂಡಿಸಿ ಹೊಲಿಯುತ್ತಾರೆ. ಹೀಗೆ ಹೊಂದಿಸಿರುವುದರಿಂದ ಜೋಳಿಗೆಯಲ್ಲಿ ನಾಲ್ಕು ಮನೆಗಳಾಗುವಂತೆ ಹೊಲಿಯುತ್ತಾರೆ. ಇಷ್ಟೆ ಆದ ಮೇಲೆ ಜೋಳಿಗೆಯ ಉತ್ತರದ ಭಾಗದಲ್ಲಿ ಒಂದು ಗಟ್ಟಿ ದಾರ ಹಾಕಿರುತ್ತಾರೆ ಈ ಹಗ್ಗದಲ್ಲಿ ಬಿದಿರಿನ ಗಳವನ್ನು ಹಾಕುತ್ತಾರೆ ಇಂತಹ ಎರಡು ಜೋಳಿಗೆಗಳು ಅವರಲ್ಲಿ ಕಡ್ಡಾಯವಾಗಿರುತ್ತವೆ. ಈ ಜೋಳಿಗೆ ಹತ್ತು ವರ್ಷ ಬಾಳಿಕೆ ಬರುತ್ತದೆ. ಹಬ್ಬ ಹುಣಿಮೆ ಶುಭ ದಿವಸಗಳಂದು ಈ ಜೋಳಿಗೆಗೆ ವಿಶೇಷ ಪೂಜೆ ಸಲ್ಲಿಸಿ ಕೈ ಮುಗಿದು ತಮ್ಮ ಭಕ್ತಿಯನ್ನು ವ್ಯಕ್ತಪಡಿಸುತ್ತಾರೆ.'

ಸುಡುಗಾಡು ಸಿದ್ಧರು ಪ್ರಾಚೀನ ಕಾಲದಿಂದ ಜೋಳಿಗೆ ಹೊಲಿಯುವುದನ್ನು ರೂಢಿಸಿಕೊಂಡಿದ್ದಾರೆ. ಈ ಪದ್ದತಿ ಸ್ವಲ್ಪ ಇಂದು ಆಗಿದೆ.

ಶಂಖ ಮತ್ತು ನಘೂರಿ: ಸುಡುಗಾಡು ಸಿದ್ಧರಲ್ಲಿ ಶಂಖ ಕಾಯಕ ಮತ್ತು ಜಂಗಿನ ಕಾಯಕಗಳೆಂದು ಎರಡು ಪ್ರಕಾರಗಳಿವೆ. ಶಂಖ ಹಿಡಿದು ಭಿಕ್ಷೆ ಬೇಡುವ ಸಿದ್ಧರು ಯಾವ ಕಾರಣಕ್ಕೂ ತನ್ನ ಕೈಯಲ್ಲಿ ನಘೂರಿ ಹಿಡಿದು ಭೀಕ್ಷೆ ಬೇಡವುದಿಲ್ಲ. ಹಾಗೆಯೇ ಶಂಖ ಹಿಡಿದರೆ ಭಿಕ್ಷೆ ಬೇಡುವುದಿಲ್ಲ. ಆದರೆ ನಘೂರಿ ಹಿಡಿದು ಭಿಕ್ಷೆ ಬೇಡುವವರು ಮೊದಲ ಆದ್ಯತೆ ಪಡೆದರೆ ನಂತರದ ಸ್ಥಾನವನ್ನು ಶಂಖ ಹಿಡಿದು ಭಿಕ್ಷೆ ಬೇಡುವವರು ಪಡೆದಿದ್ದಾರೆ. ಹುಣ್ಣಿಮೆ, ಅಮಾವಾಸ್ಯೆ, ಹಬ್ಬ-ಹರಿದಿನ, ಜಾತ್ರೆ ಉತ್ಸವಗಳಲ್ಲಿ ಈ ಎರಡೂ ವಾದ್ಯಗಳಿಗೆ ವಿಶೇಷ ಪೂಜೆ ಸಲ್ಲಿಸುತ್ತಾರೆ. ಶಂಖ ಮತ್ತು ನಘೂರಿ ವಾದ್ಯ ಊದುವುದರಿಂದ ಗ್ರಾಮಕ್ಕೆ ಬಡಿದುಕೊಂಡಿರುವ ಭೂತ, ಪ್ರೇತಗಳು ಓಡಿಹೋಗುತ್ತವೆ ಎಂಬುದು ಅವರ ನಂಬಿಕೆಯಾಗಿದೆ. ಹೀಗಾಗಿ ಸುಡುಗಾಡು ಸಿದ್ಧರು ಶಂಖ ಮತ್ತು ನಘೂರಿ ವಾದ್ಯದ ಪಾವಿತ್ರ್ಯತೆಯನ್ನು ಉಳಿಸಿಕೊಂಡು ಬಂದಿದ್ದಾರೆ.

ಆಧುನಿಕ ಯುಗದಲ್ಲಿ ಶಂಖ ಮತ್ತು ನಘೂರಿ ವಾದ್ಯಗಳ ಬಗ್ಗೆ ಜನರು ನಂಬಿಕೆ ಕಳೆದುಕೊಂಡಿದ್ದಾರೆ. ಏಕೆಂದರೆ ವಿಜ್ಞಾನ ಮತ್ತು ತಂತ್ರಜ್ಞಾನ ಬಳಕೆಯ ಯುಗದಲ್ಲಿ ತಾಂತ್ರಿಕ ಶಿಕ್ಷಣ ದಿಂದ ಬುದ್ದಿಜೀವಿಯಾದ ಮಾನವ ಅದನ್ನು ಇಂದಿನ ದಿನಗಳಲ್ಲಿ ನಂಬುತ್ತಿಲ್ಲ.

ರಂಗೋಲಿ: 'ಸುಡುಗಾಡು ಸಿದ್ಧರ ಹೆಂಗಸರು ಪ್ರತಿನಿತ್ಯ ಅಲ್ಲದಿದ್ದರೂ ಹಬ್ಬ-ಹರಿದಿನ, ಜಾತ್ರೆ ಉತ್ಸವಗಳಲ್ಲಿ ತಮ್ಮ ಗುಡಿಸಿಲುಗಳನ್ನು ಗೋಮಯದಿಂದ ಸಾರಿಸಿ ಕುಂಕುಮ, ಅರಿಷಿಣ ಮತ್ತು ಬಿಳಿಯ ಕಲ್ಲಿನ ಸಣ್ಣ ಪುಡಿಗಳಿಂದ ರಂಗೋಲಿ ಹಾಕುತ್ತಾರೆ. ರಂಗವಲ್ಲಿ ಪುರಾತನ

ಕಾಲದಿಂದಲೂ ಗೃಹಾಲಂಕಾರದ ಒಂದು ಕಲೆಯಾಗಿದೆ. ಸುಡುಗಾಡು ಸಿದ್ಧರು ದೇವತೆಗೆ ಕುರಿ ಮತ್ತು ಕೋಳಿಯನ್ನು ಬಲಿ ಕೊಡುವಾಗ ರಂಗೋಲಿ ಬರೆಯುತ್ತಾರೆ.

ಆಧುನೀಕರಣಕ್ಕೆ ಪ್ರಭಾವಿತರಾಗಿ ಪಟ್ಟಣಗಳಲ್ಲಿ ವಾಸಿಸುವುದರಿಂದ ನೆರೆಹೊರೆಯವರ ಪ್ರಭಾವದಿಂದಾಗಿ ಸುಡುಗಾಡು ಸಿದ್ಧರ ಸಮುದಾಯವು ರಂಗೋಲಿಯನ್ನು ಮನೆಯ ಹೊಸ್ತಿಲ ಮುಂದೆ ಹಾಕುತ್ತಿರುವುದು ಕಂಡುಬರುತ್ತದೆ. ಅದರಲ್ಲಿಯೂ ಕಲಿತವರು ದಿನಾಲೂ ರಂಗೋಲಿ ಬರೆಯುವುದನ್ನು ನೋಡಿದರೆ ಸುಡುಗಾಡು ಸಿದ್ದರೂ ಕೂಡಾ ನಾಗರಿಕತೆಯತ್ತ ವಾಲುತ್ತಿದ್ದಾರೆಂಬುದು ಖಚಿತವಾಗುತ್ತದೆ. ಒಟ್ಟಾರೆಯಾಗಿ ಭಿಕ್ಷಾಟನೆ ಮಾಡುವ ಸುಡುಗಾಡು ಸಿದ್ಧರೂ ಕೂಡಾ ರಂಗೋಲಿಯನ್ನು ತಮ್ಮ ಕಲೆಗಳಲ್ಲಿ ಅಳವಡಿಸಿಕೊಂಡಿದ್ದಾರೆಂಬುದು ಗಮನಾರ್ಹ ಬೆಳವಣಿಗೆ ರಂಗೋಲಿ ಹಾಕುವುದುರಿಂದ ಮನೆಯಲ್ಲಿ ಯಾವುದೇ ಒಂದು ಇರುವೇ ಈ ರಂಗೋಲಿನೋಡಿ ಮನೆಯ ಒಳಕ್ಕೆ ಪ್ರವೇಶಕ್ಕೆ ಬರವುದಿಲ್ಲ. ಇದು ಹಿಂದಿನ ಪರಂಪರೆಯ ಜ್ಞಾನವಾಗಿದೆ ರಾಮ, ಲಕ್ಷ್ಮಣರು, ಸೀತೆಯನ್ನು, ಕಾಡಿನಲ್ಲಿ ಬಿಟ್ಟು ಹೋದ್ದಾಗ ಗಡಿ ರೇಖೆ ಹಾಕಿದ್ದ ಹಾಗೆಯ ರಂಗೋಲಿ ಹಾಕುವುದು ವಾಡಿಕೆ ಇದೆ.'[೭]

ನವಿಲುಗರಿ ಇಡುವ ಕಲೆ: ಉತ್ತಮ ನವಿಲು ಗರಿಗಳನ್ನು ಖರೀದಿಸುತ್ತಾರೆ. ಒಂದು ಮೊಳ ಉದ್ದದ ನವಿಲು ಗರಿಗಳನ್ನು ಎರಡು ಭಾಗವಾಗಿ ಕತ್ತರಿಸುತ್ತಾರೆ. ಸುಮಾರು ಇಪ್ಪತ್ತರಿಂದ ಮೂವತ್ತು ನವಿಲು ಗರಿಗಳು ಕಣ್ಣುಗಳಿಂದ ಕೂಡಿದ್ದನ್ನು ಒಂದು ಕಡೆಗೆ ಬೇರ್ಪಡಿಸುತ್ತಾರೆ. ಹೀಗೆ ಕತ್ತರಿಸಿದ ಎಲ್ಲಾ ನವಿಲು ಗರಿಗಳನ್ನು ಸೀಳುತ್ತಾರೆ. ಆ ಮೇಲೆ ಅವಕ್ಕೆ ಬಣ್ಣ ಬಣ್ಣದ ನೂಲಿನ ಗೊಂಡೆಗಳನ್ನು ಕಟ್ಟಿ ತಮ್ಮ ತಲೆಯ ಮೇಲಿರುವ ಕಿರೀಟದ ಮೆಲೆ ಇಟ್ಟುಕೊಳ್ಳುತ್ತಾರೆ.

ಹಚ್ಚೆ: 'ಜನಪದ ಸಾಹಿತ್ಯ ಕಲೆಗಳಲ್ಲಿ ಹಚ್ಚೆ ಪ್ರಮುಖವಾದ ಕಲೆಯಾಗಿದೆ. ಈ ಕಲೆ ಆದಿಮಾನವನಿಂದ ಹಿಡಿದು, ಆಧುನಿಕ ಮಾನವನವರೆಗೂ ಹಂತ ಹಂತವಾಗಿ ಮತ್ತು ಆಯಾ ಜನಾಂಗದ ಧಾರ್ಮಿಕ ಹಿನ್ನಲೆಯೊಳಗೆ ಉಳಿದು ಬೆಳೆದುಕೊಂಡು ಬಂದಿರುವ ಕಲೆಯಾಗಿದೆ. ಭಾರತೀಯ ಸಂಸ್ಕೃತಿಯಲ್ಲಿ ಮುತ್ತೈದೆಯರ ಸೌಭಾಗ್ಯಗಳಲ್ಲಿ ಇದೂ ಕೂಡಾ ಒಂದಾಗಿದೆ ಸೌಂದರ್ಯ ಪ್ರಜ್ಞೆ ಮಾನವನಲ್ಲಿ ಹೆಚ್ಚುತ್ತ ಹೋದಂತೆ ಹೆಚ್ಚ ಕಲೆ ಹೆಚ್ಚು ವೈವಿದ್ಯತೆಯನ್ನು ಪಡೆಯಲು ಪ್ರಾರಂಭಿಸಿತು ಹಿಂದು ಸಂಸ್ಕೃತಿಯಲ್ಲಿ ಈ ಕಲೆಗೆ ತುಂಬ ಗೌರವವಿದೆ.

ಪ್ರಸ್ತುತ ದಿನಗಳಲ್ಲಿ ಹಚ್ಚೆಯನ್ನು ದೇಹದ ಎದೆ ಭಾಗ, ಕೈ ಕಾಲುಗಳ ಮೇಲೆ ಹಚ್ಚ ಹಾಕಿಸಿಕೊಳ್ಳತ್ತಾರೆ. ಇಂದು ಆಧುನಿಕ ವ್ಯವಸ್ಥೆಯಲ್ಲಿ ಈ ಪದ್ದತಿ ಅನುಕೂಲವು ಮತ್ತು ಅನಾನೂಕಲವು ಇರುವುದನ್ನು ಕಾಣುತ್ತೇವೆ. ಏಕೆಂದರೆ ಕೈಗೆ ಸೂಜಿ ತೆಗೆದುಕೊಂಡು ಚುಚ್ಚುತ್ತಾರೆ. ಅದು ಮತ್ತೊಂಬರಿಗೂ ಹಾಗೆ ಚುಚ್ಚತ್ತಾರೆ ಇದರಿಂದ ಅವನಿಗೆ ಏನಾದರೂ ಕಾಯಿಲೆ ಇದರರ ಆ ಕಾಯಿಲೆ ಮತ್ತೊಂಬರಿಗೂ ಹಡುತ್ತದೆ. ಹೀಗಾಗಿ ಈ ವ್ಯವಸ್ಥೆ ಸ್ವಲ್ಪ

ಕಡಿಮೆಯಾಗಿದೆ. ಅನೇಕ ರೋಗಗಳಿಗೆ ತುತಾಗಿದ್ದಾರೆ ಪ್ರಚಲಿತ ದಿನಪತ್ರಿಕೆಗಳಲ್ಲಿ ಪ್ರಕಟವಾಗಿರುವ ಸುದ್ದಿಗಳಿಂದ ತಿಳಿದುಬರುತ್ತದೆ.ಆದಿ ಮಾನವನ ಬದುಕಿನ ಇತಿಹಾಸವನ್ನು ಗಮನಿಸಿದಾಗ ಅವನು ಅನಾದಿಕಾಲದಿಂದ ಆಧುನಿಕ ಕಾಲದವರೆಗೆ ನಡೆದುಕೊಂಡು ಬಂದ ದಾರಿಯನ್ನು ಗಮನಿಸಿದಾಗ ಕಾಲ ಕಾಲಕ್ಕೆ ಆದ ಬದಲಾವಣೆಗಳು ವೈಜ್ಞಾನಿಕ ಅನ್ವೇಷಣೆಗಳ ಮೂಲಕ, ಸಾಂಸ್ಕೃತಿಕ, ಆರ್ಥಿಕ ಮತ್ತು ಶೈಕ್ಷಣಿಕವಾಗಿ ಮಾನವ ಮುಂದುವರದ ಹಿಂದೆ ಹತ್ತು ಹಲವಾರು ಮುಖಗಳ ಕಂಡು ಬರುತ್ತವೆ. ಆದಿಮಾನವ ಬೇಟೆ ಕೃಷಿ ಪಶುಪಾಲನೆ ಹೀಗೆ ಒಂದು ಹಂತದಿಂದ ಇನ್ನೊಂದು ಹಂತವನ್ನು ತಲುಪುವಾಗ ಅನೇಕ ಬದಲಾವಣೆಗೆ ಒಳಗಾಗಿದ್ದನು ಮಾನವನ ಬದುಕಿನಲ್ಲಿ ಬದಲಾವಣೆ ಎಂಬುದು ಇದೊಂದು ಸಹಜ ಕ್ರಿಯೆ ಬದಲಾವಣೆಗೆ ಸತತ ಪರಿಶ್ರಮ ಶೋಧನೆ ಅವಶ್ಯವಿರುತ್ತದೆ.[೮]

ಅಡಿಟಿಪ್ಪಣಿಗಳು

೧. ನಾಗರಾಜ್ಯ ಮೈ.ನ., ೧೯೮೫, ಸೋಲಿಗರು, ಪುಟ ಸಂಖ್ಯೆ - ೧೫೦

೨. ಪಿ.ಕೆ. ಖಂಡೋಬಾ, ೧೯೯೧, ಕರ್ನಾಟಕ ಲಂಬಾಣಿಗಳು ಒಂದು ಸಾಂಸ್ಕೃತಿಕ ಅಧ್ಯಯನ, ಪುಟ ಸಂಖ್ಯೆ–೨೦೦

೩. ಪಿ.ಕೆ. ಖಂಡೋಬಾ, ೧೯೯೩, ಸುಡುಗಾಡು ಸಿದ್ಧರ ಸಂಸ್ಕೃತಿಕ, ಪುಟ ಸಂಖ್ಯೆ–೧೨೩

೪. ಅದೇ ಪುಟ ಸಂಖ್ಯೆ–೧೨೩

೫. ಪಿ.ಕೆ. ಖಂಡೋಬಾ, ೧೯೯೧, ಕರ್ನಾಟಕ ಲಂಬಾಣಿಗಳು ಒಂದು ಸಾಂಸ್ಕೃತಿಕ ಅಧ್ಯಯನ, ಪುಟ ಸಂಖ್ಯೆ–೨೧೧

೬ ಪಿ.ಕೆ. ಖಂಡೋಬಾ, ೧೯೯೩, ಸುಡುಗಾಡು ಸಿದ್ಧರ ಸಂಸ್ಕೃತಿಕ, ಪುಟ ಸಂಖ್ಯೆ–೧೨೪

೭ ಹೂಗಾರ ಎಸ್.ಕೆ, ೧೯೭೭, ಕಲೆ ಮತ್ತು ಹಬ್ಬ, ಪುಟ ಸಂಖ್ಯೆ ೩೪–೩೫

೮. ರಾಮೇಶ್ವರ ಎ.ಕೆ, ೧೯೮೪, ಹಣಚಿ ಬಟ್ಟಿನ ಕೈ, ಪುಟ ಸಂಖ್ಯೆ–೬೩

೯. ಬಿ.ನಾಯಕ ಬೆನಕನಹಳ್ಳಿ, ೧೯೮೬, ಪುಟ ಸಂಖ್ಯೆ–೧೩೬

❑❑❑

ಅಧ್ಯಾಯ ಆರು

ಸಮುದಾಯದ ಆರ್ಥಿಕತೆ

ಅಧ್ಯಾಯ ಆರು

ಸಮುದಾಯದ ಆರ್ಥಿಕತೆ

ಸಾಮಾಜಿಕ ಸ್ಥಿತಿಗತಿ:

'ಸುಡುಗಾಡು ಸಿದ್ಧರು ಮೂಲದಲ್ಲಿ ಗುಡ್ಡ-ಬೆಟ್ಟ, ಅರಣ್ಯಗಳಲ್ಲಿ ವಾಸಿಸುತ್ತಿದವರು. ಹೀಗಾಗಿ ಇವರಿಗೆ ಕಾಡುಸಿದ್ಧರೆಂದು ಕರೆಯುತ್ತಾರೆ. ಕ್ರಮೇಣ ಹಲವು ವರ್ಷಗಳು ಗತಿಸಿದ ಮೇಲೆ ಸ್ಮಶಾನ ಕಾಯುವ ಕೆಲಸವನ್ನು ಕೈಗೊಂಡರು. ಸದಾ ಅಲೆಮಾರಿಗಳಿದ್ದು ಇವರು ಭಿಕ್ಷೆ ಬೇಡುತ್ತಾರೆ. ವಾರದಲ್ಲಿ ಮೂರು-ನಾಲ್ಕು ಸಲ ಬೇಟೆಗೆಂದು ಕಾಡಿಗೆ ಹೋಗುತ್ತಾರೆ. ಭಿಕ್ಷೆ ಬೇಡಿ ತಂದು ಹೊಟ್ಟೆ ತುಂಬಿಸಿಕೊಳ್ಳುತ್ತಾರೆ. ದವಸ ಧಾನ್ಯವನ್ನು ದೊಡ್ಡ ಜೋಳಿಗೆ ಅಥವಾ ತಗಡಿನ ಡಬ್ಬಗಳಲ್ಲಿ ತುಂಬಿಟ್ಟುಕೊಳ್ಳುತ್ತಾರೆ. ಸಂಚಾರದ ಸಮಯದಲ್ಲಿ ಮಣ್ಣಿನ ಮಡಿಕೆಯನ್ನು ಬಳಸುವುದಿಲ್ಲ, ಅವಸರದಲ್ಲಿ ಅವು ಒಡೆದು ಹಾಳಾಗುತ್ತದೆ ಎಂಬುದೇ ಇದಕ್ಕೆ ಕಾರಣವಾಗಿದೆ. ಅಲ್ಲದೆ ಒಡೆದ ಮಡಿಕೆ ಅಪಶಕುನವೆಂದು ನಂಬಿಕೊಂಡಿದ್ದಾರೆ. ತಿಂಡಿ ಪದಾರ್ಥವನ್ನು ಕಬ್ಬಿಣದ ಬುಟ್ಟಿಯಲ್ಲಿ ಇಲ್ಲವೆ ಬಿದಿರಿನ ಬುಟ್ಟಿಯಲ್ಲಿ ಇಟ್ಟುಕೊಳ್ಳುತ್ತಾರೆ. ತೀರ ಬಡವರು ಜೋಳಿಗೆಯಲ್ಲಿ ಹಾಕಿ ಗುಡಿಸಲಿನ ಒಂದು ಗಳಕ್ಕೆ ನೇತು ಹಾಕುತ್ತಾರೆ.'[೧]

ತಂದೆ ತಾಯಿ ಮಕ್ಕಳೆಲ್ಲ ಒಂದೇ ಗುಡಿಸಲಿನಲ್ಲಿ ವಾಸಿಸುತ್ತಾರೆ. ಮಲಗುವುದಕ್ಕಾಗಿ ಚಾಪೆ, ಮತ್ತು ಗೋಣಿ, ಚೀಲಗಳನ್ನು ಬಳಸುತ್ತಾರೆ. ಕೌದಿಯನ್ನು ರಾತ್ರಿ ಮಲಗುವಾಗ ಹೊದ್ದುಕೊಳ್ಳುತ್ತಾರೆ. ಹೊಸದಾಗಿ ಮದುವೆ ಮಾಡಿಕೊಂಡವರು ಹೊಸ ಗುಡಿಸಲು ಹಾಕಿಕೊಂಡು ಜೀವನ ಸಾಗಿಸುತ್ತಾರೆ. ಜ್ವರ-ಜಡ್ಡು ಬಂದವರು ಗುಡಿಸಲಿನ ಒಂದು ಮೂಲೆಯಲ್ಲಿ ಮಲಗುತ್ತಾರೆ. ಸ್ನಾನ ಮಾಡುವುದಕ್ಕಾಗಿ ಬಚ್ಚಲಿರುತ್ತದೆ. ಆದರೆ ಸುತ್ತ ಸೇಂದಿ ಇಲ್ಲವೆ ಲಕ್ಕಿ ಕಟ್ಟಿಗಗಳನ್ನು ನೆಟ್ಟು ಮರೆ ಮಾಡಿಕೊಂಡಿರುತ್ತಾರೆ.

ಗಂಡಸರು ತೆರೆದ ಅಂಗಳದಲ್ಲಿಯೇ ಸ್ನಾನ ಮಾಡುತ್ತಾರೆ. ಸೇಂದಿ ಪರಕಿಯಿಂದ ತಯಾರಿಸಿದ ಗೂಡಿನಲ್ಲಿ ಕೋಳಿಗಳನ್ನು ಬಿಡುತ್ತಾರೆ. ಕುರಿ ಮತ್ತು ಆಡುಗಳನ್ನು ಗುಡಿಸಲಿನ ಹೊರಗೆ ಕಟ್ಟಿಕೊಳ್ಳುತ್ತಾರೆ. ದಿನಾಲು ಉಪಯೋಗಿಸುವ ಬಟ್ಟೆಗಳನ್ನು ಹಳೆಯ ಅರಿವೆಯ ಜೋಳಿಗೆಯಲ್ಲಿ ಹಾಕಿ ಗುಡಿಸಲಿನ ಗಳಕ್ಕೆ ತೂಗಿ ಬಿಡುತ್ತಾರೆ. ಗುಡಿಸಲಿನ ಒಳಗೆ ಎಡ ಪಕ್ಕದ ಹಸೆಯ ಮೇಲೆ ಪೋಚಮ್ಮ, ಹುಲಿಗೆಮ್ಮ, ಗಾಳೆಮ್ಮ, ಮಹಾಂಕಾಳಿ ದೇವತೆಯ ಮೂರ್ತಿಗಳಿರುತ್ತವೆ. ಇವುಗಳ ಜೊತೆಗೆ ಶಿವ, ರೇವಣಸಿದ್ಧರ ಮೂರ್ತಿಗಳನ್ನು ಇಟ್ಟು ಶುಕ್ರವಾರ, ಮಂಗಳವಾರ, ಸೋಮವಾರಗಳೆಂದು ಪೂಜಿಸುತ್ತಾರೆ. ಹುಣ್ಣಿಮೆ ಅಮವಾಸ್ಯೆ, ಹಬ್ಬ-ಹರಿದಿನಗಳೆಂದು ವಿಶೇಷ ಪೂಜೆ ಸಲ್ಲಿಸಿ ನೈವೇದ್ಯ ಕೊಡುತ್ತಾರೆ. ವಿಶೇಷವಾಗಿ ಸುಡುಗಾಡು ಸಿದ್ಧರು ನಡೆದುಕೊಳ್ಳುವ ಹುಲಿಗೆಮ್ಮ, ವಿಠೋಬಾ, ಪೋಚಮ್ಮ ದೇವತೆಗಳ ಪೂಜೆಗೆ ತಮ್ಮ ಜಾತಿಯವರನ್ನೇ

ಪೂಜಾರಿಗಳೆಂದು ನಿಯಮಿಸಿಕೊಂಡಿರುತ್ತಾರೆ. ದೇವರ ಗುಡಿಯ ಮುಂದೆ ಕಾವಿ ಇಲ್ಲವೆ ಕೆಂಪು ಧ್ವಜವನ್ನು ಹಾರಿಸುತ್ತಾರೆ.

ನೆರಳಿಗಾಗಿ ಬೇವು ಮತ್ತು ಆಲದ ಗಿಡಗಳನ್ನು ಬೆಳೆಸಿಕೊಂಡಿರುತ್ತಾರೆ. ಅಮವಾಸ್ಯೆ, ಹುಣ್ಣಿವೆ ಮತ್ತು ಜಾತ್ರೆಗಳೆಂದು ದೇವರಿಗೆ ಕುರಿ-ಕೋಳಿ ಬಲಿ ಕೊಡುವ ಪದ್ಧತಿ ಅವರಲ್ಲಿದೆ. ದೇವರನ್ನು ಶಾಂತಿ ಮಾಡಿದರೆ ತಮಗೆ ಯಾವುದೇ ಕಷ್ಟಗಳು ಬರುವುದಿಲ್ಲವೆಂದು ನಂಬಿಕೊಂಡಿದ್ದಾರೆ. ಮಾಂಸಾಹಾರಿ ದೇವತೆಗಳಿಗೆ ಉಪ್ಪು ಬೆರೆಸದ ಅಡುಗೆಯ ನೈವೇದ್ಯ ಕೊಟ್ಟರೆ ಸಸ್ಯಹಾರಿ ದೇವತೆಗಳಿಗೆ ಅನ್ನ ಮೊಸರು ಕೊಡುವ ಪದ್ಧತಿ ಅವರಲ್ಲಿದೆ.

'ಸುಡುಗಾಡು ಸಿದ್ಧರಲ್ಲಿ ವಿಭೂತಿ, ಶಂಖ, ರುದ್ರಾಕ್ಷಿ ಮತ್ತು ಪಾರಿಯವರೆ ಬೆಡಗಿನ ಹಿರಿಯರು ನಾಯಕರೆಂದು ಕರೆಯಿಸಿಕೊಳ್ಳುತ್ತಾರೆ. ಇವರ ನೇತೃತ್ವದಲ್ಲಿಯೇ ಎಲ್ಲಾ ಸಮಸ್ಯೆಗಳು ಇತ್ಯರ್ಥವಾಗುತ್ತವೆ. ಅದೇ ಪ್ರಕಾರ ಕಲಬುರಗಿ ಮತ್ತು ಬೀದರ ಜಿಲ್ಲೆಯ ಪ್ರದೇಶದಲ್ಲಿ ವಾಸಿಸುವ ಸುಡುಗಾಡು ಸಿದ್ಧರಲ್ಲಿ ಕೊಂಡ ಮನೆತನದವನು ನಾಯಕನೆಂದು ಕರೆಯಿಸಿಕೊಳ್ಳುತ್ತಾನೆ. ಅದೇ ರೀತಿಯಾಗಿ ಹರಪ್ಪನಳ್ಳಿ ಕಟ್ಟೆಯ, ವ್ಯಾಪ್ತಿಯಲ್ಲಿ ಬರುವ ಸುಡುಗಾಡು ಸಿದ್ಧರ ನಾಯಕನಿಗೆ ಗುರು ಎಂದು ಕರೆದರೆ ಗೋಲಕುಂಡ ಕಟ್ಟೆಯ ವ್ಯಾಪ್ತಿಯಲ್ಲಿ ಬರುವ ನಾಯಕನಿಗೆ ಸರಪಂಚನೆಂದು ಕರೆಯುತ್ತಾರೆ. ಸುಡುಗಾಡು ಸಿದ್ಧರು ನಾಯಕನು ಹೇಳಿದ ಮಾತುಗಳೇ ಕೊನೆ. ಅವನ ಆಜ್ಞೆಯನ್ನು ಉಲ್ಲಂಘಿಸಿದರೆ ಉಗ್ರ ಶಿಕ್ಷೆ ಮತ್ತು ದಂಡಕ್ಕೆ ಗುರಿಯಾಗಬೇಕಾಗುತ್ತದೆ. ತಮ್ಮ ಸುಖ ದುಃಖವನ್ನು ವಿಚಾರಿಸಿ ನ್ಯಾಯ ಕೂಡುವವನೇ ಅವನಾಗಿರುವುದರಿಂದ ಅವರು ಅವನನ್ನು ದೇವರ ದೂತನೆಂದೇ ಪರಿಗಣಿಸುತ್ತಾರೆ.'

ಅರ್ಥಿಕ ವ್ಯವಸ್ಥೆ:

'ಸುಡುಗಾಡು ಸಿದ್ಧರ ಮೂಲ ವೃತ್ತಿ ಭಿಕ್ಷೆ ಬೇಡುವುದಾಗಿದೆ. ಪ್ರದೇಶದಿಂದ ಪ್ರದೇಶಕ್ಕೆ ಹೋಗಿ ಗ್ರಾಮಗಳಲ್ಲಿ ಸುತ್ತಾಡಿ ಭಿಕ್ಷೆ ಪಡೆದುಕೊಳ್ಳುತ್ತಾರೆ. ಅವರು ಭಿಕ್ಷೆಯನ್ನೇ ಅವಲಂಬಿಸಿದ್ದಾರೆ. 'ಸಿಕ್ಕರೆ ಊಟ ಸಿಗದಿದ್ದರೆ ಉಪವಾಸ' ಎಂದು ಅವರು ನುಡಿಯುತ್ತಾರೆ. ಉಪವಾಸ ಉಳಿಯುವುದನ್ನು ತಪ್ಪಿಸಿಕೊಳ್ಳಲು ಸಿದ್ಧರ ಹೆಂಗಸರು ಮತ್ತು ಚಿಕ್ಕವರು ಚಾಪಿ ಹೆಣಿಯುವ ವೃತ್ತಿಯಲ್ಲಿ ತೊಡಗಿದ್ದಾರೆ. ವಾರಕ್ಕೆ ನಾಲ್ಕೈದು ಚಾಪೆಗಳನ್ನು ಹೆಣೆದು ಸಮೀಪದ ಸಂತೆಯಲ್ಲಿ ಮಾರಿ ಅವಶ್ಯ ವಸ್ತುಗಳನ್ನು ತೆಗೆದುಕೊಳ್ಳುತ್ತಾರೆ. ಇವರ ಮಕ್ಕಳು ಮರಿಗಳನ್ನು ಕಂಡಾಗ ಅವರು ತೀರ ಬಡವರೆಂಬುದು ಗೋಚರಿಸುತ್ತದೆ. ಜೊತೆಗೆ ಹರಪ್ಪನ ಹಳ್ಳಿಯ ಕಟ್ಟೆಯ ಅಧೀನದಲ್ಲಿ ಬರುವ ಸುಡುಗಾಡು ಸಿದ್ಧರು ಸೇಡಂ ತಾಲೂಕಿನ ಗುಡ್ಡ, ಕಪ್ಪತ್ತು ಗುಡ್ಡ ಆಯಾ ಪ್ರದೇಶಗಳಲ್ಲಿರುವ ಔಷಧ ಗಿಡಮೂಲಿಕೆಗಳನ್ನು ತಂದು ಹಳ್ಳಿಯ ಜನರಿಗೆ ಮಾರಾಟ ಮಾಡುತ್ತಾರೆ. ಆಂಧ್ರಪ್ರದೇಶದಲ್ಲಿರುವ ಶೇಷನಬಾದ ಗುಡ್ಡದಿಂದ ಔಷಧ ಗಿಡಗಳನ್ನು ಕತ್ತರಿಸಿ ತಂದು ಮಾರಾಟ ಮಾಡಿ ಹಣವನ್ನು ಸಂಗ್ರಹಿಸುತ್ತಾರೆ. ನಾನು ಕ್ಷೇತ್ರ ಕಾರ್ಯ ಮಾಡಿದ ಸಂದರ್ಭದಲ್ಲಿ ಸಾಯಿಬಾಬ ಎಂಬ ವ್ಯಕ್ತಿ ಮಾಹಿತಿ ನೀಡಿದ್ದರು.'[೨]

ಅಲೆಮಾರಿಗಳಾದ ಸುಡುಗಾಡು ಸಿದ್ಧರಿಗೆ ಹೊಲ ಗದ್ದೆಗಳಾಗಲಿ, ಕೃಷಿ ಭೂಮಿಗಳಾಗಲಿ ಇಲ್ಲ. ಇತ್ತೀಚಿನ ದಿವಸಗಳಲ್ಲಿ ಭಿಕ್ಷೆಯಿಂದ ಹೊಟ್ಟೆ ತುಂಬಿಕೊಳ್ಳಲು ಸಾಧ್ಯವಾಗದೇ ಇರುವುದರಿಂದ ಸುಡುಗಾಡು ಸಿದ್ಧರು ಸಮೀಪದ ಪಟ್ಟಣಗಳಿಗೆ ವಲಸೆ ಹೋಗುತ್ತಿದ್ದಾರೆ. ಅಲ್ಲಿ ಅವರ ಹೆಂಗಸರು ಕೂಲಿಮಾಡಿ ಸಂಸಾರ ಸಾಗಿಸುತ್ತಿರುವುದು ಕಂಡುಬರುತ್ತಿದೆ. ಗಂಡಸರು ಸಿದ್ಧರ ವೇಷವನ್ನು ಧರಿಸಿ ಭಿಕ್ಷಾವೃತ್ತಿಗೆ ಅಂಟಿಕೊಂಡಿದ್ದಾರೆ. ಕುರಿ–ಆಡು, ಆಕಳುಗಳನ್ನು ಹೆಂಗಸರು ಕಾಯ್ದುಕೊಂಡು ಬರುತ್ತಾರೆ. ಸೋಮಾರಿಗಳಿಗೆ ಅವರ ಸಮಾಜ ಕೀಳಾಗಿ ಕಾಣುತ್ತದೆ. ಅಂಥವರನ್ನು ಗುರುತಿಸಿ ಭಿಕ್ಷಾವೃತ್ತಿಗೆ ಹಚ್ಚುತ್ತದೆ. ಇಷ್ಟಾದರೂ ವ್ಯಕ್ತಿ ಸೋಮಾರಿಯಾಗಲು ಪ್ರಾರಂಭಿಸಿದರೆ ತಂದೆ ತಾಯಿ ಅವನನ್ನು ಗುಡಿಸಲಿನಿಂದ ಹೊರಹಾಕುತ್ತಾರೆ. ಹೀಗಾಗಿ ಪ್ರತಿಯೊಬ್ಬರು ಯಾವುದಾದರೂ ಒಂದು ಕೆಲಸದಲ್ಲಿ ನಿರತರಾಗಿರುವುದು ಕಂಡುಬರುತ್ತದೆ. ಸಾಮಾನ್ಯವಾಗಿ ತಂದೆ ಮಾಡುವ ವೃತ್ತಿಯನ್ನೇ ಮಕ್ಕಳು ಮುಂದುವರಿಸುತ್ತಾರೆ. ಎಲ್ಲರೂ ಹತ್ತಿರದಲ್ಲಿಯೇ ಗುಡಿಸಲುಗಳನ್ನು ಹಾಕಿಕೊಂಡು ಜೀವಿಸುತ್ತಾರೆ. ಯಾವ ಗುಡಿಸಲಿನವರೂ ಉಪವಾಸ ಉಳಿಯದಂತೆ ಸಹಕರಿಸುತ್ತಾರೆ. ತಮ್ಮಲ್ಲಿ ಯಾರಿಗಾದರೂ ಜ್ವರ ಆಪತ್ತು ಸಂಭವಿಸಿದಾಗ ಬಹು ಬೇಗ ಅವರಿಗೆ ಔಷಧ ಗಿಡಮೂಲಿಕೆಗಳನ್ನು ಕೊಟ್ಟು ಗುಣಪಡಿಸುತ್ತಾರೆ. ಸರಕಾರಿ ಆಸ್ಪತ್ರೆಗೆ ಹೋಗುವುದಿಲ್ಲ. ಮನೆಯ ಹಿರಿಯರು ಬಾಣಂತಿಗೆ ಕಠಿಣ ಕೆಲಸಗಳು ಹಚ್ಚುವುದಿಲ್ಲ. ಅದೇ ರೀತಿಯಾಗಿ ಮಕ್ಕಳಿಗೆ ಹತ್ತು ವರ್ಷಗಳು ತುಂಬುವವರೆಗೂ ಕೆಲಸಕ್ಕೆ ಹಚ್ಚದೆ ಬೆಳೆಸುತ್ತಾರೆ. ಬಡವರಾದ ಸುಡುಗಾಡು ಸಿದ್ಧರು ಯಾವತ್ತೂ ಹಣ ದವಸ ಧಾನ್ಯವನ್ನು ಸಂಗ್ರಹಿಸಿ ಇಟ್ಟುಕೊಳ್ಳಲು ಮನಸ್ಸು ಮಾಡಿದವರಲ್ಲ. ಹೆಚ್ಚೆಂದರೆ ಸಂಗ್ರಹಿಸಿದ ಹಣವನ್ನು ದೇವತಾಕಾರ್ಯಕ್ಕೆ ಅಥವಾ ನ್ಯಾಯ ನಿರ್ಣಯಕ್ಕೆ ಖರ್ಚು ಮಾಡುತ್ತಾರೆ. ಆಸ್ತಿ–ಪಾಸ್ತಿ ಇಲ್ಲದ ಅವರಿಗೆ ಸಂಪಾದನೆ ಮಾಡುವ ಯಾವ ಮೂಲಗಳು ಇಲ್ಲ. ಪೂರ್ವಜರಿಂದ ಬಂದಿರುವ ವೃತ್ತಿಯನ್ನು ಬಿಡಲು ಮನಸ್ಸು ಆಗದೇ ಇರುವುದರಿಂದ ಅನೇಕ ಸಮಸ್ಯೆಗಳನ್ನು ಅವರು ಎದುರಿಸುತ್ತಿದ್ದಾರೆ.'

ಸುಡುಗಾಡು ಸಿದ್ಧರು ಕೈಚಳಕದ ವಿದ್ಯೆಯನ್ನು ಪ್ರದರ್ಶಿಸಿ ಜನರಿಂದ ಭಿಕ್ಷೆ ಪಡೆಯುವರು. ಕ್ರಮೇಣವಾಗಿ ಇವರು ತಮ್ಮ ಕುಲಕಸುಬು ಸುಡುಗಾಡು ಸಿದ್ಧ ಹಾಗೂ ನಿರಂಜಯ್ಯನ ಕಾಯಕವನ್ನು ಕಡಿಮೆಗೊಳಿಸಿದ್ದಾರೆ. ಕಾರಣ ಈ ವೃತ್ತಿಯವರನ್ನು ಇತರೆ ಸಮುದಾಯದವರು ಕೀಳಾಗಿ ನೋಡುತ್ತಿದ್ದಾರೆ. ಹೀಗಾಗಿ ಇಂದಿನ ಪೀಳಿಗೆಯು ಈ ವೃತ್ತಿಯನ್ನು ಮಾಡಲು ಹಿಂಜರಿಯುತ್ತಿದೆ. ಊರುಗಳನ್ನು ಅಲೆದಾಡುವುದನ್ನು ನಿಲ್ಲಿಸಿ ತಮಗೆ ಅನುಕೂಲವಾದ ಗ್ರಾಮಗಳನ್ನು ಗುರುತಿಸಿಕೊಂಡು ಪುರುಷರು ಕೂಲಿ ಕೆಲಸಗಳಿಗೆ ಹೋಗುತ್ತಿದ್ದಾರೆ. ಮತ್ತು ಹೆಣ್ಣು ಮಕ್ಕಳು ಚಾಪೆ ಹೆಣೆಯುವುದು, ಸಣ್ಣಪುಟ್ಟ ವ್ಯಾಪಾರ ಮಾಡಿಕೊಂಡು ತಮ್ಮ ಹೊಟ್ಟೆಯ ತುಂಬಿಸಿಕೊಳ್ಳುತ್ತಿದ್ದಾರೆ. ಹೀಗಾಗಿ ಇವರ ಕುಟುಂಬಗಳ ಆರ್ಥಿಕ ಪರಿಸ್ಥಿತಿ ಬಹು ದುಸ್ತರವಾಗಿದೆ. ಇನ್ನು ಅನೇಕ ಕುಟುಂಬಗಳು ಗುಡಾರದಲ್ಲಿ ಜೀವನ ಕಳೆಯುತ್ತಿವೆ. ಮತ್ತು

ಜೀವನೋಪಾಯಕ್ಕಾಗಿ ಬೇರೆ ವೃತ್ತಿಗಳನ್ನು ಕೈಗೊಂಡು ಕುಟುಂಬಗಳನ್ನು ಸಲಹುತ್ತಿದ್ದಾರೆ. ಇವರಿಗೆ ಸಾಮಾಜಿಕ ಆರ್ಥಿಕ ಭದ್ರತೆ ಇರುವುದಿಲ್ಲ. ಒಟ್ಟಾರೆಯಾಗಿ ಇವರ ಬದುಕು ಅತಂತ್ರ ಸ್ಥಿತಿಯಲ್ಲಿದೆ.

ಇತ್ತೀಚೆಗೆ ಸರ್ಕಾರದಿಂದ ಕೆಲವು ಕುಟುಂಬಗಳು ಆಶ್ರಯ ಮನೆಗಳನ್ನು ಹೊಂದಿ ಕೃಷಿ ಕೂಲಿ ಕೆಲಸವನ್ನು ಮಾಡುತ್ತಿದ್ದಾರೆ. ಹಾಗೆಯೇ ಸರ್ಕಾರದ ನೆರವಿನಿಂದ ಬ್ಯಾಂಕುಗಳಿಂದ ಸಣ್ಣ ಪ್ರಮಾಣದ ಸಾಲ ಪಡೆದು ಕುರಿ, ಕೋಳಿ, ಮೊಲ ಸಾಕಾಣಿಕೆ ಮತ್ತು ಪಶುಗಳನ್ನು ಹೊಂದಿ ಹೈನುಗಾರಿಕೆ ಮಾಡುತ್ತಿವೆ. ಅಲ್ಲಲ್ಲಿ ತಮ್ಮ ಮಕ್ಕಳ ಶಿಕ್ಷಣ ಕಲಿಯಲು ಕಳುಹಿಸುತ್ತಿದ್ದಾರೆ. ಇವರು ನಾಳೆಯ ಬದುಕಿಗಾಗಿ ಗಂಭೀರವಾಗಿ ಚಿಂತೆ ಮಾಡುವುದಿಲ್ಲ.

ಶೈಕ್ಷಣಿಕ ಸ್ಥಿತಿಗತಿ:

'ಸುಡುಗಾಡು ಸಿದ್ಧರು ವರ್ಷದ ಹನ್ನೆರಡು ತಿಂಗಳುಗಳ ಕಾಲ ಸದಾ ಸಂಚಾರದಲ್ಲಿರುತ್ತಾರೆ. ಭಿಕ್ಷಾಟನೆಯ ಸಂದರ್ಭದಲ್ಲಿ ಮಕ್ಕಳನ್ನು ಜೊತೆಯಲ್ಲಿಯೇ ಕರೆದುಕೊಂಡು ಹೋಗುವುದರಿಂದ ತಂದೆ ಮಾಡುವ ಭಿಕ್ಷಾಟನೆಯನ್ನೇ ಮಕ್ಕಳು ಸಾಗುತ್ತಿರುವುದು ಕಂಡು ಬರುತ್ತದೆ. ಆದ್ದರಿಂದ ಕಡು ಬಡವರಾದ ಸುಡುಗಾಡು ಸಿದ್ಧರ ಮೇಲೆ ಶಿಕ್ಷಣದ ಪ್ರಭಾವ ಅಷ್ಟಾಗಿ ಆಗಿಲ್ಲವೆಂದೇ ಹೇಳಬೇಕು. ಆಶಿಕ್ಷಿತರಾದ ಸುಡುಗಾಡು ಸಿದ್ಧರು ಒಂದು ಕಡೆಗೆ ಖಾಯಂ ಗುಡಿಸಲುಗಳನ್ನು ಹಾಕಿಕೊಂಡು ಜೀವಿಸುವುದಿಲ್ಲ.'[೩]

'ಪ್ರಾಚೀನ ಕಾಲದಿಂದಲೂ ತಮ್ಮ ಹಿಂದಿನವರ ವೃತ್ತಿಯನ್ನೇ ನಂಬಿಕೊಂಡು ಬಂದವರಾಗಿದ್ದಾರೆ. ಆ ವೃತ್ತಿಯನ್ನು ಕೈ ಬಿಟ್ಟರೆ ತಮ್ಮ ಹಿರಿಯರಿಗೆ ದ್ರೋಹ ಮಾಡಿದಂತಾಗುತ್ತದೆನ್ನುತ್ತಾರೆ. ಒಂದು ಕಡೆಗೆ ನೆಲೆಯೂರಿ ನಿಂತುಕೊಳ್ಳದ ಅವರು ಭಿಕ್ಷೆ ಬೇಡಿಕೊಳ್ಳುವುದರಲ್ಲಿಯೇ ನಿರತರಾಗಿದ್ದಾರೆ. ಹೀಗಾಗಿ ಪ್ರತಿಯೊಬ್ಬರಿಗೂ ಕಡ್ಡಾಯ ಶಿಕ್ಷಣ ಸಿಗಬೇಕು ಎಂಬ ಸರಕಾರದ ಘೋಷಣೆ ಇವರಿಗೆ ತಲುಪುತ್ತಿಲ್ಲ. ಅವರಿಗೆ ತಿಳಿದಿರುವಂತೆ. ಹೊಟ್ಟೆಗೆ ಅನ್ನ ಮತ್ತು ಬಟ್ಟೆ, ಮನೆ ಇಲ್ಲದ ಅವರಿಗೆ ಶಿಕ್ಷಣ ಕಲಿಯುವುದು ಕಠಿಣವಾಗಿದೆ. ಒಟ್ಟಾರೆ ಸುಡುಗಾಡು ಸಿದ್ಧರು ಶಿಕ್ಷಣದಿಂದ ಬಹುದೂರ ಉಳಿದವರು. ಕರ್ನಾಟಕ, ಮಹಾರಾಷ್ಟ್ರ, ಆಂಧ್ರ ಪ್ರದೇಶ ಮತ್ತು ಗೋವಾ ರಾಜ್ಯಗಳಲ್ಲಿ ಸುಡುಗಾಡು ಸಿದ್ಧರು ಹೆಚ್ಚಾಗಿದ್ದಾರೆ. ಆಯಾ ರಾಜ್ಯಗಳಲ್ಲಿ ಸಿದ್ಧರು ಭಿಕ್ಷಾ ವೃತ್ತಿಯನ್ನು ಅವಲಿಂಬಿಸಿದ್ದಾರೆ. ಇಲ್ಲಿಯವರೆಗೂ ಅವರು ಶಿಕ್ಷಣವನ್ನು ಕಲಿಯದೆ ಅನಕ್ಷರಸ್ಥರಾಗಿಯೇ ಉಳಿದುಕೊಂಡಿದ್ದಾರೆ. ನಾಲ್ಕು ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿಯ ಸಿದ್ಧರು ಸ್ವಲ್ಪ ಅಕ್ಷರಸ್ಥರಾಗಿದ್ದಾರೆ. ಆದರೂ ಸುಡುಗಾಡು ಸಿದ್ಧರಲ್ಲಿ ಉನ್ನತ ಮಟ್ಟದ ಅಧ್ಯಯನ ಮಾಡದೇ ಇರುವುದು ಅವರು ಶಿಕ್ಷಣ ಕ್ಷೇತ್ರದಲ್ಲಿ ಎಷ್ಟು ಹಿಂದುಳಿದವರೆಂಬುದು ತಿಳಿಯುತ್ತದೆ. ಕರ್ನಾಟಕದಲ್ಲಿ ಶಿವಮೊಗ್ಗ, ಬೆಂಗಳೂರು, ಬೆಳಗಾವಿ, ಧಾರವಾಡ, ಮತ್ತು ಬಿಜಾಪೂರ ಜಿಲ್ಲೆಯಲ್ಲಿ ವಾಸಿಸುವ ಸುಡುಗಾಡು ಸಿದ್ಧರು ಸ್ವಲ್ಪ

ಓದುವುದರಲ್ಲಿ ತೊಡಗಿದ್ದಾರೆ. ಅಲ್ಲಲ್ಲಿ ಅವರ ಸಂಘ ಸಂಸ್ಥೆಗಳು ಶಿಕ್ಷಣ ಸಂಸ್ಥೆಗಳನ್ನು ತೆಗೆದು ಆ ದಿಶೆಯಲ್ಲಿ ಪ್ರಯತ್ನ ಮಾಡುತ್ತಿವೆ. ಆದರೂ ಹೇಳಿಕೊಳ್ಳುವಷ್ಟು ಶಿಕ್ಷಣ ಮಟ್ಟ ಸುಧಾರಿಸಿಲ್ಲ. ಕಲಬುರಗಿ ಸೇಡಂ ತಾಲೂಕು, ರಾಯಚೂರು, ಬಳ್ಳಾರಿ, ಮತ್ತು ಬೀದರ ಜಿಲ್ಲೆಯಲ್ಲಿ ವಾಸಿಸುವ ಸಿದ್ಧರು ಸಂಪೂರ್ಣ ಭಿಕ್ಷೆಯನ್ನೇ ಆಶ್ರಯಿಸಿಕೊಂಡಿದ್ದಾರೆ. ಬೆರಳೆಣಿಕೆಯಷ್ಟು ಜನರು ಪದವಿ ಓದಿ ಮುಗಿಸಿದವರು ದೊರಕುತ್ತಾರೆ. ವಿಜ್ಞಾನ ಮತ್ತು ತಂತ್ರಜ್ಞಾನಗಳಲ್ಲಿ ಅವರು ಇಲ್ಲವೆಂದೇ ಹೇಳಬಹುದು.'

ಅಡಿಟಿಪ್ಪಣಿಗಳು

೧. ಟಿ.ಎಂ.ಭಾಸ್ಕರ್ ಸುಡುಗಾಡು ಸಿದ್ಧರು ಒಂದು ಅಧ್ಯಯನ ಪುಟ ಸಂಖ್ಯೆ–೯೦

೨. ಅದೇ ಪುಟ " " ಪುಟ ಸಂಖ್ಯೆ–೯೩

೩. ಟಿ.ಎಂ.ಭಾಸ್ಕರ್ ಸುಡುಗಾಡು ಸಿದ್ಧರು ಒಂದು ಅಧ್ಯಯನ ಪುಟ ಸಂಖ್ಯೆ–೯೫

❑❑❑

ಅಧ್ಯಾಯ ಏಳು

ಸಮಾರೋಪ

ಅಧ್ಯಾಯ ಏಳು

ಸಮಾರೋಪ

ಈ ಅಧ್ಯಯನಕ್ಕಾಗಿ ಕಲಬುರಗಿ ಜಿಲ್ಲೆಯ ಸೇಡಂ ತಾಲೂಕಿನ ರಾಮಗಡ, ಕಲಕಮರೋಡ, ಬಸವನಗರ, ವೆಂಕಟೇಶನಗರ, ಕೊಡ್ಲದಲ್ಲಿ ವಾಸಿಸುತ್ತಿರುವ ಸುಡುಗಾಡು ಸಿದ್ಧರನ್ನು ಬಳಸಿಕೊಳ್ಳಲಾಗಿದೆ. ಸುಡುಗಾಡು ಸಿದ್ಧರು ಕೃಷಿ ಕೂಲಿ ಮತ್ತು ಸಣ್ಣ ಪ್ರಮಾಣದ ಕೃಷಿಯನ್ನು ಅನುಸರಿಸುವುದರ ಮೂಲಕ ಜೀವನ ರೂಪಿಸಿಕೊಳ್ಳುತ್ತಿದ್ದಾರೆ. ಸುಡುಗಾಡು ಸಿದ್ಧರನ್ನು ನಾಗರಿಕ ಸಮಾಜ ಇಂದೂ ಹೀನಾಯ ಭಾವದಿಂದ ಕಾಣುವುದು ಕಂಡುಬರುತ್ತದೆ.

ಪ್ರತಿಯೊಂದು ಬುಡಕಟ್ಟು ತನ್ನದೇ ಆದ ಪ್ರತ್ಯೇಕ ಸಂಸ್ಕೃತಿಯನ್ನು ಪೋಷಿಸಿಕೊಂಡು ಬರುವ ಹಾಗೆ ಸುಡುಗಾಡು ಸಿದ್ಧರೂ ತಮ್ಮ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದವರಾಗಿದ್ದಾರೆ.

ಸುಡುಗಾಡು ಸಿದ್ಧರ ಜೀವನ ಮತ್ತು ಅವರ ಪರಂಪರೆಯ ಹಿನ್ನೆಲೆಯಲ್ಲಿ ಇಡೀ ಸಮಾಜದ ಸಂಸ್ಕೃತಿಯ ಚಿತ್ರಣವನ್ನು ಕೊಡಲಾಗಿದೆ. ಸಿದ್ಧರ ಸಾಮಾಜಿಕ, ಆರ್ಥಿಕ ಶೈಕ್ಷಣಿಕ ಸ್ಥಿತಿಗತಿಗಳನ್ನು ಕುರಿತು ವಿವರಣೆ ನೀಡಲಾಗಿದ್ದೂ ಈ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಸುಡುಗಾಡು ಸಿದ್ಧರು ತುಂಬ ಹಿಂದುಳಿದ್ದಾರೆಂಬುದನ್ನು ಕಂಡುಕೊಳ್ಳಲಾಗಿದೆ. ಅವರ ಊಟೋಪಚಾರಗಳು, ಕಸುಬು, ವೇಷ-ಭೂಷಣಗಳು- ಹಬ್ಬ-ಹರಿದಿನ ಜಾತ್ರೆ-ಉತ್ಸವ, ಧಾರ್ಮಿಕತೆ ದೇವತಾರಾಧನೆ ಅವುಗಳಿಗೆ ಸಂಬಂಧಿಸಿದಂತೆ. ವಿಧಿ ನಿಷೇಧಗಳನ್ನು ಕುರಿತು ವಿವರವಾಗಿ ಪರಿಶೀಲಿಸಲಾಗಿದೆ. ಸುಡುಗಾಡು ಸಿದ್ಧರಲ್ಲಿ ಪ್ರಮುಖವಾಗಿ ಗೋಲಕುಂಡ ಕಟ್ಟೆ, ಹರಪ್ಪನಳ್ಳಿಯ ಕಟ್ಟೆ, ಗದ್ವಾಲ ಕಟ್ಟೆ ಎಂದು ಮೂರು ಪ್ರಮುಖ ಕಟ್ಟೆಗಳಿದ್ದು ಅವು ತಮ್ಮ ನ್ಯಾಯ ಕಟ್ಟೆಯ ವ್ಯಾಪ್ತಿಯಲ್ಲಿ ಬರುವ ಸಿದ್ಧರ ಸಮಸ್ಯೆಗಳಿಗೆ ಪರಿಹಾರವನ್ನು ಸೂಚಿಸುತ್ತವೆ ಮತ್ತು ಅಪರಾಧಿಗಳಿಗೆ ಉಗ್ರವಾಗಿ ಶಿಕ್ಷಿಸಿ ದಂಡವಿಧಿಸುವುದಲ್ಲದೆ ತಮ್ಮ ಸಾಮಾಜಿಕ ಭದ್ರತೆಗೆ ಎಷ್ಟು ಪಾತ್ರವಾಗಿದೆ, ಎಂಬುದನ್ನು ಸುದೀರ್ಘವಾಗಿ ಕಂಡುಕೊಳ್ಳಲಾಗಿದೆ. ಸುಡುಗಾಡು ಸಿದ್ಧರ ಜನಪದ ವೈದ್ಯ, ಮಾಟ-ಮಂತ್ರ ಯಂತ್ರಗಳಿಗೆ ಸಂಬಂಧಿಸಿದಂತೆ ವಿಷಯವನ್ನು ಕಲೆಹಾಕಲಾಗಿದೆ. ಹಾಗೆಯೇ ಅವರ ಜನಪದ ಸಾಹಿತ್ಯವನ್ನು ಸಂಸ್ಕೃತಿಯ ಹಿನ್ನೆಲೆಯಲ್ಲಿ ಗಮನಿಸಲಾಗಿದೆ.

- ದೇಶಕ್ಕೆ ಸ್ವತಂತ್ರ ಬಂದು ೭೮ ವರ್ಷ ಗತಿಸಿದರೂ ಸುಡುಗಾಡು ಸಿದ್ಧರು ಸ್ಮಶಾನದಲ್ಲಿಯೇ ಜೀವನ ನಡೆಸುತ್ತಿದ್ದಾರೆ ಅವರ ವೃತ್ತಿ ಭಿಕ್ಷಾಟನೆಯಲ್ಲಿಯೆ ತಮ್ಮನ್ನು ತಾವು ತೊಡಗಿಸಿಕೊಂಡಿರುವ ಇವರು ತೀರ ಬಡವರಗಿದ್ದಾರೆ ಇವರ ಬದುಕು ಚಿಂತಾಜನಕವಾಗಿದೆ.
- ಸರಕಾರದಿಂದ ಒದಗುವ ಸವಲತ್ತುಗಳಿಂದ ಸಂಪೂರ್ಣವಾಗಿ ಪಡೆದುಕೊಂಡಿಲ್ಲ.
- ಸುಡುಗಾಡು ಸಿದ್ಧರ ಜನಸಂಖ್ಯೆ ಎಷ್ಟು ಎಂಬುದು ಇಲ್ಲಿಯವರೆಗೂ ತಿಳಿದುಬಂದಿಲ್ಲ.
- ಸುಡುಗಾಡು ಸಿದ್ಧರ ಜನಸಂಖ್ಯೆ ತೀರ ಚಿಕ್ಕ ಪ್ರಮಾಣದಲ್ಲಿದೆ ಎಂದು ಹೇಳಬಹುದು.

ಒಟ್ಟಿನಲ್ಲಿ ಸುಡುಗಾಡು ಸಿದ್ಧರು ನಾಗರಿಕ ಸೌಲಭ್ಯಗಳಿಂದ ತೀರ ವಂಚಿತರಾಗಿರುವ ಬಗ್ಗೆ ಮಾಹಿತಿ ದೊರೆಯುತ್ತದೆ. ಆರ್ಥಿಕ, ಶೈಕ್ಷಣಿಕ, ರಾಜಕೀಯ ಕ್ಷೇತ್ರಗಳು, ಅವರಿಗೆ ಪರಿಚಯವೇ ಇಲ್ಲ ಎಂದು ಹೇಳಬಹುದು.

ಅಧ್ಯಯನದ ಫಲಿತಗಳು

೧. ಸುಡುಗಾಡು ಸಿದ್ಧರು ಬಗ್ಗೆ ನೈಜ ಚಿತ್ರಣ ತಿಳಿಯಬೇಕೆಂದರೆ ಕಲಬುರಗಿ ಜಿಲ್ಲೆ ಸೇಡಂ ತಾಲೂಕಿನ ಕಲಕಮರೋಡ, ರಾಮಗಡ, ಬಸವನಗರ, ಕೋಡ್ಲ, ವೆಂಕಟೇಶನಗರ ಮೂಲಭೂತ ಸೌಲಭ್ಯಗಳಾದ ಸಾರಿಗೆ ರಸ್ತೆ ವ್ಯವಸ್ಥೆ ಇಲ್ಲದಿರುವುದು ಕಂಡುಬರುತ್ತದೆ.

೨. ನನ್ನ ಕ್ಷೇತ್ರಕಾರ್ಯದ ವ್ಯಾಪ್ತಿಗೆ ಬಂದ ಐದು ಆಯ್ದ ನಗರ ಪ್ರದೇಶಗಳ ಕೇತ್ರಕಾರ್ಯದ ಸಂದರ್ಭದಲ್ಲಿ ವೀಕ್ಷಿಸಿದಾಗ ಇಲ್ಲಿ ಗುಡಿಸಲುಗಳು,ಗುಡಾರಗಳು,ಡೇರುಗಳು ಕಂಡುಬರುತ್ತವೆ. ಆದರೆ ನೂರಕ್ಕೆ ಹತ್ತು ಆರ್.ಸಿ.ಸಿ ಮನೆಗಳನ್ನೇ ನಿರ್ಮಿಸಿಕೊಂಡಿರುವುದನ್ನು ಕಾಣಬಹುದು.

೩. ಸರ್ಕಾರದ ಯೋಜನೆಗಳಾದ ವೃದ್ಧಾಪ್ಯ ವೇತನ, ಹಾಗೂ ವಿಧವಾ ವೇತನ, ಸಂಧ್ಯಸುರಕ್ಷ ಯೋಜನೆ, ಅಂಗವಿಕಲರಿಗೆ ಸಹಾಯಧನ, ಇಂತಹ ಸೌಲಭ್ಯಗಳು ಇವರಿಗೆ ದೊರೆಯುತ್ತಿಲ್ಲ ಏಕೆಂದರೆ ಇವರಲ್ಲಿ ಶಿಕ್ಷಣದ ಕೊರತೆ ಇರುವುದರಿಂದ ಇಂತಹ ಯೋಜನೆಗಳಿಂದ ಬಂದ ಮಾಹಿತಿಯನ್ನು ಅರ್ಥ ಮಾಡಿಕೊಳ್ಳಲು ವಿಫಲರಾಗಿದ್ದಾರೆ.

೪. ಪರಂಪರಾಗತವಾಗಿ ಬಂದಿರುವ ಸುಡುಗಾಡು ಸಿದ್ಧರ ಜನಪದಕಲೆ ಮತ್ತು ಜನಪದವೈದ್ಯ ಅಲ್ಲದೆ ಬುಡಕಟ್ಟಿನ ನ್ಯಾಯನಿರ್ಣಯಗಳ ಹಿನ್ನೆಲೆಯಲ್ಲಿ ಅವರ ಸಂಸ್ಕೃತಿಯನ್ನು ರಕ್ಷಿಸುವ ಮತ್ತು ಆ ನಿಟ್ಟಿನಲ್ಲಿ ಪ್ರಯತ್ನಿಸುವ ಕೆಲಸವಾಗಬೇಕು.

೫. ಸುಡುಗಾಡು ಸಿದ್ಧರಿಗೆ ಭೂಮಿಯನ್ನು ಉಳುಮೆ ಮಾಡಲು ಸ್ವಂತ ಜಮೀನು ಇರುವುದಿಲ್ಲ.

೬. ಇವರು ಸಾಕಿರುವ ಕುರಿ ಮೀನು ಕೌಜಗ ಮಾರಾಟ ಮಾಡುವುದಕ್ಕೆ ಉತ್ತಮವಾದ ಮಾರುಕಟ್ಟೆ ವ್ಯವಸ್ಥೆ ಸೌಲಭ್ಯವಿಲ್ಲದೇ ಇರುವುದು.

೭. ಸುಡುಗಾಡು ಸಿದ್ಧರು ಬ್ಯಾಂಕ್‌ಗಳ ಸಾಲ ಸೌಲಭ್ಯಗಳನ್ನು ಪಡೆದುಕೊಳ್ಳದೇ ಹೆಚ್ಚಾಗಿ ಮಧ್ಯವರ್ತಿಗಳಿಂದ ಇಲ್ಲವೇ ಖಾಸಗಿ ಲೇವಾದೇವಿಗಾರರ ಅಥವಾ ಹಣವಂತರಿಂದ ಸಾಲ ಪಡೆದುಕೊಳ್ಳತ್ತಿದ್ದರು. ಆದ್ದರಿಂದ ಇತ್ತೀಚಿಗೆ ಬ್ಯಾಂಕ್‌ಗಳಲ್ಲಿ ಸಾಲವನ್ನು ಪಡೆಯುತ್ತಿರುವುದು ಕಂಡುಬರುತ್ತದೆ.

೮. ಸುಡುಗಾಡು ಸಿದ್ಧರು ಹಲವಾರು ಜಾತಿ ಧರ್ಮಗಳಲ್ಲಿ ಹಂಚಿಹೋಗಿದ್ದಾರೆ.

೯. ಸುಡುಗಾಡು ಸಿದ್ಧರಿಗೆ ಶಿಕ್ಷಣ ಎನ್ನವುದು ಮರೀಚಿಕೆಯಾಗಿತ್ತು. ಇಂದು ಸುಡುಗಾಡು ಸಿದ್ಧರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವ ಪ್ರಯತ್ನ ಮಾಡುತ್ತಿದ್ದಾರೆ. ಅದರೆ ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸುವ ಪ್ರವೃತ್ತಿ ಸಮುದಾಯದಲ್ಲಿ ಈಗಲೂ ಕಂಡುಬರುತ್ತಿದೆ.

೧೦. ಸುಡುಗಾಡು ಸಿದ್ಧರು ಕಡುಬಡತನವನ್ನು ಹೊಂದಿರುವುದರಿಂದ ಹಲವಾರು ಸಮಸ್ಯೆಗಳು ತಾಂಡವವಾಡುತ್ತಿವೆ. ಬಲಿಷ್ಠವಾದ ದೇಹಸಿರಿಯನ್ನು ಹೊಂದಿದ್ದರೂ ಸರಿಯಾದ ಉದ್ಯೋಗವಿಲ್ಲದೆ, ನಿರುದ್ಯೋಗದಿಂದ ಬಳಲುತ್ತಿದ್ದಾರೆ.

೧೧. ಸುಡುಗಾಡು ಸಿದ್ಧರು ತಮ್ಮದೇ ಆದ ವೈದ್ಯ ಪದ್ಧತಿಯ ಮೂಲಕ ಔಷಧಿಯನ್ನು ಕಂಡುಕೊಂಡಿದ್ದಾರೆ. ಮಾನವ, ಪಶು, ಸಸ್ಯ ವೈದ್ಯಕೀಯ ಜ್ಞಾನ ಹೊಂದಿದ್ದಾರೆ. ತೀರಾ ಅನಿವಾರ್ಯವಾದಾಗ ಮಾತ್ರ ಆಸ್ಪತ್ರೆಗಳಿಗೆ ತೆರಳುತ್ತಾರೆ.

೧೨. ಸುಡುಗಾಡು ಸಿದ್ಧರನ್ನು ವೆಂಕಟೇಶ ನಗರದಲ್ಲಿ ಇವರನ್ನು ದಾಸರು ಎಂದು ಕರೆಯುತ್ತಾರೆ.

೧೩. ಸುಡುಗಾಡು ಸಿದ್ಧರು ರಾಜಕೀಯವಾಗಿ ಬಹಳ ಹಿಂದುಳಿದಿದ್ದಾರೆ. ಇವರಿಗೆ ರಾಜಕೀಯದಲ್ಲಿ ವಿಶೇಷ ಪ್ರಾತಿನಿಧ್ಯವನ್ನು ನೀಡಬೇಕಾಗಿದೆ.

೧೪. ಇವರು ಕೃಷಿಗಾಗಿ ಅತಿಕ್ರಮಣ ಮಾಡಿಕೊಂಡು ಭೂಮಿಯನ್ನು ಸಕ್ರಮಗೊಳಿಸಿ, ಸ್ಥಿರವಾಗಿ ಒಂದೆಡೆ ಜೀವನ ರೂಪಿಸಿಕೊಳ್ಳಲು ಸರಕಾರ ಅನುವು ಮಾಡಿಕೊಡಬೇಕಾಗಿದೆ.

❑❑❑

ಅನುಬಂಧಗಳು

* ಪರಾಮರ್ಶನ ಗ್ರಂಥಗಳು
* ಮಾಹಿತಿದಾರರ ಸೂಚಿ
* ನಕ್ಷೆಗಳು
* ಛಾಯಾಚಿತ್ರಗಳು

ಪರಾಮರ್ಶನ ಗ್ರಂಥಗಳು

೧. ಅಕ್ಕಮಹಾದೇವಿ(ಅನು),ಬುಡಕಟ್ಟುನ್ಯಾಯ, ೧೯೮೪, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೨. ಅಂಬಳಿಕೆ ಹಿರಿಯಣ್ಣ, ಬುಡಕಟ್ಟು ಜನರ ಬದಲಾಗುತ್ತಿರುವ ಆರ್ಥಿಕ ಜೀವನ, ಜಾನಪದದ ಕೆಲವು ಅಧ್ಯಯನಗಳು, ೧೯೯೪, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೩. ಖಂಡೋಬ ಪಿ.ಕೆ., ಸುಡುಗಾಡು ಸಿದ್ಧರ ಸಂಸ್ಕೃತಿ, ಬೆಂಗಳೂರು ಕನ್ನಡ ಸಾಹಿತ್ಯ ಅಕಾಡೆಮಿ,೨೦೦೦).

೪. ಖಂಡೋಬ ಪಿ.ಕೆ., ೧೯೯೧. ಕರ್ನಾಟಕದ ಲಂಬಾಣಿಗಳು ಒಂದು ಅಧ್ಯಯನ, ದಿ.ತೇಜಸಿಂಗ್ ರಾಠೋಡ ಮೆಮೋರಿಯಲ್ ಟ್ರಸ್ಟ್, ಕಲಬುರಗಿ.

೫. ಗಂಟಿ ಎಂ.ಎಸ್., ಸುಡುಗಾಡು ಸಿದ್ಧ, ೨೦೦೮, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು

೬. ಗಂಗಾಧರ ದೈವಜ್ಞ, ಬುಡಕಟ್ಟು ಸಮಾಜ ಹುಟ್ಟು ಸಾವಿನ ನಡುವೆ, ೨೦೦೦ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೭. ಚಂದ್ರಶೇಖರ ಸಿ.ಆರ್.,೧೯೮೯ ಭಾನಾಮತಿ: ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಇಂಡಿಯನ್ ಇನ್ಸ್ಟಿಟ್ಯೂಟ ಆಫ್ ಸೈನ್ಸ್ ಆವರಣ ಬೆಂಗಳೂರು.

೮. ಚೆನ್ನಬಸಪ್ಪ ಗೊ.ರು.,೧೯೭೭ ಕರ್ನಾಟಕದ ಜನಪದ ಕಲೆಗಳು ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.

೯. ನಾಯಕ್ ಡಿ.ಬಿ., ಗಿರಿಜನ ಸಿರಿ, ೨೦೦೩ ಪ್ರೊ.ಪಿ.ಕೆ. ಖಂಡೋಬ ಅಭಿನಂದನಾ ಸಮಿತಿ ಕನ್ನಡ ಅಧ್ಯಯನ ಸಂಸ್ಥೆ ಗುಲಬರ್ಗಾ, ವಿಶ್ವವಿದ್ಯಾಲಯ ಗುಲಬರ್ಗಾ

೧೦. ನಾಯಕ ಡಿ.ಬಿ., ೧೯೯೧ ಉತ್ತರ ಕರ್ನಾಟಕದ ಲಂಬಾಣಿ ಜನಪದ ಸಾಹಿತ್ಯ, ಅಪ್ರಕಟಿತ ಮಹಾಪ್ರಬಂಧ ಕಲಬುರಗಿ ವಿಶ್ವವಿದ್ಯಾಲಯ ಕಲಬುರಗಿ

೧೧. ನಂಜಮ್ಮಣಿ.ಎಂ., ೧೯೭೩ ಸಮಾಜಶಾಸ್ತ್ರ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೨. ಪ್ರಭಾಕರ ಎ.ಎಸ್., ಬುಡಕಟ್ಟು ಅಭಿವೃದ್ಧಿ ಮೀಮಾಂಸೆ, ೨೦೦೮ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೩. ಪ್ರಭಾಕರ ಎ.ಎಸ್., ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ೨೦೦೦, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೪. ಪ್ರಭಾಕರ ಎ.ಎಸ್. (ಸಂ)., ಆದಿವಾಸಿ ಆಖ್ಯಾನ, ೨೦೦೬, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ

೧೫. ಬರಗೂರು ರಾಮಚಂದ್ರಪ್ಪ., ಸಂಸ್ಕೃತಿ ಮತ್ತು ಸೃಜನಶೀಲತೆ, ೧೯೯೧ ಜನಸ್ನೇಹ ಪ್ರಕಾಶನ, ವಿಜಯನಗರ ಬೆಂಗಳೂರು

೧೬. ಬಸವರಾಜ ನೆಲ್ಲಿ., ಸುಡುಗಾಡು ಸಿದ್ಧರು ಬೆಂಗಳೂರು: ಐಬಿಎಚ್ ಪ್ರಕಾಶನ, ೧೯೮೪

೧೭. ಬೋರಲಿಂಗಯ್ಯ ಹಿ.ಚಿ., ಕರ್ನಾಟಕ ಜನಪರ ಕಲೆಗಳ ಕೋಶ, ೧೯೯೬, ಪ್ರಸಾರಾಂಗ

೧೮. ಬೋರಲಿಂಗಯ್ಯ ಹಿ.ಚಿ., ೨೦೦೬, ಗಿರಿಜನ ನಾಡಿಗೆ ಪಯಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೧೯. ಭಾಸ್ಕರ್ ಟಿ.ಎಂ., ಸುಡುಗಾಡು ಸಿದ್ಧ ಒಂದು ಸಂಸ್ಕೃತಿ ಅಧ್ಯಯನ, ಗುಲಬರ್ಗಾ ಮರಗು ಪ್ರಕಾಶನ, ೨೦೦೦

೨೦. ಬೋರಲಿಂಗಯ್ಯ ಹಿ.ಚಿ., ಬುಡಕಟ್ಟು ದೈವಾರಾಧನೆ, ೨೦೦೦ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೧. ಮೈತ್ರಿ.ಕೆ.ಎಂ., ಬುಡಕಟ್ಟು ಕುಲಕಸುಬಗಳು, ೨೦೦೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೨. ಲಕ್ಕಪ್ಪ ಗೌಡ ಎಚ್.ಜಿ (ಸಂ)., ಕರ್ನಾಟಕ ಬುಡಕಟ್ಟುಗಳು. ಸಂಪುಟ ೧, ೧೯೯೩ ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ, ಬೆಂಗಳೂರು.

೨೩. ಲಠ್ಠೆ ಎಂ.ಎಸ್ (ಸಂ)., ೧೯೭೬ ಉತ್ತರ ಕರ್ನಾಟಕದ ಒಡಮುಗಳು ರವೀಂದ್ರ ಪ್ರಕಾಶನ, ಕಲಬುರಗಿ.

೨೪. ಶಂಕರನಾರಾಯಣ ತೀ.ನಂ., ೧೯೮೦ ಕಾಡುಗೊಲ್ಲರು ಐ.ಬಿ.ಎಚ್. ಪ್ರಕಾಶನ, ಬೆಂಗಳೂರು

೨೫. ಶಂಕರರಾವ್ ಚ.ನ., ಸಮಾಜಶಾಸ್ತ್ರ ಸಂಪುಟ ೧, ೨೦೦೩ ಜೈಭಾರತ ಪ್ರಕಾಶನ, ಮಂಗಳೂರು

೨೬. ಸಬರದ ಬಸವರಾಜ.,೧೯೯೪ ಜನಪದ ದೇವತೆಗಳು ಮತ್ತು ಶಿಷ್ಟ ದೇವತೆಗಳು, ಜಾನಪದ ಪ್ರಶಸ್ತಿ ಸಮಿತಿ ಕುಂದಾಪುರ.

೨೭. ಸವಿತಾ ನಾಯಕ್., ಬುಡಕಟ್ಟು ಮಹಿಳೆಯರ ಪ್ರದರ್ಶನ ಕಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೮. ಹುಚ್ಚಪ್ಪ ಮಾಸ್ತರ ಎನ್., ಕಾಳೆಗೌಡ ನಾಗವಾರ, ಗಿರಿಜನ ಸಂಸ್ಕೃತಿ, ೨೦೦೦, ಕರ್ನಾಟಕ ಜನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೨೯. ಹಲಸಂಗಿಯ ಚೆನ್ನಮಲ್ಲಪ್ಪ,ಲಿಂಗಪ್ಪ,ರೇವಪ್ಪ ಮತ್ತು ಗೆಳೆಯರು (ಸಂ).,೧೯೯೦, ಗರತಿ ಹಾಡು (ತ್ರಿಪದಿ ಸಂಗ್ರಹ) ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಯಲಯ, ಬೆಂಗಳೂರು.

೩೦. ಹೂಗಾರ ಎಸ್.ಕೆ., ೧೯೭೭ ಕಲೆ ಮತ್ತು ಹಬ್ಬ: ಪಠ್ಯ ಪುಸ್ತಕ ನಿರ್ದೇಶನಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಇಂಗ್ಲೀಷ್ ಪರಮಾರ್ಶನ ಗ್ರಂಥಗಳು

೧. Padmanabha P.,೧೯೭೬ List of Scheduled castes and Scheduled Tribes, Karnatka part-II B (III)

೨. Kittal.,F.೧೯೮೪ A Kannada-English Dictionary, Basel Mission Book and Trust Depository.

೩. Government of Karnataka 1966 Report: of the Second Backword classes Commission Volume-III Bangalore.

೪. " " ೧೯೭೭ Your thinking on Social Welfare and Backward Classes in Karnataka.

೫. ' '' '' '' ೧೯೮೬ A New deal For Backward Classes in Karnataka.

೬. Mandal Commission ೧೯೮೫ Parlimentary Affairs Special Issue,Statewise Number of Back Ward castes/communities in India Volume: ೪.

೭. C.K. Anant Iyer., ೧೯೮೮ The Mysore Castes and Tribes Vol no. IV Reprited, mittal publications, Delhi.

೮. Kalaburagi District At a Glance, ೨೦೧೩-೨೦೧೪

ಮಾಹಿತಿದಾರರ ಸೂಚಿ

ಕ್ರಸಂ	ಹೆಸರು	ವಯಸ್ಸು	ಧರ್ಮ	ವಿಳಾಸ
೧	ಸಾಯಿಬಾಬ	೩೫	ಹಿಂದೂ	ಕಲಕಮ್ಮರೋಡ ಸೇಡಂ
೨	ವೆಂಕಟೇಶ	೨೫	ಹಿಂದೂ	ವಂಕಟೇಶ ನಗರ
೩	ರಾಮಯ್ಯ	೭೦	ಹಿಂದೂ	ವೆಂಕಟೇಶ ನಗರ
೪	ಈರಣ್ಣ	೬೮	ಹಿಂದೂ	ಬಸವನಗರ
೫	ಮಾಣಿಕಪ್ಪ	೭೦	ಹಿಂದೂ	ಬಸವನಗರ
೬	ಪ್ರಭು	೨೩	ಹಿಂದೂ	ಕಲಮ್ಮರೋಡ ಸೇಡಂ
೭	ಹಣಮಂತ	೪೦	ಹಿಂದೂ	ಕೋಡ್ಲ
೮	ಲಕ್ಷ್ಮಣ	೬೦	ಹಿಂದೂ	ರಾಮಗಡ
೯	ಮಲ್ಲೇಶಿ	೩೨	ಹಿಂದೂ	ರಾಮಗಡ
೧೦	ಸೈಬಣ್ಣ	೫೫	ಹಿಂದೂ	ರಾಮಗಡ
೧೧	ಕಮಲಕರ	೫೮	ಹಿಂದೂ	ಕೋಡ್ಲ
೧೨	ಮಾರುತಿ	೫೫	ಹಿಂದೂ	ಕೋಡ್ಲ
೧೩	ಗೋಪಾಲ	೪೫	ಹಿಂದೂ	ಕೋಡ್ಲ
೧೪	ರಾಮಣ್ಣ	೫೮	ಹಿಂದೂ	ಕೋಡ್ಲ
೧೫	ದಶರಥ	೩೦	ಹಿಂದೂ	ವೆಂಕಟೇಶ ನಗರ
೧೬	ಚಂದ್ರಪ್ಪ	೩೧	ಹಿಂದೂ	ವೆಂಕಟೇಶ ನಗರ
೧೭	ನಾಗೇಶ	೪೦	ಹಿಂದೂ	ವೆಂಕಟೇಶ ನಗರ
೧೮	ಬನಪ್ಪ	೩೦	ಹಿಂದೂ	ವೆಂಕಟೇಶ ನಗರ
೧೯	ಹಣಮಂತ	೫೫	ಹಿಂದೂ	ಕಲಕಮ್ಮರೋಡ
೨೦	ಪ್ರಭು	೨೩	ಹಿಂದೂ	ಕಲಮ್ಮರೋಡ


ಸುಡುಗಾಡುಸಿದ್ಧರ ವಾಸಿಸುವ ಜಿಲ್ಲೆಗಳು



ಸಂಕೇತಗಳು

- ■ ಜಿಲ್ಲಾ ಕೇಂದ್ರಗಳು
- ಕ್ಷೇತ್ರಕಾರ್ಯ ಕೈಗೊಂಡ ಸ್ಥಳಗಳು
- ಸುಡುಗಾಡು ಸಿದ್ಧರ ಗುಡಿಸಲುಗಳು.

ಸೇಡಂ ತಾಲೂಕು




ALAND
GULBARGA
CHINCHOLI
AFZALPUR
CHITTAPUR
SEDAM
JEVARGI
YADGIRI
SHAHAPUR
SURAPUR



ಕಾಯಕಕ್ಕೆ ಸಿದ್ಧಗೊಂಡಿರುವ ಸುಡುಗಾಡು ಸಿದ್ಧರು



ಕಾಯಕದಲ್ಲಿ ನಿರತರಾದ ಸುಡುಗಾಡು ಸಿದ್ಧ ಕುಟುಂಬ




ಸುಡುಗಾಡು ಸಿದ್ಧರ ಕೈಚಳಕದ ಆಟ



ಸಂಚಾರದಲ್ಲಿರುವ ಸುಡುಗಾಡು ಸಿದ್ಧರು



ಸುಡುಗಾಡು ಸಿದ್ಧರ ಕುಟುಂಬ



ಸೇಂದಿ ಪೊರಕೆ ಸಿದ್ದಪಡಿಸುತ್ತಿರುವ ಸುಡುಗಾಡು ಸಿದ್ಧ



ಸುಡುಗಾಡು ಸಿದ್ಧರ ಜೋಪಾಡಿಯ ಒಳ ನೋಟ



ಪೊರಕೆ ಹೆಣೆಯುತ್ತಿರುವ ಸುಡುಗಾಡು ಸಿದ್ಧರ ಮಹಿಳೆ



ಸುಡುಗಾಡು ಸಿದ್ಧರ ಮೊಲದ ಬಲೆ



ಸುಡುಗಾಡು ಸಿದ್ಧರ ಮಹಿಳೆ ಮತ್ತು ಕ್ಷೇತ್ರಕಾರ್ಯದಲ್ಲಿ ಮಾಹಿತಿ ಪಡೆಯುತ್ತಿರುವ ಸಂಶೋಧಕ



ಸುಡುಗಾಡು ಸಿದ್ಧರ ಅಡುಗೆ ಕೋಣೆ



ಸುಡುಗಾಡು ಸಿದ್ಧರ ಮಕ್ಕಳು ಗೋಟಿ ಆಡುತ್ತಿರುವುದು



ಸುಡುಗಾಡು ಸಿದ್ಧರ ಮಾರಾಟ ಮಾಡುವ ಗಿಡಮೂಲಿಕೆ ಔಷಧಗಳು




ಸುಡುಗಾಡು ಸಿದ್ಧರು ಜೋಪಾಡಿಗಳ ಬಗ್ಗೆ ಮಹಿತಿ ಪಡೆಯುತ್ತಿರುವುದು



ಸುಡುಗಾಡು ಸಿದ್ಧರ ಪುಸ್ತಕ ವೀಕ್ಷಿಸುತ್ತೀರುವುದು



ಜೋಪಡಿಗಳಲ್ಲಿ ಅಡುಗೆಯಲ್ಲಿ ನಿರತ ಸುಡುಗಾಡು ಸಿದ್ಧ ಕುಟುಂಬ



ಸುಡುಗಾಡು ಸಿದ್ಧರ ಅಂಗಡಿಗಳು



ಸುಡುಗಾಡು ಸಿದ್ಧರ ಪಾನಿಪೂರಿ ಭಂಡಿ



ಸುಡುಗಾಡು ಸಿದ್ಧ ಸಾಯಿಬಾಬ




ಜೋಪಾಡಿ ಮುಂದೆ ಕುಳಿತ್ತಿರುವ ಸುಡುಗಾಡು ಸಿದ್ಧರ ಮಕ್ಕಳು



ಪ್ಲಾಸ್ಟಿಕ್ ಚೀಲದಲ್ಲಿ ಸಂಗ್ರಹಿಸಿರುವ ವೇಸ್ಟ್ ಚೀಲಗಳು



ಸುಡುಗಾಡು ಸಿದ್ಧರು ಮಕ್ಕಳು ಚಕರ್ ಆಡುತ್ತಿರುವುದು



ಪ್ಲಾಸ್ಟಿಕ್ ಬಿಂದಿಗೆಗಳು ಮಾರಾಟ ಮಾಡಲು ಹೊರಾಟ ಬೈಕ್



ಸುಡುಗಾಡು ಸಿದ್ಧ ಮಹಿಳೆಯರು



ಸುಡುಗಾಡು ಸಿದ್ಧರ ಬಳಸುತ್ತಿರುವ ಬಿಂದಿಗೆಗಳು



ರಾಮಗಡ ದಲ್ಲಿರುವ ಸುಡುಗಾಡು ಸಿದ್ಧರು ಹಾಗೂ ಮುಖ್ಯಸ್ಥರು



ವಾಸದ ಜೋಪಾಡಿಗಳ ಮುಂದೆ ಕುಳಿತ್ತಿರುವ ಸುಡುಗಾಡು ಸಿದ್ಧರ ಕುಟುಂಬ



ಬೇಟೆಯ ಸಿದ್ಧತೆಯಲ್ಲಿ ಸುಡುಗಾಡು ಸಿದ್ಧರು


ಬುಡಕಟ್ಟು ಅಧ್ಯಯನ ವಿಭಾಗ